ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

46

ಜುಲೈ 5 ಶನಿವಾರ 2025

₹4

ಸಂಪುಟ: 46 | ಸಂಚಿಕೆ: 79 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com







ಮೈಸೂರು ಮಿತ್ರ

ಶನಿವಾರ 5 ಜುಲೈ 2025

ಜೆಡಿಎಸ್ ಅಧಿಕಾರಕ್ಕೆ ತರುವುದು ನಮ್ಮ ಗುರಿ

- ಮಾಜಿ ಸಚಿವ ಹೆಚ್.ಡಿ.ರೇವಣ್ಣ ಹೇಳಿಕೆ
- ಚಾಮುಂಡೇಶ್ವರಿ ದರ್ಶನ; ಪ್ರಾರ್ಥನೆ



ಎರಡನೇ ಆಷಾಢ ಶುಕ್ರವಾರದಂದು ಮಾಜಿ ಸಚಿವ ಹೆಚ್.ಡಿ.ರೇವಣ್ಣ, ಮಾಜಿ ಮೇಯರ್ ಸಂದೇಶ್‌ಸ್ವಾಮಿ ಅವರೊಂದಿಗೆ ಚಾಮುಂಡೇಶ್ವರಿ ದರ್ಶನ ಪಡೆದರು.

ಮೈಸೂರು, ಜು.4(ಎಂಟಿವೈ)– ಮುಂಬರುವ ದಿನಗಳಲ್ಲಿ ರಾಜ್ಯದಾದ್ಯಂತ ಜೆಡಿಎಸ್ ಪಕ್ಷ ಸಂಘಟನೆ ಮಾಡಿ, ಅಧಿಕಾರಕ್ಕೆ ತರುವ ಗುರಿ ನಮ್ಮದಾಗಿದೆ ಎಂದು ಮಾಜಿ ಸಚಿವ ಹೆಚ್.ಡಿ.ರೇವಣ್ಣ ತಿಳಿಸಿದ್ದಾರೆ.

ಚಾಮುಂಡಿಬೆಟ್ಟಕ್ಕೆ ಆಗಮಿಸಿ ದೇವಿಯ ದರ್ಶನ ಪಡೆದ ಬಳಿಕ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಜೆಡಿಎಸ್ ಪಕ್ಷವನ್ನು ಅಧಿಕಾರಕ್ಕೆ ತರುವುದು ನಮ್ಮ ಗುರಿ. ಇದಕ್ಕಾಗಿ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು, ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರೊಂದಿಗೆ ನಾನು ಪಕ್ಷ ಸಂಘಟನೆ ಮಾಡುತ್ತೇನೆ. ಆ ಮೂಲಕ ಪಕ್ಷವನ್ನು ಅಧಿಕಾರಕ್ಕೆ ತರುವುದಾಗಿ ತಿಳಿಸಿದರು.

ಬಿಜೆಪಿ–ಜೆಡಿಎಸ್ ನಡುವೆ ಸಮನ್ವಯತೆ ಕಾಪಾಡಿ ಕೊಳ್ಳುತ್ತೇವೆ. ಹೊಂದಾಣಿಕೆಯಿಂದ ಚುನಾವಣೆ ಎದುರಿಸುತ್ತೇವೆ. ಸರ್ಕಾರದ ವಿರುದ್ಧ ಹೋರಾಟ ಮುಂದುವರೆಸುತ್ತೇವೆ ಎಂದು ಹೇಳಿದ ಅವರು, ಸರ್ಕಾರದ ನಾಯಕತ್ವ ಬದಲಾವಣೆ ಕುರಿತ ಪ್ರಶ್ನೆಗೆ ಪ್ರತಿಕ್ರಿಯಿಸಲು ನಿರಾಕರಿಸಿದರಲ್ಲದೆ, ಕಾಂಗ್ರೆಸ್‌ನ ಯಾವುದೇ ವಿಚಾರಗಳ ಬಗ್ಗೆ ಮಾತನಾಡುವುದಿಲ್ಲ. ಅದು ನಮ್ಮ ಪಕ್ಷ ಅಲ್ಲ ಎಂದರು.

ಶಾಸಕ ಹರೀಶ್‌ಗೌಡರಿಗೆ ಅಭಿನಂದನೆ...



ಎಂಸಿಡಿಸಿಸಿ ಬ್ಯಾಂಕಿನ ನಿರ್ದೇಶಕ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ತಮ್ಮ ತಂಡವನ್ನು ಗೆಲ್ಲಿಸುವುದರೊಂದಿಗೆ ತಾವು ಸಹ ಭರ್ಜರಿ ಗೆಲುವು ಸಾಧಿಸಿದ ಹುಣಸೂರು ಶಾಸಕ ಜಿ.ಡಿ.ಹರೀಶ್‌ಗೌಡ ಅವರನ್ನು ಶುಕ್ರವಾರ ಅವರ ನಿವಾಸದಲ್ಲಿ ನಮ್ಮೂರು ನಮ್ಮೋರು ಸಮಾಜ ಸೇವಾ ಟ್ರಸ್ಟ್ ವತಿಯಿಂದ ಅಭಿನಂದಿಸಲಾಯಿತು. ಟ್ರಸ್ಟ್ ಅಧ್ಯಕ್ಷ ಬೀಡನಹಳ್ಳಿ ಸತೀಶ್ ಗೌಡ, ಮೈಸೂರು ಹಾಲು ಒಕ್ಕೂಟದ ಮಾಜಿ ಅಧ್ಯಕ್ಷ ಪ್ರಸನ್ನ, ಮೈಸೂರು ಜಿಲ್ಲಾ ಒಕ್ಕಲಿಗರ ಸಂಘದ ಕಾರ್ಯದರ್ಶಿ ಚೇತನ್, ಉದ್ಯಮಿ ಚೇತನ್ ಗೌಡ, ಗೊರೂರು ಶಿವು, ದಂತ ವೈದ್ಯ ಡಾ. ಲೋಕೇಶ್, ಬೋಗಾದಿ ಸತ್ಯ, ಅವಿನಾಶ್, ಪುನೀತ್ ಇತರರು ಹಾಜರಿದ್ದರು.

ಕೆಂಪೇಗೌಡರ ಜಯಂತಿಯನ್ನು ಹಬ್ಬದಂತೆ ಆಚರಿಸಬೇಕು

ವೈದ್ಯ ಸಾಹಿತಿ ಡಾ.ಯೋಗಣ್ಣ ಕರೆ



ಮೈಸೂರಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಘಟಿಕೋತ್ಸವ ಭವನದಲ್ಲಿ ಶುಕ್ರವಾರ ನಡೆದ ನಾಡಪ್ರಭು ಕೆಂಪೇಗೌಡ ಜಯಂತಿ ಸಮಾರಂಭವನ್ನು ಆದಿಚುಂಚನಗಿರಿ ಮಠದ ಕಾರ್ಯದರ್ಶಿ ಶ್ರೀ ಸೋಮೇಶ್ವರನಾಥ ಸ್ವಾಮೀಜಿ ಅವರು ಕೆಂಪೇಗೌಡರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಉದ್ಘಾಟಿಸಿದರು.

ಮೈಸೂರು, ಜು.4(ಬಿಎಲ್‌ಯು)– ರಾಜಧಾನಿ ಬೆಂಗಳೂರು ಕಟ್ಟಿ ಬೆಳೆಸಿದ ಕೆಂಪೇಗೌಡರ ಜಯಂತಿಯನ್ನು ಹಬ್ಬದಂತೆ ಆಚರಣೆ ಮಾಡಬೇಕು ಎಂದು ವೈದ್ಯ ಸಾಹಿತಿ ಡಾ. ಎಸ್.ಪಿ.ಯೋಗಣ್ಣ ಸಲಹೆ ನೀಡಿದರು.

ಮೈಸೂರಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಘಟಿಕೋತ್ಸವ ಭವನದಲ್ಲಿ ಇಂದು ಆಯೋಜಿಸಿದ್ದ ನಾಡ ಪ್ರಭು ಕೆಂಪೇಗೌಡರ ಜಯಂತಿ ಸಮಾರಂಭದಲ್ಲಿ ಮಾತನಾಡಿದ ಅವರು, ಬೆಂಗಳೂರು ಕಟ್ಟಿ ಬೆಳೆಸಿದವರು ನಮ್ಮ ಸಮಾಜದವರು ಎಂದು ಹೇಳಿಕೊಳ್ಳಲು ಹೆಮ್ಮೆಪಡಬೇಕು ಎಂದು ಹೇಳಿದರು.

ಕೆಂಪೇಗೌಡರು ಯಾವುದೇ ಭೇದ–ಭಾವವಿಲ್ಲದೆ ಎಲ್ಲಾ ಮತ ಧರ್ಮದವರನ್ನು ಸಮಾನ ಭಾವದಿಂದ ನೋಡುತ್ತಿದ್ದರು. ವಿಜಯ ನಗರ ಸಾಮ್ರಾಜ್ಯದ ವೈಭವದಂತೆ ಬೆಂಗಳೂರು ನಿರ್ಮಾಣ ಮಾಡಬೇಕೆಂದು ಪಣ ತೊಟ್ಟಿದ್ದರು ಎಂದು ಹೇಳಿದರು.

ಕರ್ನಾಟಕದ ಒಟ್ಟು ಆದಾಯದಲ್ಲಿ ಶೇಕಡ 52ರಷ್ಟು ಆದಾಯ ಬೆಂಗಳೂರು ಒಂದರಿಂದಲೇ ಬರುತ್ತಿದೆ. ಕರ್ನಾಟಕಕ್ಕೆ ಬೆಂಗಳೂರು ಕಾಮಧೇನು ಇದ್ದಂತೆ. ಇಂತಹ ಆದಾಯದ ಮೂಲಕ್ಕೆ ಕಾರಣರಾದ ಕೆಂಪೇ ಗೌಡರ ಕೊಡುಗೆಯನ್ನು ಯಾರೂ ಮರೆಯಬಾರದು ಎಂದು ಡಾ.ಯೋಗಣ್ಣ ಸಲಹೆಯಿತ್ತರು.

ಇದೇ ವೇಳೆ ಮಾತನಾಡಿದ ಆದಿ ಚುಂಚನಗಿರಿ ಮಠದ ಕಾರ್ಯದರ್ಶಿ ಶ್ರೀ ಸೋಮೇಶ್ವರನಾಥ ಸ್ವಾಮೀಜಿ ಅವರು, ಕೆಂಪೇಗೌಡರು ದೂರದೃಷ್ಟಿ ಹೊಂದುವ ಮೂಲಕ ಬೆಂಗಳೂರಿನಲ್ಲಿ ಹಲವು ಅಭಿವೃದ್ಧಿ ಕಾರ್ಯಗಳನ್ನು ಸಾಕಾರಗೊಳಿಸಿದರು. ಗವಿ ಗಂಗಾಧರೇಶ್ವರ ದೇವಸ್ಥಾನ, ಬಸವೇಶ್ವರ ದೇವಸ್ಥಾನ, ದೊಡ್ಡ ಗಣೇಶ ದೇವಸ್ಥಾನ, ಹನುಮಂತ ಗುಡಿ ಸೇರಿದಂತೆ ಹಲವು ದೇವಾಲಯಗಳನ್ನು ನಿರ್ಮಾಣ ಮಾಡಿ ಧಾರ್ಮಿಕತೆ ಹಾಗೂ ಸಂಸ್ಕೃತಿಗೆ ಒತ್ತು ನೀಡಿದ್ದರು ಎಂದರು.

ನಂತರ ಮಾತನಾಡಿದ ಶಾಸಕ ಕೆ.ಹರೀಶ್ ಗೌಡ ಅವರು, ನಮ್ಮಲ್ಲಿ ಒಗ್ಗಟ್ಟು ಹಾಗೂ ಸಂಘಟನೆಯ ಕೊರತೆ ಇದೆ. ನಮ್ಮ ಸಮುದಾಯದ ಕೆಳವುಟ್ಟದ ವ್ಯಕ್ತಿ ತೊಂದರೆಗೆ ಸಿಲುಕಿದರೆ ಅವರ ನೆರವಿಗೆ ದಾವಿಸಬೇಕು ಎಂದು ಸಲಹೆ ನೀಡಿದರು.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಶರಣಪ್ಪ ವಿ.ಹಲಸೆ, ಡೀನ್ ಪ್ರೊ.ಎಂ.ರಾಮನಾಥಂ, ಸಂಗೀತ ವಿಶ್ವವಿದ್ಯಾನಿಲಯದ ಕುಲಸಚಿವ ಪ್ರೊ. ಎಂ.ಜಿ.ಮಂಜುನಾಥ್, ಸರ್ಕಾರದ ನಿವೃತ್ತ ವಿಶೇಷ ಕಾರ್ಯದರ್ಶಿ ಡಾ.ಪಿ. ಬೋರೇಗೌಡ, ಪ್ರೊ.ಕೆ.ಎನ್.ನವೀನ್ ಕುಮಾರ್, ನಾಡಪ್ರಭು ಕೆಂಪೇಗೌಡ ಅಧ್ಯಯನ ಮತ್ತು ಸಂಶೋಧನಾ ವಿಸ್ತರಣಾ ಕೇಂದ್ರದ ಸಂಯೋಜನಾಧಿಕಾರಿ ಡಾ.ಸಿ. ರಾಮೇಗೌಡ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಯೂತ್ ಹಾಸ್ಟೆಲ್ ಗಂಗೋತ್ರಿ ಘಟಕದ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ

ಮೈಸೂರು, ಜು. 4– ಮೈಸೂರು ಯೂತ್ ಹಾಸ್ಟೆಲ್ ಗಂಗೋತ್ರಿ ಘಟಕದ 2024–25ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯು ಜು. 13 ರಂದು ಬೆಳಗ್ಗೆ 11 ಗಂಟೆಗೆ ಸರಸ್ವತಿಪುರಂ ತೆಂಗಿನತೋಪಿನಲ್ಲಿರುವ ಸಮುದಾಯ ಭವನದಲ್ಲಿ ಏರ್ಪಡಿಸಲಾಗಿದೆ. ಘಟಕದ ಸರ್ವ ಸದಸ್ಯರೂ ಮಹಾಸಭೆಯಲ್ಲಿ ಪಾಲ್ಗೊಳ್ಳಬೇಕಾಗಿ ಕೋರಲಾಗಿದೆ.

ಆಷಾಢ ಶುಕ್ರವಾರದ ಪೂಜೆ





ಮೈಸೂರಿನ ಆದಿಚುಂಚನಗಿರಿ ರಸ್ತೆಯಲ್ಲಿರುವ 'ಉದ್ಭವ ಬನಶಂಕರಿ' ದೇವಸ್ಥಾನದಲ್ಲಿ ಶುಕ್ರವಾರ ನಡೆದ ಎರಡನೇ ಆಷಾಢ ಶುಕ್ರವಾರದ ಪೂಜೆಯಲ್ಲಿ ಸಾವಿರಾರು ಭಕ್ತರು ಪಾಲ್ಗೊಂಡು, ತಾಯಿ ದರ್ಶನ ಪಡೆದರು.

ನಾಳೆ ಬಿಜೆಪಿ ಕಾರ್ಯಕರ್ತರ ಸಂಘಟನಾತ್ಮಕ ವಿಶೇಷ ಸಭೆ

ಮೈಸೂರು, ಜು.4(ಎಂಟಿವೈ)– ಗ್ರಾಮಾಂತರ ಪ್ರದೇಶದಲ್ಲಿ ಪಕ್ಷ ಸಂಘಟನೆ ಮಾಡಲು ಜು.6ರಂದು ಮಧ್ಯಾಹ್ನ 2 ಗಂಟೆಗೆ ರಾಮಾನುಜ ರಸ್ತೆಯಲ್ಲಿರುವ ರಾಜೇಂದ್ರ ಕಲ್ಯಾಣ ಮಂಟಪದಲ್ಲಿ ಬಿಜೆಪಿ ಕಾರ್ಯಕರ್ತರ ಸಂಘಟನಾತ್ಮಕ ವಿಶೇಷ ಸಭೆ ಆಯೋಜಿಸಲಾಗಿದೆ ಎಂದು ಗ್ರಾಮಾಂತರ ಬಿಜೆಪಿ ಅಧ್ಯಕ್ಷ ಕೆ.ಎನ್.ಸುಬ್ಬಣ್ಣ ತಿಳಿಸಿದ್ದಾರೆ.

ಮೈಸೂರಿನ ಬಿಜೆಪಿ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬಿಜೆಪಿ ರಾಜಾಧ್ಯಕ್ಷ ಬಿ.ವೈ.ವಿಜಯೇಂದ್ರ ನೇತೃತ್ವದಲ್ಲಿ ನಡೆಯುವ ಈ ವಿಶೇಷ ಸಭೆಯಲ್ಲಿ ಬಿಜೆಪಿ ಮುಖಂಡರು, ಸಂಸದರು, ಶಾಸಕರು, ಮಾಜಿ ಶಾಸಕರು, ಮಾಜಿ ಸಚಿವರು ಹಾಗೂ ಪಕ್ಷದ ಮತ್ತು ರಾಜ್ಯ ಮಟ್ಟದ ಪದಾಧಿಕಾರಿಗಳು, ಮಂಡಲ ಅಧ್ಯಕ್ಷರು, ಮಹಾಶಕ್ತಿ ಕೇಂದ್ರದ ಅಧ್ಯಕ್ಷರು, ಬೂತ್ ಮಟ್ಟದ ಅಧ್ಯಕ್ಷರು ಭಾಗವಹಿಸಲಿದ್ದಾರೆ ಎಂದರು.

ಜಿಲ್ಲಾ ಪಂಚಾಯಿತಿ, ತಾಲೂಕು ಪಂಚಾಯಿತಿ ಸೇರಿದಂತೆ ಯಾವುದೇ ಚುನಾವಣೆ ಎದುರಾದರೂ ಎದುರಿಸಲು ನಮ್ಮ ಪಕ್ಷ ಸಿದ್ಧವಾಗಿದೆ. ಪಕ್ಷವನ್ನು ಗಟ್ಟಿಗೊಳಿಸಲು ಹಾಗೂ ಸಂಘಟಿಸುವ ಅವಶ್ಯಕತೆ ಇದೆ. ಹಾಗಾಗಿ ರಾಜ್ಯಾಧ್ಯಕ್ಷರ ಸೂಚನೆಯ ಮೇರೆಗೆ ಈ ಸಭೆಯನ್ನು ಆಯೋಜಿಸಲಾಗಿದೆ ಎಂದು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಕಾಂಪೋಸ್ಟ್ ನಿಗಮದ ಮಾಜಿ ಅಧ್ಯಕ್ಷ ಎಸ್. ಮಹದೇವಯ್ಯ, ಹಿರಿಯ ಮುಖಂಡ ಸುರೇಶ್ ಬಾಬು, ವಕ್ತಾರ ದಯಾನಂದ ಪಟೇಲ್, ಮಾಧ್ಯಮ ಸಂಚಾಲಕ ಮಹದೇವಸ್ವಾಮಿ ಇದ್ದರು

ಶಾಲಿನಿ ರಜನೀಶ್ ವಿರುದ್ಧ ಅವಹೇಳನಾಕಾರಿ ಹೇಳಿಕೆ

ಜು. 8ರವರೆಗೆ ಎಂಎಲ್‌ಸಿ ರವಿಕುಮಾರ್ ಬಂಧಿಸದಂತೆ ಹೈಕೋರ್ಟ್ ಆದೇಶ



ಬೆಂಗಳೂರು, ಜು.4– ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ವಿರುದ್ಧ ವಿಧಾನ ಪರಿಷತ್ ವಿರೋಧ ಪಕ್ಷದ ಮುಖ್ಯ ಸಚೇತಕ ಎನ್.ರವಿಕುಮಾರ್ ನೀಡಿದ್ದಾರೆ ಎನ್ನಲಾದ ಅವಹೇಳನಕಾರಿ ಹೇಳಿಕೆಗೆ ಸಂಬಂಧಿಸಿದಂತೆ ಜುಲೈ 8ರವರೆಗೂ ಅವರನ್ನು ಬಂಧಿಸದಂತೆ ಹೈಕೋರ್ಟ್ ಶುಕ್ರವಾರ ಆದೇಶ ನೀಡಿದೆ.

ಶಾಲಿನಿ ರಜನೀಶ್ ಅವರ ವಿರುದ್ಧ ಅವಹೇಳನಕಾರಿ ಹೇಳಿಕೆಗೆ ಸಂಬಂಧಿಸಿದಂತೆ ಎನ್.ರವಿಕುಮಾರ್ ವಿರುದ್ಧ ವಿಧಾನಸೌಧ ಪೊಲೀಸ್ ಠಾಣೆಯಲ್ಲಿ ಗುರುವಾರ ಎಫ್‌ಐಆರ್ ದಾಖಲಾಗಿತ್ತು. ಜೆಪಿ ನಗರದ ನಂದಾದೀಪ ಮಹಿಳಾ ಸಂಘದ ಅಧ್ಯಕ್ಷೆ ನಾಗರತ್ನ ಅವರು ನೀಡಿದ ದೂರಿನ ಆಧಾರದ ಮೇಲೆ ಪೊಲೀಸರು ಎಫ್‌ಐಆರ್ ದಾಖಲಿಸಿದ್ದರು.

ಈ ಎಫ್‌ಐಆರ್ ಅನ್ನು ಪ್ರಶ್ನಿಸಿ ರವಿಕುಮಾರ್ ಸಲ್ಲಿಸಿದ್ದ ಅರ್ಜಿಯನ್ನು ಇಂದು ವಿಚಾರಣೆ ನಡೆಸಿದ ಹೈಕೋರ್ಟ್ ನ್ಯಾಯಪೀಠ, ಜುಲೈ 8ರವರೆಗೂ ರವಿಕುಮಾರ್ ವಿರುದ್ಧ ಬಲವಂತದ ಕ್ರಮ ಕೈಗೊಳ್ಳದಂತೆ, ಬಂಧಿಸದಂತೆ ಪೊಲೀಸರಿಗೆ ಸೂಚಿಸಿದೆ.

ಅಲ್ಲದೇ ತನಿಖೆಗೆ ಸಹಕರಿಸುವಂತೆ ರವಿಕುಮಾರ್ ಅವರಿಗೆ ಸೂಚಿಸಿದ್ದು, ಮುಂದಿನ ವಿಚಾರಣೆಯನ್ನು ಜುಲೈ 8ಕ್ಕೆ ಮುಂದೂಡಿ ಮಧ್ಯಂತರ ಆದೇಶ ಹೊರಡಿಸಿದೆ

ಚಾಮುಂಡಿಬೆಟ್ಟದಲ್ಲಿ ಪಾರ್ಕಿಂಗ್ ಅವ್ಯವಹಾರ; ಡಿಸಿಪಿಗೆ ದೂರು



ಚಾಮುಂಡಿಬೆಟ್ಟ ಪಾರ್ಕಿಂಗ್ ವ್ಯವಸ್ಥೆಯಲ್ಲಿ ಅವ್ಯವಸ್ಥೆ, ಗೊಂದಲಗಳಿದ್ದು, ಅವ್ಯವಹಾರ ನಡೆಯುತ್ತಿದ್ದು, ಕ್ರಮ ಜರುಗಿಸುವಂತೆ ಜಯ ಕರ್ನಾಟಕ ಸಂಘಟನೆಯ ಜಿಲ್ಲಾಧ್ಯಕ್ಷ ಲಾರಿ ಶ್ರೀನಿವಾಸ್, ನಗರ ಅಧ್ಯಕ್ಷ ಹರ್ಷ, ರಾಜ್ಯ ಸಂಘಟನಾ ಕಾರ್ಯದರ್ಶಿ ವಿಜಯಗೌಡ, ಸಂಜಯ್ ಸಿಂಗ್, ರಾಧಾ ಮಹೇಶ್, ಪ್ರವೀಣ್, ಸೂರ್ಯ, ಮೊನಿಶ್ ಅವರು ಡಿಸಿಪಿ ಬಿಂದುಮಣಿ ಅವರಿಗೆ ಮನವಿ ಸಲ್ಲಿಸಿದರು.

ಸಂದರ್ಶನಕ್ಕೆ ಆಹ್ವಾನ

ಮೈಸೂರು, ಜು.4– ಮೈಸೂರು ವಿಶ್ವವಿದ್ಯಾನಿಲಯದ ಘಟಕ ಕಾಲೇಜುಗಳಲ್ಲಿನ ಸ್ನಾತಕ ವಿಷಯಗಳ (ಖಾಯಂ ಅಧ್ಯಾಪಕರ ಬೋಧನಾ ಕಾರ್ಯಭಾರ ಹೊರತುಪಡಿಸಿ) ಹೆಚ್ಚುವರಿ ಬೋಧನಾ ಕಾರ್ಯಭಾರವನ್ನು ನಿರ್ವಹಿಸಲು ಅತಿಥಿ ಉಪನ್ಯಾಸಕರನ್ನು ಆಹ್ವಾನಿಸುವ ಸಂಬಂಧ ಅರ್ಹ ಅಭ್ಯರ್ಥಿಗಳನ್ನು ಜು.7 ಮತ್ತು 11 ರಿಂದ 12 ರವರೆಗೆ ನಡೆಯಲಿರುವ Walk-in-interview ಗೆ ಆಹ್ವಾನಿಸಲಾಗಿದೆ. ಆಸಕ್ತ ಅಭ್ಯರ್ಥಿಗಳು ವಿವರಗಳನ್ನು ಮತ್ತು ನಿಗದಿತ ಅರ್ಜಿ ನಮೂನೆಗಳನ್ನು ಮೈಸೂರು ವಿಶ್ವವಿದ್ಯಾನಿಲಯದ ವೆಬ್‌ಸೈಟ್ www.uni-mysore.ac.in ನಲ್ಲಿ ಪಡೆಯಬಹುದಾಗಿರುತ್ತದೆ ಎಂದು ಮೈಸೂರು ವಿಶ್ವವಿದ್ಯಾನಿಲಯದ ಕುಲಸಚಿವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಿಧನ


ಟಿ.ಕೆ. ಸುಕುಮಾರನ್



ಮೈಸೂರು, ಜು. 4– ಬಿಎಸ್‌ಎನ್‌ಎಲ್ ನಿವೃತ್ತ ಅಧಿಕಾರಿ ಮತ್ತು ಬೋಗಾದಿಯ ಭೋಗೇಶ್ವರ ಬಡಾವಣೆ ನಿವಾಸಿ ಟಿ.ಕೆ. ಸುಕುಮಾರನ್ (75) ಶುಕ್ರವಾರ ನಿಧನರಾದರು.


ಮೃತರು ಪುತ್ರರಾದ ಸುನೀಲ್ ಕುಮಾರ್ ಮತ್ತು ಡಾ. ಸುಧೀಶ್ ಕುಮಾರ್ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ವಿಜಯನಗರ 4ನೇ ಹಂತದ ಮುಕ್ತಿಧಾಮದಲ್ಲಿ ಇಂದು ಮಧ್ಯಾಹ್ನ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ತಾತಂಡ ಪೂವಯ್ಯ (ಚಿಮ್ಮ)



ಪೊನ್ನಂಪೇಟೆ, ಜು. 4– ಪ್ರಕಾಶ್ ಕೋಚ್ ಬಿಲ್ಡರ್ಸ್‌ನ ಮಾಜಿ ನಿರ್ದೇಶಕರು ಹಾಗೂ ಪೊನ್ನಂಪೇಟೆ ತಾಲೂಕು, ಬೆಕ್ಕೆಸೊಡ್ಲೂರು ಗ್ರಾಮದ ಕಾನೂರು ರಸ್ತೆ ನಿವಾಸಿ ತಾತಂಡ ಪೂವಯ್ಯ (ಚಿಮ್ಮ) ಶುಕ್ರವಾರ ಬೆಳಗ್ಗೆ ನಿಧನರಾದರು. ಅವರಿಗೆ 78 ವರ್ಷ ವಯಸ್ಸಾಗಿತ್ತು. ಮೃತರು ಪತ್ನಿ, ಪುತ್ರಿ, ಅಳಿಯ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ವಿಜಯನಗರ 4ನೇ ಹಂತದ ಮುಕ್ತಿಧಾಮದಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.


ರಾಜಾರಾಧ್ಯರು



ಪಿರಿಯಾಪಟ್ಟಣ, ಜು.4– ತಾಲೂಕಿನ ಮಲಗನಕೆರೆ ಗ್ರಾಮದ ರಾಜಾರಾಧ್ಯರು(70) ಶುಕ್ರವಾರ ನಿಧನರಾದರು.

ಇವರು ಪತ್ನಿ ಜಗದಾಂಭ, ಮೂವರು ಪುತ್ರಿಯರು, ಅಳಿಯಂದಿರು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಶನಿವಾರ ಗ್ರಾಮದ ಜಮೀನಿನಲ್ಲಿ ಅಂತ್ಯ ಸಂಸ್ಕಾರ ನೆರವೇರಿಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಗು.ರಾಮೇಗೌಡ



ತಿ.ನರಸೀಪುರ, ಜು.4– ತಾಲೂಕಿನ ಕನಾಯಕನಹಳ್ಳಿ ಗ್ರಾಮದ ಕಾಂಗ್ರೆಸ್ ಹಿರಿಯ ಮುಖಂಡ ಗು.ರಾಮೇಗೌಡ(73) ಶುಕ್ರವಾರ ಸಂಜೆ ನಿಧನರಾದರು. ಮೃತರು ಸುನೀಲ್ ಬೋಸ್ ಯುವ ಬ್ರಿಗೇಡ್ ಅಧ್ಯಕ್ಷ ಕುಮಾರ್ ರಾಮೇಗೌಡ ಸೇರಿದಂತೆ ಇಬ್ಬರು ಪುತ್ರಿಯರು, ಅಪಾರ ಬಂಧುಗಳನ್ನು ಅಗಲಿದ್ದು, ಅಂತ್ಯಕ್ರಿಯೆ ಸ್ವಗ್ರಾಮ ಕನ್ನಾಯಕನಹಳ್ಳಿಯಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

5.07.2025 ಶನಿವಾರ, ಮಳೆ ನಕ್ಷತ್ರ: ಆರ್ದ್ರಾ, 22.06.2025ರಿಂದ 05.07.2025 ವಿಶ್ವವಸು ನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಆಷಾಢ ಮಾಸ, ಶುಕ್ಲ ಪಕ್ಷ, ತಿಥಿ: ದಶಮಿ, ನಕ್ಷತ್ರ: ಸ್ವಾತಿ, ರಾಹುಕಾಲ: ಬೆಳಗ್ಗೆ 9 ರಿಂದ 10.30ರವರೆಗೆ

- **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ದೇಹ ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ, ಬೆಳಗ್ಗೆ 6.30 ರಿಂದ.
- **ಶ್ರೀ ಚಂದ್ರಮೌಳೀಶ್ವರ ಸ್ವಾಮಿ ದೇವಸ್ಥಾನಂ ಚಾರಿಟಬಲ್ ಟ್ರಸ್ಟ್ :** 83ನೇ ಜಯಂತ್ಯುತ್ಸವ–2025, ಬೆಳಗ್ಗೆ 10.50 ರಿಂದ ಬ್ರಹ್ಮ ರಥೋತ್ಸವ, ಸಂಜೆ 6.30ಕ್ಕೆ ಡೋಲೋತ್ಸವ, ಶಯನೋತ್ಸವ, ಸ್ಥಳ: ಶ್ರೀ ಚಂದ್ರಮೌಳೀಶ್ವರ ಸ್ವಾಮಿ ದೇವಸ್ಥಾನ, ದೇವಸ್ಥಾನದ ರಸ್ತೆ, ವಾಣಿವಿಲಾಸ ಮೊಹಲ್ಲಾ.
- **ಶ್ರೀ ಯದುಗಿರಿ ಯತಿರಾಜ ಮಠ, ಮೈಸೂರು ಶಾಖೆಯ ಶ್ರೀ ಲಕ್ಷ್ಮೀನರಸಿಂಹ ಸ್ವಾಮಿ ದೇವಸ್ಥಾನ :** ಸ್ವಾತಿ ನಕ್ಷತ್ರದ ಪ್ರಯುಕ್ತ ವಿಶೇಷ ಪೂಜೆ, ಬೆಳಿಗ್ಗೆ 8ಕ್ಕೆ ಸಂಕಲ್ಪ, 9ಕ್ಕೆ ಅಭಿಷೇಕ, 10.30ಕ್ಕೆ ಅಲಂಕಾರ, 11.30ಕ್ಕೆ ಮಹಾಮಂಗಳಾರತಿ, ಮಧ್ಯಾಹ್ನ 12.30ಕ್ಕೆ ಶಾತ್ತುಮೊರೈ, 1 ಗಂಟೆಗೆ ತೀರ್ಥ ಪ್ರಸಾದ ವಿನಿಯೋಗ, ಸಂಜೆ 7.30ಕ್ಕೆ ಪ್ರಾಕಾರೋತ್ಸವ, ಸ್ಥಳ: ಶ್ರೀ ಲಕ್ಷ್ಮೀನರಸಿಂಹಸ್ವಾಮಿ ದೇವಸ್ಥಾನ, ಕಾಳಿದಾಸ ರಸ್ತೆ.
- **ಶ್ರೀ ಸತ್ಯಸಾಯಿ ಸೇವಾ ಸಂಘಟನೆಗಳು, ಮೈಸೂರು ಜಿಲ್ಲೆ :** ವಾಹಿನಿ ಮಹೋತ್ಸವ, ಭಗವದ್ಗೀತಾ ಪ್ರದರ್ಶನ, ಸ್ಥಳ: ಶ್ರೀ ಸತ್ಯಸಾಯಿ ಬಾಬಾ ಶಾಲೆ, ಬೃಂದಾವನ ಆಸ್ಪತ್ರೆ ರಸ್ತೆ, ಜಯಲಕ್ಷ್ಮಿಪುರಂ, ಬೆಳಗ್ಗೆ 10 ರಿಂದ.
- **ಶಾರದಾ ವಿಲಾಸ ಫಾರ್ಮಸಿ ಕಾಲೇಜು, ನಿಲಸರಿ ಕ್ಲಿನಿಕಲ್ ರಿಸರ್ಚ್ ಕನ್ಸಲ್ಟೆನ್ಸಿ ಪ್ರೈವೇಟ್ ಲಿಮಿಟೆಡ್ :** ಯುವರ್ ಫ್ಯೂಚರ್ ಇನ್ ಕ್ಲಿನಿಕಲ್ ರಿಸರ್ಚ್: ಎಕ್ಸ್‌ಪ್ಲೋರ್, ಎಂಗೇಜ್, ಎಕ್ಸೆಲ್ ಕುರಿತು ವಿಚಾರ ಸಂಕಿರಣ, ಉದ್ಘಾಟನೆ : ಮೈಸೂರು ವೈದ್ಯ ಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ ಜಿಸಿ ಸದಸ್ಯರು ಹಾಗೂ ಯಶಸ್ವಿನಿ ವೈದ್ಯಕೀಯ ಕೇಂದ್ರದ ಮಾಲೀಕರಾದ ಡಾ. ಎಚ್.ಸುನೀಲ್, ಮುಖ್ಯ ಅತಿಥಿಗಳು : ಶಾರದಾ ವಿಲಾಸ ಶಿಕ್ಷಣ ಸಂಸ್ಥೆಗಳ ಗೌರವ ಕಾರ್ಯ ದರ್ಶಿ ಆರ್. ನರಸಿಂಹ, ಜೆಎಸ್‌ಎಸ್ ವೈದ್ಯಕೀಯ ಕಾಲೇಜಿನ ಸೆಂಟರ್ ಫಾರ್ ಕ್ಲಿನಿಕಲ್ ರಿಸರ್ಚ್ ಎಕ್ಸಲೆನ್ಸ್ ಮುಖ್ಯಸ್ಥ ಡಾ. ಪ್ರತಿಭಾ ಪೆರೇರಾ, ನೀಲಸರಿ ಕ್ಲಿನಿಕಲ್ ರಿಸರ್ಚ್ ಕನ್ಸಲ್ಟೆನ್ಸಿ ಪ್ರೈವೇಟ್ ಲಿಮಿಟೆಡ್ ನಿರ್ದೇಶಕರಾದ ಡಾ. ಲಕ್ಷ್ಮಿ ಆರ್.ಜ್ಯೋತಿನಂಗರಂ ಮತ್ತು ಸ್ಟ್ರಾಟಜಿ ಲೀಡ್ ಪ್ರಾಂಶುಪಾಲರಾದ ಡಾ. ನಂಜರಾಜೇ ಅರಸ್, ಅಧ್ಯಕ್ಷತೆ : ಶಾರದಾ ವಿಲಾಸ ಫಾರ್ಮಸಿ ಕಾಲೇಜಿನ ಪ್ರಾಂಶುಪಾಲ ಡಾ. ಹನುಮಂತ ಚಾರ್ ಜೋಶಿ, ಸ್ಥಳ: ಪ್ರೊ. ಚಿನ್ನಸ್ವಾಮಿ ಶೆಟ್ಟಿ ಸಭಾಂಗಣ, ಬೆಳಗ್ಗೆ 10.30ಕ್ಕೆ.
- **ಕುಂಚಿಟಿಗರ ಸಂಘ :** ಧರ್ಮಪ್ರಕಾಶ ರಾವ್ ಬಹದ್ದೂರ್ ಬನುಮಯ್ಯನವರ 165ನೇ ಜಯಂತ್ಯೋತ್ಸವದ ಪ್ರಯುಕ್ತ ಬನುಮಯ್ಯನವರ ಪುತ್ಥಳಿಗೆ ಪುಷ್ಪಾರ್ಚನೆ, ಆಯುರ್ವೇದ ವೈದ್ಯಕೀಯ ಆಸ್ಪತ್ರೆ ಒಳರೋಗಿಗಳಿಗೆ ಹಣ್ಣು–ಹಂಪಲು ವಿತರಣಾ ಕಾರ್ಯಕ್ರಮ, ಸ್ಥಳ: ಬನುಮಯ್ಯ ಕಾಲೇಜು ಆವರಣ, ಬೆಳಗ್ಗೆ 10.30ಕ್ಕೆ.
- **ಮೈಸೂರು ಲಿಟರರಿ ಫೋರಂ ಚಾರಿಟಬಲ್ ಟ್ರಸ್ಟ್, ಮೈಸೂರು ಬುಕ್ ಕ್ಲಬ್ಸ್ ಚಾರಿಟಬಲ್ ಟ್ರಸ್ಟ್‌ಗಳು :** ಮೈಸೂರು ಸಾಹಿತ್ಯ ಸಂಭ್ರಮ, ಉದ್ಘಾಟನೆ : ಶ್ರೀಮತಿ ಪ್ರಮೋದಾದೇವಿ ಒಡೆಯರ್, ಮುಖ್ಯ ಅತಿಥಿಗಳು : ಪ್ರಹ್ಲಾದ ರಾಮರಾವ್, ಅಂತರರಾಷ್ಟ್ರೀಯ ಬೂಕರ್ ಪ್ರಶಸ್ತಿ ವಿಜೇತರಾದ ಶ್ರೀಮತಿ ಬಾನು ಮುಷ್ತಾಕ್, ಶ್ರೀಮತಿ ದೀಪಾ ಭಾಸ್ತಿ, ಸ್ಥಳ: ಹೋಟೆಲ್ ಸದರನ್ ಸ್ಟಾರ್, ವಿನೋಬಾ ರಸ್ತೆ, ಬೆಳಗ್ಗೆ 10.30 ರಿಂದ.
- **ವಿದ್ಯಾವರ್ಧಕ ಪದವಿಪೂರ್ವ ಕಾಲೇಜು :** ಸೇರ್ಪಡೆ ಮತ್ತು ಸನ್ಮಾನ ಕಾರ್ಯಕ್ರಮ, ಸಾನ್ನಿಧ್ಯ : ಸ್ವಾಮಿ ಯುಕ್ತೇಶಾನಂದಜೀ ಮಹಾರಾಜ್, ಅಧ್ಯಕ್ಷತೆ : ವಿದ್ಯಾವರ್ಧಕ ಸಂಘದ ಅಧ್ಯಕ್ಷ ಗುಂಡಪ್ಪಗೌಡ, ಗೌರವ ಅತಿಥಿಗಳು : ಪಿ. ವಿಶ್ವನಾಥ್, ಶ್ರೀಶೈಲ ರಾಮಣ್ಣವರ್, ಎಸ್. ಶಿವಲಿಂಗಯ್ಯ, ಸ್ಥಳ : ಪಿ.ಎಂ. ಚಿಕ್ಕಬೋರಯ್ಯ ಸಭಾಂಗಣ, ಬೆಳಗ್ಗೆ 10.30ಕ್ಕೆ.
- **ಕಸ್ತೂರಿ ಸಿರಿಗನ್ನಡ ವೇದಿಕೆ, ಕೀರ್ತಿ ಯುವತಿ ಮಹಿಳಾ ಮಂಡಳಿ :** ಆಷಾಢ ಕವಿಗೋಷ್ಠಿ, ಸಾಧಕರಿಗೆ ಪ್ರಶಸ್ತಿ ಪ್ರದಾನ ಸಮಾರಂಭ, ಉದ್ಘಾಟನೆ : ಕರಾಮುವಿವಿ ಸಹಾಯಕ ಪ್ರಾಧ್ಯಾಪಕರಾದ ಡಾ. ಸುಮಿತ್ರ, ಅಧ್ಯಕ್ಷತೆ : ಹಿರಿಯ ನಾಗರೀಕ ಕೇಂದ್ರದ ಮುಖ್ಯಸ್ಥ ಮಲೆಯೂರು ಪ್ರಭುಸ್ವಾಮಿ, ಕವಿಗೋಷ್ಠಿ ಅಧ್ಯಕ್ಷತೆ : ವಚನಕಾರ ಸುರೇಶ ಮಲ್ಲಾಡದ, ಪ್ರಾಸ್ತಾವಿಕ ನುಡಿ : ವೇದಿಕೆ ರಾಜ್ಯಾಧ್ಯಕ್ಷ ಪೋತೇರ ಮಹದೇವು, ಸ್ಥಳ: ಹಿರಿಯ ನಾಗರೀಕರ ಹಗಲು ಯೋಗ ಕ್ಷೇಮ ಕೇಂದ್ರ, ಬೆಳಗ್ಗೆ 11ಕ್ಕೆ.
- **ಶ್ರೀ ಶಿವಯೋಗಿಸ್ವಾಮಿ ಗದ್ದುಗೆ, ಶ್ರೀ ಮನೆ ಮಂಚಮ್ಮ ದೇವಸ್ಥಾನ :** ಶ್ರೀ ಶಿವಯೋಗಿಗಳವರ 78ನೇ ವರ್ಷದ ಸ್ಮರಣೋತ್ಸವ ಕಾರ್ಯಕ್ರಮ, ಸಾನ್ನಿಧ್ಯ : ಶ್ರೀ ನಿಜಗುಣಾನಂದ ಸ್ವಾಮೀಜಿ, ಶ್ರೀ ಶಾಂತವೀರ ಮುರುಘರಾಜೇಂದ್ರ ಸ್ವಾಮೀಜಿ, ಶ್ರೀ ಜ್ಞಾನಪ್ರಕಾಶ ಸ್ವಾಮೀಜಿ, ಉದ್ಘಾಟನೆ : ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ, ಅಧ್ಯಕ್ಷತೆ : ಶಾಸಕ ತನ್ವೀರ್ ಸೇಠ್, ಮುಖ್ಯ ಅತಿಥಿಗಳು : ಸಂಸದರಾದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಸುನೀಲ್ ಬೋಸ್, ಶಾಸಕರಾದ ಎ.ಆರ್. ಕೃಷ್ಣಮೂರ್ತಿ, ದರ್ಶನ್ ಧ್ರುವನಾರಾಯಣ್, ಸ್ಥಳ: ಶ್ರೀ ಶಿವಯೋಗಿಸ್ವಾಮಿ ಗದ್ದುಗೆ, ಶ್ರೀ ಮನೆ ಮಂಚಮ್ಮ ದೇವಸ್ಥಾನ, ಗಾಂಧಿನಗರ, ಸಂಜೆ 4ಕ್ಕೆ.
- **ಕಲಾ ಸುರುಚಿ :** ಕಥೆ ಕೇಳೋಣ ಬನ್ನಿ ಕಾರ್ಯಕ್ರಮ – 887, ಕಥೆ ಹೇಳುವವರು: ಶ್ರೀಮತಿ ಮಂಜುಳ ಎಂ ಸಿ, ಕನ್ನಡ ಭಾಷಾ ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ, ಕೇತುಪುರ, ಮೈಸೂರು, ಸ್ಥಳ: ಸುರುಚಿ ರಂಗಮನೆ, 476, ಚಿತ್ರಭಾನು ರಸ್ತೆ, ಕುವೆಂಪುನಗರ, ಸಂಜೆ 4.30 ರಿಂದ.
- **ಗಾನ ವೈದ್ಯಲೋಕ :** ವೈದ್ಯರ ದಿನಾಚರಣೆ ಪ್ರಯುಕ್ತ ಎಂದೂ ಮರೆಯದ ಹಾಡು ಸಂಗೀತ ಸಂಜೆ ಕಾರ್ಯಕ್ರಮ, ಉದ್ಘಾಟನೆ : ವಿಧಾನ ಪರಿಷತ್ ಸದಸ್ಯ ಡಾ. ಡಿ. ತಿಮ್ಮಯ್ಯ, ವಿಶೇಷ ಆಹ್ವಾನಿತರು : ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಅಧ್ಯಕ್ಷತೆ : ಗಾನ ವೈದ್ಯಲೋಕ ಗೌರವಾಧ್ಯಕ್ಷ ಡಾ. ವೈ.ಡಿ. ರಾಜಣ್ಣ, ಪ್ರಾಸ್ತಾವಿಕ ನುಡಿ : ಗಾನ ವೈದ್ಯಲೋಕ ಅಧ್ಯಕ್ಷ ಡಾ. ಟಿ. ರವಿಕುಮಾರ್, ಸ್ಥಳ: ರಮಾಗೋವಿಂದ ರಂಗ ಮಂದಿರ, ನೃಪತುಂಗ ಶಿಕ್ಷಣ ಸಂಸ್ಥೆ ಆವರಣ, ಸಂಜೆ 5ಕ್ಕೆ
- **ಚಂಪಕ ಎಜುಕೇಶನಲ್ ಅಂಡ್ ಕಲ್ಚರಲ್ ಟ್ರಸ್ಟ್ :** ಚಂಪಕ ರಾಷ್ಟ್ರೀಯ ಕಲಾ ಉತ್ಸವ ಮಾಸಿಕ ಕಾರ್ಯಕ್ರಮ, ಬೆಂಗಳೂರಿನ ಗತಿಶ್ರೀ ಪ್ರದರ್ಶನ ಕಲಾ ಕೇಂದ್ರದ ವಿದುಷಿ ಶ್ರೀಲಕ್ಷ್ಮಿ ತೇಜಸ್ ಮತ್ತು ಶಿಷ್ಯ ವೃಂದ ಭರತನಾಟ್ಯ ಕಾರ್ಯಕ್ರಮ, ಮೈಸೂರು ಮತ್ತು ಬೆಂಗಳೂರು ಕಲ್ಪನಾ ನೃತ್ಯ ಶಾಲೆ ನಿರ್ದೇಶಕರಾದ ವಿದುಷಿ ಭಾರತಿ ವಿಠ್ಠಲ್ ಶಿಷ್ಯಂದಿರಿಂದ ಕಥಕ್ ಕಾರ್ಯಕ್ರಮ, ಮುಖ್ಯ ಅತಿಥಿಗಳು : ಡಾ. ಎಂ.ಎನ್. ರವಿ, ಡಾ. ಸಂಧ್ಯಾ ರವಿ, ಸ್ಥಳ: ಚಂಪಕ ಅಕಾಡೆಮಿಯ ಚಂಪಕ ಸಭಾಂಗಣ, ರಾಮಕೃಷ್ಣನಗರ, ಸಂಜೆ 5ಕ್ಕೆ
- **ಶ್ರೀ ರಾಮಕೃಷ್ಣ ಆಶ್ರಮ :** ಸ್ವಾಮಿ ಮಹಾಮೇಧಾನಂದ ಅವರಿಂದ ಲಿವಿಂಗ್ ಅಟ್ ದಿ ಸೋರ್ಸ್ : ಯೋಗಾ ಟೀಚಿಂಗ್ಸ್ ಆಫ್ ವಿವೇಕಾನಂದ ಕುರಿತು ಪ್ರವಚನ, ಸ್ಥಳ: ಸ್ವಾಮಿ ಶಾಂಭವಾನಂದಜೀ ಸ್ಮಾರಕ ಸಭಾಂಗಣ, ಯಾದವಗಿರಿ, ಸಂಜೆ 6 ರಿಂದ.
- **ಬೆಂಗಳೂರಿನ ರಂಗ ಚಂದಿರ ಟ್ರಸ್ಟ್:** ಸಿ.ಜಿ.ಕೆ ಅವರ ಒಡನಾಡಿ ಬಂಧು ಸಿಜಿಕೆ 75 ಮಾಸದ ನೆನಪು ಸರಣಿ ವಿಶೇಷ ಕಾರ್ಯಕ್ರಮ, ಉಪಸ್ಥಿತರು : ಸಿಜಿಕೆಯ ಒಡನಾಡಿಗಳಾದ ಎಸ್.ಆರ್. ರಮೇಶ, ಜನಾರ್ದನ್ (ಜನ್ನಿ), ಮೈಮ್ ರಮೇಶ್, ಎಚ್. ಬಿ. ರಮೇಶ್ ಕುಮಾರ್, ಎಸ್ ನಾಗರಾಜ್, ಹಿರಿಯ ವಿದ್ವಾಂಸ ಡಾ. ನಾಗಣ್ಣ, ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಎಂ. ಪ್ರಕಾಶಮೂರ್ತಿ, ಸಾಹಿತಿ ಡಾ. ಅಮ್ಮಸಂದ್ರ ಸುರೇಶ್, ಡಾ. ಬೇಲೂರು ರಘುನಂದನ್, ಶ್ರೀಮತಿ ಮಂಜುಳ ಮಾನಸ, ಸ್ಥಳ: ಕಿರು ರಂಗಮಂದಿರ, ಕಲಾಮಂದಿರ, ಸಂಜೆ 6ಕ್ಕೆ.

ಎಂ.ಸಿ. ತಳಲುವಿನಲ್ಲಿಂದು, ಸರಗೂರು ತಾ.


- **ಸರ್ಕಾರಿ ಪ್ರೌಢಶಾಲೆ, ಹಿರಣ್ಮಯಿ ಪ್ರತಿಷ್ಠಾನ ಮತ್ತು ಕಾವೇರಿ ಬಳಗ :** ಪ್ರತಿಭಾ ಪುರಸ್ಕಾರ, ಅಧ್ಯಕ್ಷತೆ : ಮುಖ್ಯ ಶಿಕ್ಷಕ ಎ. ರಾಜು, ಮುಖ್ಯ ಅತಿಥಿಗಳು : ಕ್ಷೇತ್ರ ಶಿಕ್ಷಣಾಧಿಕಾರಿ ಸಿ.ಎನ್. ರಾಜು, ಪುರಸ್ಕಾರ ಪ್ರದಾನ : ವಿಶ್ರಾಂತ ಡಿಡಿಪಿಐ ಶ್ರೀಮತಿ ಮಂಜುಳಾ, ಪ್ರಾಸ್ತಾವಿಕ ನುಡಿ : ಸಹ ಶಿಕ್ಷಕರಾದ ಶ್ರೀಮತಿ ಹೆಚ್.ಎಸ್. ಶಾರದಾ, ಸ್ಥಳ: ಸರ್ಕಾರಿ ಪ್ರೌಢಶಾಲೆ, ಎಂ.ಸಿ. ತಳಲು, ಸರಗೂರು ತಾ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ತತ್ವ ದರ್ಪಣ –ಕೊರಡು ಕೊನರಿಸಿದ ಪಾಶ್ಚಾತ್ಯ ತತ್ವಜ್ಞಾನಿಗಳು, ಪ್ರಸ್ತುತಿ: ಪ್ರೊ.ವಿ.ಎನ್.ಶೇಷಗಿರಿರಾವ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ನಿತಿನ್ ರಾಜಾರಾಮ್ ಶಾಸ್ತ್ರೀ ಹಾಗೂ ಸದಾಶಿವ ಪಾಟೀಲ್, ವ್ಯಾಖ್ಯಾನ–ಡಾ. ಮ. ರಾಮಕೃಷ್ಣ, 6.50 ರೈತರಿಗೆ ಸಲಹೆ, 7.15 ಮನೆಮನೆಯ ಹಣತೆ–ಪ್ರಾಯೋಜಿತ ಸರಣಿ ಕಾರ್ಯಕ್ರಮ, ಪ್ರಾಯೋಜಕರು–ಡಾ. ಬಿ.ಆರ್. ಅಂಬೇಡ್ಕರ್ ಸಂಶೋಧನಾ ಸಂಸ್ಥೆ, ಸಮಾಜ ಕಲ್ಯಾಣ ಇಲಾಖೆ, ಕರ್ನಾಟಕ ಸರ್ಕಾರ, 8.30 ಕನ್ನಡ ಚಿತ್ರಗೀತೆಗಳು, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ–ಎಂ. ಎನ್. ಪುಟ್ಟರಾಜು ಮತ್ತು ಎಂ. ಎನ್. ಗಿರೀಶ್ ದ್ವಂದ್ವ ನಾಗಸ್ವರ ವಾದನ, 10.30 ಹಿಂದಿ ಚಿತ್ರಗೀತೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ನಮ್ಮೂರ್ ಹೆಸರು, ಪ್ರಸ್ತುತಿ : ಡಾ. ಮೈಸೂರು ಉಮೇಶ್

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ, 12.45 ಜನಪದ ಸಂಗೀತ – ಪುಟ್ಟನಿಂಗಮ್ಮ ಮತ್ತು ಸಂಗಡಿಗರಿಂದ ಗಂಗೆ–ಗೌರಿ ಕಥೆ, 1.00 ಪ್ರಗತಿ ಪಥ– ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 2.40 ಹಿಂದಿ ಚಿತ್ರಗೀತೆಗಳು, 3.00 ಹಳ್ಳಿಹಾಡು–ಭಾಗವಹಿಸುತ್ತಾರೆ–ಚಾಮರಾಜನಗರದ ತುಳಸಮ್ಮ ಮತ್ತು ಸಂಗಡಿಗರು, ಪ್ರಸ್ತುತಿ–ಡಾ. ಮೈಸೂರು ಉಮೇಶ್, 3.30 ಮಕ್ಕಳ ಮಂಟಪ, 4.00 ನಾಟಕ, 4.30 ನೆನಪಿನಂಗಳ (ಧ್ವನಿ ಭಂಡಾರದಿಂದ), 6.50 ಕೃಷಿರಂಗ :ಕಿಸಾನ್‌ವಾಣಿ–ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ. ಬಂಡೂರು ಕುರಿ ಸಾಕಾಣಿಕೆ ಕುರಿತು ಸಂವಾದ, ಭಾಗವಹಿಸುತ್ತಾರೆ–ಟಿ. ನರಸೀಪುರ ತಾಲೂಕು ಕಸಬಾ ಹೋಬಳಿ ಡಣಾಯಕನಪುರದ ಕೆಂಪರಾಜು ಮತ್ತು ಎಳೆಗೌಡನ ಹುಂಡಿಯ ಹಿರೇಗೌಡ, ಪ್ರಸ್ತುತಿ: ಎನ್. ಕೇಶವಮೂರ್ತಿ, 8.00 ಸವಿನೆನಪು, 8.30 ಹಿಂದಿ ಚಿತ್ರಗೀತೆಗಳು, 9.30 ಯುವವಾಣಿ, 10.00 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ –ಸ್ವರನ್ಸ್ ಮಿಶ್ರ–ಖಯಾಲ್ ಹಾಡುಗಾರಿಕೆ



ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


ಜುಲೈ 5 ಶನಿವಾರ 2025

ಸಂಪುಟ: 46 | ಸಂಚಿಕೆ: 79 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4



ಐದು ಹುಲಿ ಸಾವು ಪ್ರಕರಣದಲ್ಲಿ ಕರ್ತವ್ಯ ಲೋಪ

ಇಬ್ಬರು ಅರಣ್ಯಾಧಿಕಾರಿಗಳ ಅಮಾನತು; ಡಿಸಿಎಫ್ ವಿರುದ್ಧ ಕ್ರಮಕ್ಕೆ ಕೇಂದ್ರಕ್ಕೆ ಪ್ರಸ್ತಾವನೆ

• ಇಬ್ಬರಿಗೆ ಕಡ್ಡಾಯ ರಜೆ ಶಿಕ್ಷೆ • ಅರಣ್ಯ ಸಚಿವರ ಶಿಫಾರಸ್ಸಿನನ್ವಯ ಕ್ರಮ

ಚಾಮರಾಜನಗರ, ಜು.4(ಸಿದ್ದಲಿಂಗ ಸ್ವಾಮಿ)– ಮಲೆ ಮಹದೇಶ್ವರ ವನ್ಯಧಾಮದ ಹೂಗ್ಯಂ ವನ್ಯಜೀವಿ ವಲಯದಲ್ಲಿ ತಾಯಿ ಹುಲಿ ಮತ್ತು 4 ಹುಲಿ ಮರಿಗಳು ಸಾವಿಗೀಡಾದ ಪ್ರಕರಣಕ್ಕೆ ಸಂಬಂಧಿಸಿದಂತೆ ಕರ್ತವ್ಯ ಲೋಪ ಎಸಗಿದ ಆರೋಪದ ಮೇರೆಗೆ ವಲಯ ಅರಣ್ಯಾಧಿಕಾರಿ (ಆರ್‌ಎಫ್‌ಓ), ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ (ಎಸಿಎಫ್) ಯನ್ನು ಅಮಾನತುಪಡಿಸಿದ್ದು, ಭಾರತೀಯ ಅರಣ್ಯ ಸೇವೆಗೆ (ಐಎಫ್‌ಎಸ್) ಸೇರಿದ ಉಪ ಅರಣ್ಯ ಸಂರಕ್ಷಣಾಧಿಕಾರಿ(ಡಿಸಿಎಫ್) ಮೇಲೆ ಕ್ರಮ ಜರುಗಿಸುವಂತೆ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಅಲ್ಲದೇ ಉಪ ವಲಯ ಅರಣ್ಯಾಧಿಕಾರಿ (ಎಆರ್‌ಎಫ್‌ಓ) ಹಾಗೂ ಗಸ್ತು ಅರಣ್ಯ ಪಾಲಕನನ್ನು ಕಡ್ಡಾಯ ರಜೆ ಮೇಲೆ ಕಳುಹಿಸಲಾಗಿದೆ.

ಡಿಸಿಎಫ್ ವೈ.ಚಕ್ರಪಾಣಿ ಅವರು ಭಾರತೀಯ ಅರಣ್ಯ ಸೇವೆಗೆ ಸೇರಿದವರಾದ್ದರಿಂದ ಅವರ ವಿರುದ್ಧ ರಾಜ್ಯ ಸರ್ಕಾರಕ್ಕೆ ಕ್ರಮ ಕೈಗೊಳ್ಳುವ ಅವಕಾಶವಿಲ್ಲದ ಕಾರಣ ನಿಯಮಾನುಸಾರ ಕ್ರಮ ಕೈಗೊಳ್ಳಲು ಕೇಂದ್ರದ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಗೆ ಪ್ರಸ್ತಾವನೆ ಸಲ್ಲಿಸ ಲಾಗಿದೆ. ಎಸಿಎಫ್ ಗಜಾನನ ಹೆಗಡೆ ಮತ್ತು ಆರ್‌ಎಫ್‌ಓ ಮಾದೇಶ ಅವರನ್ನು ಅರಣ್ಯ, ಜೀವಿ ಪರಿಸ್ಥಿತಿ ಮತ್ತು ಪರಿಸರ ಇಲಾಖೆ ಅಧೀನ ಕಾರ್ಯದರ್ಶಿ ಗೀತಾ ಎಂ.ಪಾಟೀಲ ಅಮಾನತುಪಡಿಸಿದ್ದಾರೆ. ಎಆರ್‌ಎಫ್‌ಓ ವೀರೇಶ್ ಕಟ್ಟಿಮನಿ ಹಾಗೂ ಗಸ್ತು ಅರಣ್ಯ ಪಾಲಕ ಮಧುಸೂದನ್ ಅವರನ್ನು ಚಾಮರಾಜನಗರ ವೃತ್ತದ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಹೀರಾಲಾಲ್ ಕಡ್ಡಾಯ ರಜೆ ಮೇಲೆ ತೆರಳುವಂತೆ ಆದೇಶಿಸಿದ್ದಾರೆ.

ವಿವರ: ಮಲೆ ಮಹದೇಶ್ವರ ವನ್ಯಜೀವಿ ವಿಭಾಗದ ಹೂಗ್ಯಂ ವನ್ಯಜೀವಿ ವಲಯದಲ್ಲಿ ತಾಯಿ ಹುಲಿ ಮತ್ತು 4 ಮರಿ ಹುಲಿಗಳು ಸಾವನ್ನಪ್ಪಿತ್ತು. ಈ ಸಂಬಂಧ ತನಿಖೆ ನಡೆಸಿದಾಗ ಹುಲಿ ದಾಳಿಯಿಂದ ಹಸು ಸಾವನ್ನಪ್ಪಿದ್ದ ಪರಿಣಾಮ ಹಸುವಿನ ಮಾಲೀಕ ಸೇರಿದಂತೆ ಮೂವರು ಹಸುವಿನ ಕಳೇಬರದ ಮೇಲೆ ವಿಷ ಪ್ರಾಶನ ಮಾಡಿದ್ದು, ■ 6ನೇ ಪುಟಕ್ಕೆ


ಡಿಸಿಎಫ್ ಚಕ್ರಪಾಣಿ (ಕ್ರಮಕ್ಕೆ ಕೇಂದ್ರಕ್ಕೆ ಪ್ರಸ್ತಾವನೆ)


ಎಸಿಎಫ್ ಗಜಾನನ ಹೆಗಡೆ (ಅಮಾನತು)


ಆರ್‌ಎಫ್‌ಓ ಮಾದೇಶ್ (ಅಮಾನತು)


ಎಆರ್‌ಎಫ್‌ಓ ವೀರೇಶ್ ಕಟ್ಟಿಮನಿ (ಕಡ್ಡಾಯ ರಜೆ)

ಎರಡನೇ ಆಷಾಢ ಶುಕ್ರವಾರ

ಚಾಮುಂಡಿಬೆಟ್ಟದಲ್ಲಿ ಅಪಾರ ಭಕ್ತರಿಂದ ದೇವಿ ದರ್ಶನ



• ಭಕ್ತರಿಗೆ ಅಚ್ಚುಕಟ್ಟಾದ ವ್ಯವಸ್ಥೆ; ಸಾಂಗವಾಗಿ ಲಭಿಸಿದ ದೇವಿ ದರ್ಶನ ಭಾಗ್ಯ • ಬಣ್ಣ ಬಣ್ಣದ ಹೂಗಳಿಂದ ಕಂಗೊಳಿಸಿದ ದೇವಾಲಯ


ದೇವಿ ದರ್ಶನಕ್ಕೆ ಸಾಲುಗಟ್ಟಿ ನಿಂತಿರುವ ಭಕ್ತ ಸಾಗರ.

ಮೈಸೂರು, ಜು.4(ಎಂಟಿವೈ)– ಆಷಾಢ ಮಾಸದ ಎರಡನೇ ಶುಕ್ರವಾರವಾದ ಇಂದು ಚಾಮುಂಡಿಬೆಟ್ಟದಲ್ಲಿನ ವಿಶೇಷ ಪೂಜಾ ಮಹೋತ್ಸವದಲ್ಲಿ ಅಪಾರ ಸಂಖ್ಯೆಯ ಭಕ್ತರು ಪಾಲ್ಗೊಂಡು ಭಕ್ತಿಭಾವ ಮೆರೆದರು.

ನಾಡದೇವಿಯ ದರ್ಶನ ಪಡೆಯಲು ವಿವಿಧೆಡೆಯಿಂದ ಆಗಮಿಸಿದ್ದ ಅಪಾರ ಸಂಖ್ಯೆಯ ಭಕ್ತರು ಮುಂಜಾನೆ 5 ಗಂಟೆಯಿಂದಲೇ ಚಾಮುಂಡಿ ಬೆಟ್ಟ ತಲುಪಿ ತಾಯಿ ದರ್ಶನಕ್ಕೆ ಹಾತೊರೆದರು. ತುಂತುರು ಮಳೆ, ಚಳಿ, ಗಾಳಿಯನ್ನು ಲೆಕ್ಕಿಸದೇ ಗಂಟೆ ಗಟ್ಟಲೆ ಕಾದು ನಿಂತು ದೇವಿ ದರ್ಶನ ಪಡೆದು ಪುಳಕಿತರಾದರು.

ವಿಶೇಷ ಪೂಜೆ: ಆಷಾಢದ ಹಿನ್ನೆಲೆಯಲ್ಲಿ ಮುಂಜಾನೆ 3.30ರಿಂದ ಚಾಮುಂಡೇಶ್ವರಿಗೆ ಪ್ರಧಾನ ಆಗಮಿಕ ಡಾ. ಎನ್.ಶಶಿಶೇಖರ್ ದೀಕ್ಷಿತ್ ಸಮ್ಮುಖದಲ್ಲಿ ಮಹನ್ಯಾಸ ರುದ್ರಾಭಿಷೇಕ, ರುದ್ರಾಭಿಷೇಕ, ಪುಷ್ಪಾರ್ಚನೆ, ಅಲಂಕಾರ, ಮಂಗಳಾರತಿ ಬೆಳಗಿದ ನಂತರ ಬೆಳಗ್ಗೆ 5.30ರಿಂದ ಭಕ್ತರಿಗೆ ದರ್ಶನಕ್ಕೆ ಅವಕಾಶ ಮಾಡಿಕೊಡಲಾಯಿತು. ಧರ್ಮ ದರ್ಶನ, 300 ರೂ. ಹಾಗೂ 2 ಸಾವಿರ ರೂ. ಟಿಕೆಟ್ ಪಡೆದ ಭಕ್ತರು ಪ್ರತ್ಯೇಕ ಸರದಿ ಸಾಲಿನಲ್ಲಿ ದೇವಾಲಯ ಪ್ರವೇಶಿಸಿ ದರ್ಶನ ಪಡೆದರು.

ಪುಷ್ಪಕಾಶಿ: ಚಾಮುಂಡಿಬೆಟ್ಟದ ದೇವಾಲಯಕ್ಕೆ ನಾನಾ ಬಣ್ಣ ಬಣ್ಣದ ಹೂವುಗಳಿಂದ ಅಲಂಕಾರ ಮಾಡಲಾಗಿತ್ತು. ದೇವಾಲಯದ ಗರ್ಭಗುಡಿ ಮುಂಭಾಗದ ಪ್ರಾಂಗಣ ಹಾಗೂ ಗರುಡ ಕಂಬ ಬಳಿ ಹೂವುಗಳೊಂದಿಗೆ ತೋತಾಪುರಿ ಮಾವಿನ ಹಣ್ಣು, ತಾವರೆ ಹೂವು, ಮುಸುಕಿನ ಜೋಳದ ತೆನೆಯಿಂದಲೂ ಅಲಂಕಾರ ಮಾಡಲಾಗಿದೆ. ದೇವಾಲಯ ಮುಂಭಾಗದ ದ್ವಾರ ದಾಟುತ್ತಿದ್ದಂತೆಯೇ ಹೂವಿನ ಲೋಕವೇ ಕಣ್ಣೆದುರಿಗೆ ಕಾಣುತ್ತದೆ. ದೇವಾಲಯದ ಆವರಣವೇ ಹೂವಿನಿಂದ ■ 6ನೇ ಪುಟಕ್ಕೆ

ಫೀಲ್ಡ್‌ಗೆ ಇಳಿದ ಡಿಸಿಪಿ

ಎರಡು ದಿನದ ಹಿಂದಷ್ಟೇ ಡಿಸಿಪಿಯಾಗಿ ಅಧಿಕಾರ ಸ್ವೀಕರಿಸಿದ ಬಿಂದುಮಣಿ ಅವರು ಇಂದು ಚಾಮುಂಡಿಬೆಟ್ಟದ ಆಷಾಢ ಪೂಜಾ ಮಹೋತ್ಸವದಲ್ಲಿ ಕೈಗೊಂಡಿರುವ ಭದ್ರತಾ ಕಾರ್ಯ ಅವಲೋಕಿಸಲು ಬೆಟ್ಟಕ್ಕೆ ಆಗಮಿಸಿದರು. ವಿಐಪಿ, 2 ಸಾವಿರ ರೂ. ಟಿಕೆಟ್ ಪಡೆದ ಭಕ್ತರಿಗಾಗಿ ವ್ಯವಸ್ಥೆ ಮಾಡಿದ್ದ ಸಾಲಿನಲ್ಲಿ ಬೇರೆಯವರು ನುಗ್ಗುವುದನ್ನು ತಡೆಗಟ್ಟಲು ಡಿಸಿಪಿ ಬಿಂದುಮಣಿ ಖುದ್ದಾಗಿ ಪರಿಶೀಲಿಸಿದರು. ಅಲ್ಲದೆ, ದೇವಾಲಯದ ಬಳಿಯೂ ಯಾವುದೇ ನೂಕು–ನುಗ್ಗಲು ಆಗದಂತೆ ಕೈಗೊಳ್ಳಬೇಕಾದ ಕ್ರಮ ಕುರಿತು ಸಲಹೆ–ಸೂಚನೆ ನೀಡುವ ಮೂಲಕ ಗಮನ ಸೆಳೆದರು.

ಪ್ರಯತ್ನ ವಿಫಲವಾದರೂ ಪ್ರಾರ್ಥನೆ ವಿಫಲವಾಗದು

• ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಒಗ್ಗಟ್ಟಿನ ಪ್ರತಿಕ್ರಿಯೆ • ಚಾಮುಂಡೇಶ್ವರಿ ಮೊರೆ ಹೋಗಿರುವ ಡಿಸಿಎಂ; ಪತ್ನಿಯೊಂದಿಗೆ ದೇವಿ ದರ್ಶನ • ಖರ್ಗೆ ಸಂದೇಶದಂತೆ ನಡೆಯುತ್ತೇನೆ


ಡಿಸಿಎಂ ಡಿ.ಕೆ. ಶಿವಕುಮಾರ್, ಪತ್ನಿ ಉಷಾ ಅವರೊಂದಿಗೆ ಚಾಮುಂಡೇಶ್ವರಿ ತಾಯಿಯ ದರ್ಶನ ಪಡೆದರು.

ಮೈಸೂರು, ಜು.4(ಎಂಟಿವೈ)–ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ನಮಗೆ ಬುದ್ಧಿವಾದ ಹೇಳಿ ಸಂದೇಶ ನೀಡಿದ್ದಾರೆ. ಹೀಗಾಗಿ ನಾವೆಲ್ಲರೂ ಅವರ ಮಾತಿಗೆ ಬದ್ಧರಾಗಿ, ಒಗ್ಗಟ್ಟಾಗಿ ಕೆಲಸ ಮಾಡುತ್ತಿದ್ದೇವೆ ಎಂದು ತಿಳಿಸಿದ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಪ್ರಯತ್ನ ವಿಫಲವಾದರೂ ಪ್ರಾರ್ಥನೆ ವಿಫಲವಾಗುವುದಿಲ್ಲ ಎಂಬ ನಂಬಿಕೆ ನನ್ನದು ಎಂದು ಹೇಳಿದರು.

ಆಷಾಢ ಶುಕ್ರವಾರದ ಪ್ರಯುಕ್ತ ಪತ್ನಿ ಉಷಾ ಅವರೊಂದಿಗೆ ಚಾಮುಂಡಿಬೆಟ್ಟಕ್ಕೆ ಆಗಮಿಸಿ ದೇವಿ ದರ್ಶನ ಪಡೆದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಿಎಂ ರೇಸ್‌ನಿಂದ ಹೊರ ಬಂದಿದ್ದೀರಾ ಎಂಬ ಸುದ್ದಿಗಾರರ ಪ್ರಶ್ನೆಗೆ, ದೇವರ ದರ್ಶನಕ್ಕೆ ದೇವಸ್ಥಾನಕ್ಕೆ ಬಂದಿದ್ದೇನೆ. ರಾಜಕೀಯ ಮಾತನಾಡಲು ಬಂದಿಲ್ಲ. ರಾಜ್ಯಕ್ಕೆ ಒಳ್ಳೆಯದಾಗಲಿ ಎಂದು ಬಂದಿದ್ದೇನೆ ಎಂದರು. ನಮ್ಮ ಪ್ರಯತ್ನಗಳು ವಿಫಲವಾಗಬಹುದು, ■ 6ನೇ ಪುಟಕ್ಕೆ

ಮೈಸೂರು ಮಾನಸಗಂಗೋತ್ರಿಗೆ ಮತ್ತಷ್ಟು ಮೆರಗು

ಹುಣಸೂರು ರಸ್ತೆಯಿಂದ ಮತ್ತೊಂದು ಸುಂದರ ಮಹಾದ್ವಾರ ನಿರ್ಮಾಣ

ಮೈಸೂರು, ಜು.4(ಎಂಕೆ)– ರಾಷ್ಟ್ರಕವಿ ಕುವೆಂಪು ಕನಸಿನ ಮೈಸೂರು ವಿವಿ ಮಾನಸಗಂಗೋತ್ರಿಯ ಸೌಂದರ್ಯ ಹೆಚ್ಚಿಸಲು ಇಂಡೋ–ಸಾರ್ಸೆನಿಕ್ ಶೈಲಿಯ ಮತ್ತೊಂದು ಆಕರ್ಷಕ ವಿನ್ಯಾಸದ ಬೃಹತ್ ದ್ವಾರ ನಿರ್ಮಾಣವಾಗುತ್ತಿದೆ.

ಹಚ್ಚ ಹಸಿರಿನ ಮಾನಸ ಗಂಗೋತ್ರಿಯ ಸುತ್ತಲೂ ಈಗಾಗಲೇ ಮೂರು ಮುಖ್ಯ ದ್ವಾರಗಳಿವೆ. ಇಂಡೋ–ಸಾರ್ಸೆನಿಕ್ ಶೈಲಿಯಲ್ಲಿ ಬೋಗಾದಿ ಮುಖ್ಯ ರಸ್ತೆ, ಎಸ್‌ಜೆಸಿ ಕ್ಯಾಂಪಸ್ ಹಾಗೂ ಬಯಲು ರಂಗಮಂದಿರ ರಸ್ತೆ(ಸೆನೆಟ್ ಹಾಲ್ ಎದುರು) ಮಾರ್ಗದಲ್ಲಿ ಬೃಹತ್ ದ್ವಾರಗಳಿದ್ದು, ಹುಣಸೂರು ಮುಖ್ಯ ರಸ್ತೆ (ಹೋಟೆಲ್ ಗ್ರೀನ್ ಎದುರು)ಯಲ್ಲಿ ಮತ್ತೊಂದು ಇಂಡೋ–ಸಾರ್ಸೆನಿಕ್ ಶೈಲಿಯ ದ್ವಾರವನ್ನು ನಿರ್ಮಿಸಲಾಗುತ್ತಿದೆ.

ಮೈಸೂರು ವಿವಿಯ ಇಂಜಿನಿಯರಿಂಗ್, ಲಾ ಮತ್ತು ಸ್ಕೂಲ್ ಆಫ್ ಪ್ಲಾನಿಂಗ್ ಅಂಡ್ ಆರ್ಕಿಟೆಕ್ಚರ್ ವಿಭಾಗದ ಸಾವಿರಾರು ವಿದ್ಯಾರ್ಥಿಗಳ ಅನುಕೂಲತೆ ಹಾಗೂ ಕ್ಯಾಂಪಸ್‌ನ ಸೌಂದರ್ಯ ಹೆಚ್ಚಿಸುವ ದೃಷ್ಟಿಯಿಂದ ಸುಮಾರು 5 ಕೋಟಿ ರೂ.ವೆಚ್ಚದಲ್ಲಿ ಪಾರಂಪರಿಕ ದ್ವಾರ ನಿರ್ಮಾಣ ಮಾಡಲಾಗುತ್ತಿದೆ.



ಮೈಸೂರು ಹಾಗೂ ಮೈಸೂರು ವಿಶ್ವವಿದ್ಯಾನಿಲಯ ಪರಂಪರೆಗೆ ಅನುಗುಣವಾಗಿ ಮತ್ತೊಂದು ಹೊಸ ದ್ವಾರ ನಿರ್ಮಾಣಕ್ಕೆ ಮೊದಲೇ ನಿರ್ಧರಿಸಲಾಗಿತ್ತು. ಆದರೆ, ಕೆಲ ಕಾರಣಗಳಿಂದ ಕಾಮಗಾರಿ ಆರಂಭವಾಗಿರಲಿಲ್ಲ. ಆಕರ್ಷಕ ವಿನ್ಯಾಸದಲ್ಲಿ ದ್ವಾರ ನಿರ್ಮಾಣವಾಗುತ್ತಿದ್ದು, ಸದ್ಯದಲ್ಲಿಯೇ ಕಾಮಗಾರಿ ಪೂರ್ಣಗೊಂಡು ವಿದ್ಯಾರ್ಥಿಗಳ ಅನುಕೂಲತೆಗೆ ಬಳಕೆಯಾಗಲಿದೆ.

- ಪ್ರೊ.ಎನ್.ಕೆ.ಲೋಕನಾಥ್,
ಕುಲಪತಿ, ಮೈಸೂರು ವಿವಿ

ಮೈಸೂರು ವಿವಿಯ ಈ ಹಿಂದಿನ ಕುಲಪತಿಗಳಾಗಿದ್ದ ಪ್ರೊ.ಜಿ.ಹೇಮಂತ್ ಕುಮಾರ್ ಅವರ ಅವಧಿಯಲ್ಲೇ ಹುಣಸೂರು ರಸ್ತೆ ಕಡೆಗೆ ದ್ವಾರ ನಿರ್ಮಾಣ ಕಾಮಗಾರಿ ಪ್ರಸ್ತಾಪವಾಗಿ ಅನುಮೋದನೆಯನ್ನು ನೀಡಲಾಗಿತ್ತು. ಆದರೆ, ಅನುದಾನದ ಕೊರತೆಯಿಂದಾಗಿ ಸ್ಥಗಿತವಾಗಿದ್ದ ಕಾಮಗಾರಿಯನ್ನು ಪ್ರಸ್ತುತ ಮೈಸೂರು ವಿವಿ ಕುಲಪತಿಗಳಾದ ಪ್ರೊ.ಎನ್.ಕೆ. ಲೋಕನಾಥ್ ಅವರು, ವಿದ್ಯಾರ್ಥಿಗಳ ಅನುಕೂಲತೆ ಗಮನಿಸಿ, ಗುತ್ತಿಗೆದಾರರೊಂದಿಗೆ ಚರ್ಚಿಸಿ ಕಾಮಗಾರಿ ■ 6ನೇ ಪುಟಕ್ಕೆ

ಮೈಸೂರು ವಿವಿಗೆ ಪ್ರೊ.ಕೆ.ಎಸ್.ರಂಗಪ್ಪ ಕೊಡುಗೆ ಇಂದು, ಮುಂದು ಸ್ಮರಣೀಯ...



ಶತಮಾನ ಪೂರೈಸಿರುವ ಮೈಸೂರು ವಿಶ್ವವಿದ್ಯಾನಿಲಯಕ್ಕೆ ಖ್ಯಾತ ವಿಜ್ಞಾನಿಯೂ ಆದ ಮೈಸೂರು ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿ ಪ್ರೊ.ಕೆ.ಎಸ್.ರಂಗಪ್ಪ ಕೊಡುಗೆ ಸ್ಮರಣೀಯ. ಮಾನಸ ಗಂಗೋತ್ರಿ ಕ್ಯಾಂಪಸ್‌ಗೆ ಶೈಕ್ಷಣಿಕವಾಗಿ ಹೊಸ ಕಳೆ ತಂದವರು. ಇಂಡೋ–ಸಾರ್ಸೆನಿಕ್ ಶೈಲಿಯಲ್ಲಿಯೇ ಬೋಗಾದಿ ಮುಖ್ಯ ರಸ್ತೆ ಎಸ್‌ಜೆಸಿ ಕ್ಯಾಂಪಸ್ ಹಾಗೂ ಬಯಲು ರಂಗಮಂದಿರ ರಸ್ತೆ (ಸೆನೆಟ್ ಹಾಲ್ ಎದುರು) ಮಾರ್ಗದಲ್ಲಿ ಬೃಹತ್ ಮಹಾದ್ವಾರಗಳನ್ನು ನಿರ್ಮಿಸಿದ್ದರು. ಜೊತೆಗೆ ಗಡಿಯಾರ ಗೋಪುರ, ಜೋಡಿ ರಸ್ತೆ, ಹಲವು ಕಟ್ಟಡಗಳ ನಿರ್ಮಾಣದ ಮೂಲಕ ಗಂಗೋತ್ರಿಗೆ ಮಾತ್ರವಲ್ಲದೆ ಮುಕ್ತ ಗಂಗೋತ್ರಿಗೂ ಮೆರಗು ನೀಡಿದವರು.

ಭೂ ಸ್ವಾಧೀನ ಸಂಬಂಧ ಕಾನೂನು ತೊಡಕು ನಿವಾರಣೆಗೆ ರೈತರ ಸಭೆ: ಸಿಎಂ ಸಿದ್ದರಾಮಯ್ಯ ಮಾಹಿತಿ

ಬೆಂಗಳೂರು, ಜು.4(ಕೆಎಂಶಿ)– ಭೂಸ್ವಾಧೀನಕ್ಕೆ ಸಂಬಂಧಿಸಿದಂತೆ ಈಗಾಗಲೇ ಅಂತಿಮ ಅಧಿಸೂಚನೆ ಹೊರಡಿಸಿದ್ದು, ಕಾನೂನು ತೊಡಕುಗಳನ್ನು ನಿವಾರಿಸಿ ರೈತರ ಸಭೆ ಕರೆಯಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದಿಲ್ಲಿ ತಿಳಿಸಿದ್ದಾರೆ.

ದೇವನಹಳ್ಳಿ ಚನ್ನರಾಯಪಟ್ಟಣದ ರೈತ ಹೋರಾಟಗಾರರು, ಸ್ಥಳೀಯ ಮುಖಂಡರೊಂದಿಗಿನ ಸಭೆ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಾನೂನು ತೊಡಕು ನಿವಾರಿಸಲು ಹತ್ತು ದಿನಗಳ ಕಾಲಾವಕಾಶ ಬೇಕಿದೆ, ಸೂಕ್ತ ತೀರ್ಮಾನ ಕೈಗೊಂಡು ಈ ತಿಂಗಳ 15ರಂದು ರೈತ ಹೋರಾಟಗಾರರೊಂದಿಗೆ ಸಭೆ ನಡೆಸಲು ತೀರ್ಮಾನಿಸಲಾಗಿದೆ ಎಂದರು.

ಹೃದಯಾಘಾತ: ತಜ್ಞರ ವರದಿ



ಬೆಂಗಳೂರು, ಜು.4– ರಾಜ್ಯದಲ್ಲಿ ಹೃದಯಾಘಾತದಿಂದ ಸರಣಿ ಸಾವು ಸಂಭವಿಸುತ್ತಿರುವುದು ಸರ್ಕಾರದ ನಿದ್ದೆಗೆಡಿಸಿದೆ. ರಾಜ್ಯ ಹಾಗೂ ಹಾಸನದಲ್ಲಿ ಸಂಭವಿಸಿದ ಸರಣಿ ಹೃದಯಾಘಾತ ಪ್ರಕರಣಗಳ ಅಧ್ಯಯನಕ್ಕೆ ಸರ್ಕಾರ ಎರಡು ಪ್ರತ್ಯೇಕ ತಾಂತ್ರಿಕ ಸಮಿತಿ ರಚಿಸಿದೆ. ರಾಜ್ಯದಲ್ಲಿ ಸಂಭವಿಸುತ್ತಿರುವ ಹೃದಯಾಘಾತಕ್ಕೆ ಕಾರಣವೇನು ಎಂಬುವುದು ತಜ್ಞರು ಅಧ್ಯಯನ ನಡೆಸಿ ಸಿದ್ಧಪಡಿಸಿರುವ ವರದಿಯಲ್ಲಿ ಅಡಕವಾಗಿದೆ. ಶುಕ್ರವಾರ ತಾಂತ್ರಿಕ ಸಲಹಾ ಸಮಿತಿ ಸಭೆ ನಡೆದಿದ್ದು, ಹಲವು ವಿಚಾರಗಳು ಚರ್ಚೆಯಾಗಿವೆ.

ವರದಿಯಲ್ಲಿ ಏನಿದೆ: ತಾಂತ್ರಿಕ ಸಲಹಾ ಸಮಿತಿ ಅಧ್ಯಯನ ನಡೆಸಿ ಸಿದ್ಧಪಡಿಸಿರುವ ವರದಿಯಲ್ಲಿ ಹಲವು ಮಹತ್ವದ ವಿಚಾರಗಳು ಅಡಕವಾಗಿವೆ. ವರದಿಯಲ್ಲಿ ಏನಿದೆ ಎಂಬುದು ಮಾಧ್ಯಮಕ್ಕೆ ಮೂಲಗಳಿಂದ ಮಾಹಿತಿ ದೊರೆತಿದೆ. ಕೊರೊನಾ ರೋಗದಿಂದ ಗುಣಮುಖರಾದವರಿಗೆ ಕೊಂಚ ಹೃದಯ ಸಮಸ್ಯೆ ಕಾಡುತ್ತಿದೆ. ಹೃದಯಾಘಾತಕ್ಕೆ ಕೊರೊನಾ ಲಸಿಕೆ ಕಾರಣವಲ್ಲ. ಆದರೆ, ಕೊರೊನಾ ವೈರಸ್ ಕೊಂಚ ಪ್ರಮಾಣದಲ್ಲಿ ಸಮಸ್ಯೆ ಉಂಟು ಮಾಡುತ್ತಿದೆ ಎಂದು ವರದಿಯಲ್ಲಿದೆ.

ವರದಿಯಲ್ಲಿ ಹೃದಯದ ಕಾರ್ಯಕ್ಷಮತೆ ಕಡಿಮೆಯಾಗಿರುವ ಬಗ್ಗೆಯೂ ಉಲ್ಲೇಖ ಮಾಡಲು ತಜ್ಞರು ಮುಂದಾಗಿದ್ದಾರೆ. ಕೊರೊನಾ ಬಂದು ಹೋದ ಮೂರು ವರ್ಷದ ಬಳಿಕ ಹೃದಯ ಸಮಸ್ಯೆ ಕಂಡು ಬರುತ್ತಿದೆ. ಅಲ್ಲದೆ, ಕೊರೊನಾ ರೋಗದಿಂದ ಗುಣಮುಖರಾದವರಿಗೆ ನಿದ್ರಾಹೀನತೆ, ಸುಸ್ತು, ಉಸಿರಾಟದ ಸಮಸ್ಯೆ ಅತಿಯಾದ ಬೊಜ್ಜು ಕಂಡು ಬರುತ್ತಿದ್ದು, ತಜ್ಞರು ಸರ್ಕಾರಕ್ಕೆ ಕೆಲವು ಸಲಹೆಗಳನ್ನು ನೀಡಲು ■ 6ನೇ ಪುಟಕ್ಕೆ

ತಜ್ಞರ ಸಲಹೆಗಳೇನು

- ಸಕ್ಕರೆ ಹಾಗೂ ಉಪ್ಪಿನ ಪ್ರಮಾಣ ಕಡಿಮೆ ಮಾಡಬೇಕು
- ಕನಿಷ್ಠ 6 ಗಂಟೆ ನಿದ್ದೆ ಮಾಡಬೇಕು
- ಮಕ್ಕಳ ಸ್ಕ್ರೀನಿಂಗ್ ಟೈಮ್ ಕಡಿಮೆ ಮಾಡಬೇಕು
- ರಾಜ್ಯದಲ್ಲಿ ಆಗುವ ಪ್ರತಿ ಯುವಕರ ಹಠಾತ್ ಸಾವು ರಿಜಿಸ್ಟರ್ ಆಗಬೇಕು
- ಹೃದಯಾಘಾತದ ಮರಣೋತ್ತರ ಪರೀಕ್ಷೆ ಆಗಬೇಕು
- ಒತ್ತಡ ಕಡಿಮೆ ಮಾಡಬೇಕು
- ದೈಹಿಕ ಚಟುವಟಿಕೆಗಳನ್ನು ಹೆಚ್ಚಿಸಬೇಕು
- ಧೂಮಪಾನ ಕಡ್ಡಾಯವಾಗಿ ಬ್ಯಾನ್ ಮಾಡಬೇಕು
- 18 ವರ್ಷ ಒಳಗಿನವರಿಗೆ ಧೂಮಪಾನ ಮತ್ತು ಮದ್ಯಪಾನ ಮಾರಾಟಕ್ಕೆ ಕಡಿವಾಣ ಹಾಕಬೇಕು.
- ಅಪಾಯಕಾರಿ ಪೇನ್ ಕಿಲ್ಲರ್ ಔಷಧಿಗೆ ಕಡಿವಾಣ ಹಾಕಬೇಕು.
- CPR ತರಬೇತಿ ನೀಡುವ ಯೋಜನೆ ಜಾರಿ ಹಾಗೂ ಜಾಗೃತಿ ಮೂಡಿಸಬೇಕು
- ಸ್ಟೆಮಿ ಯೋಜನೆಯನ್ನು ಎಲ್ಲಾ ತಾಲೂಕುಗಳಿಗೆ ವಿಸ್ತರಣೆ ಮಾಡಬೇಕು.
- ECG, TMT, ECHO, Lipid Profile ಚಿಕಿತ್ಸಾ ಸೌಲಭ್ಯ
- ಎಲ್ಲಾ ತಾಲೂಕು ಆಸ್ಪತ್ರೆಗಳಲ್ಲಿ CT Angiogram ಟೆಸ್ಟ್ ವ್ಯವಸ್ಥೆ
- ಸಾರ್ವಜನಿಕ ಪ್ರದೇಶಗಳಲ್ಲಿ ಹೃದಯಾಘಾತದ ಬಗ್ಗೆ ಜಾಗೃತಿ ಮೂಡಿಸುವುದು

ಮೈಸೂರಿನ ಜಯದೇವ ಹೃದ್ರೋಗ ಆಸ್ಪತ್ರೆಗೆ ಹೆಚ್ಚುವರಿ ತಜ್ಞ ವೈದ್ಯರನ್ನು ನಿಯೋಜಿಸಿ

ವೈದ್ಯಕೀಯ ಶಿಕ್ಷಣ ಇಲಾಖೆ ಪ್ರಧಾನ ಕಾರ್ಯದರ್ಶಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಆದೇಶ

ಬೆಂಗಳೂರು, ಜು.4(ಬಿಎಲ್‌ಯು)– ಮೈಸೂರು, ಮಂಡ್ಯ, ಚಾಮರಾಜನಗರ, ಕೊಡಗು ಸೇರಿದಂತೆ ಸುತ್ತಮುತ್ತ ಜಿಲ್ಲೆಗಳ ಜನರಲ್ಲಿ ಹೃದಯಾಘಾತ ಪ್ರಕರಣಗಳು ಹೆಚ್ಚಾಗುತ್ತಿರುವ ಹಿನ್ನೆಲೆ ಮೈಸೂರಿನ ಜಯದೇವ ಹೃದ್ರೋಗ ಆಸ್ಪತ್ರೆಗೆ ಹೆಚ್ಚುವರಿ ತಜ್ಞ ವೈದ್ಯರನ್ನು ನಿಯೋಜಿಸುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಆದೇಶ ನೀಡಿದ್ದಾರೆ.

ವಿಧಾನ ಪರಿಷತ್ ಸದಸ್ಯ ದಿನೇಶ್ ಗೂಳಿಗೌಡ ಅವರು ಸಿದ್ದರಾಮಯ್ಯ ಅವರನ್ನು ಇಂದು ಭೇಟಿ ಮಾಡಿ, ಹೃದಯಾಘಾತ ಪ್ರಕರಣ ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ಹೆಚ್ಚುವರಿ ತಜ್ಞ ವೈದ್ಯರನ್ನು ನಿಯೋಜನೆ ಮಾಡುವಂತೆ ಮನವಿ ಸಲ್ಲಿಸಿದರು.


ಸಿದ್ದರಾಮಯ್ಯ


ದಿನೇಶ್

ದಿನೇಶ್ ಗೂಳಿಗೌಡ ಅವರ ಮನವಿಗೆ ಸಕಾರಾತ್ಮಕವಾಗಿ ಸ್ಪಂದಿಸಿದ ಸಿದ್ದರಾಮಯ್ಯ ಅವರು ಜಯದೇವ ಹೃದ್ರೋಗ ಆಸ್ಪತ್ರೆಗೆ ಹೆಚ್ಚುವರಿ ತಜ್ಞ ವೈದ್ಯರನ್ನು ನಿಯೋಜನೆ ಮಾಡುವಂತೆ ವೈದ್ಯಕೀಯ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿಗೆ ಲಿಖಿತ ಆದೇಶ ನೀಡಿದ್ದಾರೆ.

ಮೈಸೂರು, ಹಾಸನ, ಮಂಡ್ಯ, ಚಾಮರಾಜನಗರ, ಕೊಡಗು ಜಿಲ್ಲೆಗಳಲ್ಲಿ ಹೃದಯಾಘಾತ ಪ್ರಕರಣಗಳು ಹೆಚ್ಚಾಗುತ್ತಿದ್ದು, 30 ರಿಂದ 50 ವರ್ಷದೊಳಗಿನವರು ಹೆಚ್ಚಾಗಿ ಬಲಿಯಾಗುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ಪರಿಸ್ಥಿತಿಯನ್ನು ಸಮರ್ಥವಾಗಿ ನಿರ್ವಹಿಸಲು ಹಾಗೂ ಭವಿಷ್ಯದಲ್ಲಿ ಇಂತಹ ದುರಂತವನ್ನು ತಡೆಯಲು ದೀರ್ಘ ಕಾಲಿನ ಕ್ರಮಗಳು ಅತ್ಯಗತ್ಯ ಎಂದು ವಿವರಿಸಿ ಹೇಳಿದ್ದಾರೆ.

ಮೈಸೂರಿನ ಜಯದೇವ ಹೃದ್ರೋಗ ಆಸ್ಪತ್ರೆಯಲ್ಲಿ ದಿನಕ್ಕೆ 700 ರೋಗಿಗಳನ್ನು ಮಾತ್ರ ಪರೀಕ್ಷೆ ಮಾಡಲು ಸಾಧ್ಯವಾಗಿದೆ. ಆದರೆ ಈಗ 1500 ರಿಂದ 2000 ರೋಗಿಗಳು ■ 6ನೇ ಪುಟಕ್ಕೆ

ನಕ್ಕರೆ ಅದೇ ಸ್ವರ್ಗ

ಗುಂಡ ಮಾಜಿ ಲವರ್ ಮದುವೆಗೆ ಹೋಗಿದ್ದ

ಮದುವೆ ಹುಡುಗನ ಅಪ್ಪ : ಯಾರಪ್ಪ ನೀನು? ಯಾರ ಕಡೆಯವನು?
ಗುಂಡ : ಹುಡುಗಿ ಕಡೆಯವನು!
ಹುಡುಗನ ಅಪ್ಪ : ಹುಡುಗಿಗೆ ಏನಾಗಬೇಕು?
ಗುಂಡ : ನಾನು ಸೆಮಿ ಫೈನಲ್‌ನಲ್ಲಿ ಎಲಿಮಿನೇಟ್ ಆಗಿದ್ದೆ. ಇವತ್ತು ಫೈನಲ್ ನೋಡೋಕೆ ಬಂದೆ.

ಮೈಸೂರು ಮಿತ್ರ
ಶನಿವಾರ, 5 ಜುಲೈ 2025
ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತ ವಾಹಿನಿ.........

ತಿಳಿದವರೊಂದಿಗೆ ಅರ್ಧ ಗಂಟೆ ಕಳೆದರೆ ನಾಲ್ಕು ಪುಸ್ತಕಗಳನ್ನು ಓದಿದಂತೆ. ಯೋಗಿಗಳೊಂದಿಗೆ ಅರ್ಧ ಗಂಟೆ ಕಳೆದರೆ ಅರ್ಧ ಬದುಕನ್ನು ದಾಟಿದಂತೆ.
– ಶ್ರೀ ಸಿದ್ದೇಶ್ವರ ಸ್ವಾಮೀಜಿ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಚೆಲ್ಲಿದ ಹಾಲಿಗೂ ಒಡೆದ ಕನ್ನಡಿಗೂ ಅಳಬೇಡ

ನಿಮ್ಮ ಪತ್ರಗಳು

■ ರಾಜ್ಯದ ರಾಜಕೀಯ ಬೆಳವಣಿಗೆಗಳು ಜನಸಾಮಾನ್ಯರಿಗೆ ಮನರಂಜನೆ

ಮಾನ್ಯರೆ,

ಇತ್ತೀಚೆಗೆ ರಾಜ್ಯದಲ್ಲಿ ನಡೆಯುತ್ತಿರುವ ರಾಜಕೀಯ ಬೆಳವಣಿಗೆಗಳು ಜನಸಾಮಾನ್ಯರಿಗೆ ಒಂದು ರೀತಿಯಲ್ಲಿ ಮನರಂಜನೆ ನೀಡುತ್ತಿವೆ. ಆಡಳಿತ ಪಕ್ಷದ ಶಾಸಕರುಗಳೇ ತಮ್ಮ ಸರ್ಕಾರದ ವಿರುದ್ಧವೇ ಲಂಚದ ಅರೋಪ ಮಾಡುತ್ತಿರುವುದು. ಮುಂದಿನ ಐದು ವರ್ಷಗಳ ಕಾಲ ನಾನೇ ಸಿಎಂ ಎಂದು ಸಿದ್ದರಾಮಯ್ಯ ಬಹಿರಂಗ ಹೇಳಿಕೆ ನೀಡುತ್ತಿರುವುದು. ಬಂಡೆಯಂತೆ ನಮ್ಮ ಸರ್ಕಾರ 5 ವರ್ಷ ಇರುತ್ತದೆ ಎನ್ನುವುದು. ಈ ಹಿಂದೆಯೇ ಒಪ್ಪಂದ ಆಗಿರುವಂತೆ ಇದೇ ಸೆಪ್ಟೆಂಬರ್ ಅಥವಾ ಅಕ್ಟೋಬರ್‌ನಲ್ಲಿ ಡಿಸಿಎಂ ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿ ಆಗುತ್ತಾರೆ ಎಂದು ಆಡಳಿತ ಪಕ್ಷದ ಕೆಲವು ಶಾಸಕರೇ ಹೇಳುತ್ತಿರುವುದು. ಒಂದು ರೀತಿಯಲ್ಲಿ ರಾಜ್ಯ ಸರ್ಕಾರವೇ ಗೊಂದಲದಲ್ಲಿ ಮುಳುಗಿದೆ ಎನ್ನಿಸುತ್ತದೆ. ಇದರ ಬಗ್ಗೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಮುಖ್ಯಮಂತ್ರಿ ಯಾರಾಗಬೇಕು ಎಂಬುದನ್ನು ಹೈಕಮಾಂಡ್ ನಿರ್ಧರಿಸುತ್ತದೆ ಎಂದು ಅಡ್ಡಗೋಡೆಯ ಮೇಲೆ ದೀಪ ಇಟ್ಟಂತೆ ಹೇಳಿಕೆ ನೀಡುವುದು. ಇವೆಲ್ಲದರ ನಡುವೆ ವಾಲ್ಮೀಕಿ ನಿಗಮದಲ್ಲಿ ನಡೆದಿದೆ ಎನ್ನಲಾದ ಹಗರಣವನ್ನು ಸಿಬಿಐಗೆ ವಹಿಸಿರುವುದು, ವಸತಿ ಯೋಜನೆಯಲ್ಲಿ ವ್ಯಾಪಕವಾಗಿ ನಡೆದಿರುವ ಬ್ರಹ್ಮಾಂಡ ಭ್ರಷ್ಟಾಚಾರ, ಬೆಂಗಳೂರಿನಲ್ಲಿ ಆರ್‌ಸಿಬಿ ವಿಜಯೋತ್ಸವದ ವೇಳೆ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ 11 ಜನರು ಕಾಲ್ತುಳಿತಕ್ಕೆ ಬಲಿಯಾದ ಘಟನೆಗೆ ಪೊಲೀಸ್ ಅಧಿಕಾರಿಗಳು ಹೊಣೆ ಅಲ್ಲ ಎಂದು ಕೇಂದ್ರಿಯ ಆಡಳಿತಾತ್ಮಕ ನ್ಯಾಯಮಂಡಳಿ (ಸಿಎಟಿ) ಆದೇಶ ನೀಡಿರುವುದು ಸರ್ಕಾರ ಒಂದು ರೀತಿಯಲ್ಲಿ ಮುಖಭಂಗ ಅನುಭವಿಸಿದೆ. ಇವೆಲ್ಲವನ್ನೂ ರಾಜ್ಯದ ಜನತೆ ತಮಾಷೆಯಾಗಿಯೇ ನೋಡುತ್ತಿದ್ದಾರೆ.

–ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು

■ ಖಾಸಗಿ ಆಸ್ಪತ್ರೆಗಳಲ್ಲೂ ಹೃದ್ರೋಗ ತಪಾಸಣೆ ಶಿಬಿರ ನಡೆಸಲಿ

ಮಾನ್ಯರೆ,

ಹಾಸನದಲ್ಲಿ ಹೃದಯಾಘಾತದಿಂದ ಮರಣ ಹೊಂದುತ್ತಿರುವವರ ಸಂಖ್ಯೆ ದೇಶದ ಗಮನ ಸೆಳೆದಿದೆ. ಈ ಬಗ್ಗೆ ವರದಿ ನೀಡಲು ಸರ್ಕಾರ ತಜ್ಞ ವೈದ್ಯರ ತಂಡವೊಂದನ್ನು ಕೂಡ ರಚಿಸಿದೆ. ಹಾಸನದಲ್ಲಿ ಸಾಲು ಸಾಲು ಮರಣವಾಗುತ್ತಿರುವುದು ಕಾಕತಾಳೀಯ. ಬೇರೆ ಬೇರೆ ಕಾರಣಗಳಿಂದಲೂ ಸಾವು ಸಂಭವಿಸಿದೆ ಎಂದು ಹಾಸನದ ವೈದ್ಯರು ಹೇಳಿದ್ದಾರೆ. ಆದರೆ ಈ ಕಾರಣದಿಂದ ಬೆಂಗಳೂರು ಮೈಸೂರುಗಳಲ್ಲಿನ ಜಯದೇವ ಹೃದ್ರೋಗ ಆಸ್ಪತ್ರೆಗಳಲ್ಲಿ ತಪಾಸಣೆಗೆ ಜನರು ಮುಗಿ ಬಿದ್ದಿರುವುದು ವರದಿಯಾಗಿದೆ. ಇದು ಈ ಆಸ್ಪತ್ರೆಗಳ ಕಾರ್ಯ ಒತ್ತಡವನ್ನು ಹೆಚ್ಚಿಸಿದೆ. ಆದ್ದರಿಂದ ಸರ್ಕಾರಿ ಜಿಲ್ಲಾ ಆಸ್ಪತ್ರೆ, ತಾಲೂಕು ಸರ್ಕಾರಿ ಆಸ್ಪತ್ರೆಗಳಲ್ಲಿ ಉಚಿತ ತಪಾಸಣಾ ಶಿಬಿರ ಹಾಗೂ ಖಾಸಗಿ ಆಸ್ಪತ್ರೆ, ನರ್ಸಿಂಗ್ ಹೋಮ್‌ಗಳು ಕೂಡ ರಿಯಾಯಿತಿ ದರದಲ್ಲಿ ಹೃದ್ರೋಗ ತಪಾಸಣಾ ಶಿಬಿರಗಳನ್ನು ಏರ್ಪಡಿಸಿ ಅಧ್ಯಯನ ನಡೆಸಬೇಕು. ಈ ಬಗ್ಗೆ ಸರ್ಕಾರ ಗಮನಹರಿಸಬೇಕು. ಆ ಮೂಲಕ ಜನರ ಆತಂಕವನ್ನು ದೂರ ಮಾಡಬೇಕು.

–ಮುಳ್ಳೂರು ಪ್ರಕಾಶ್, ಕನಕದಾಸನಗರ, ಮೈಸೂರು.

■ ಶಿಥಿಲಾವಸ್ಥೆಯಲ್ಲಿ ಶಿಡ್ಲು ಮಲ್ಲಿಕಾರ್ಜುನಸ್ವಾಮಿ ದೇವಾಲಯ

ಮಾನ್ಯರೆ,



ಮೈಸೂರು ಜಿಲ್ಲೆ ಪಿರಿಯಾಪಟ್ಟಣ ತಾಲೂಕಿನ ಇತಿಹಾಸ ಪ್ರಸಿದ್ಧ ಶಿಡ್ಲು ಮಲ್ಲಿಕಾರ್ಜುನಸ್ವಾಮಿ ದೇವಾಲಯ ಶಿಥಿಲಾ ವಸ್ಥೆ ತಲುಪಿದ್ದು, ದೇವಾಲಯದ ಮೇಲ್ಭಾಗದಲ್ಲಿ ಗಿಡ ಮರಗಳು ಬೆಳೆದಿರುವುದರಿಂದ ದೇವಾಲಯ ಯಾವಾಗ ಕುಸಿಯುತ್ತದೆ ಎಂಬ ಭಯ ಸಾರ್ವಜನಿಕರಲ್ಲಿ ಆತಂಕ ಮೂಡಿಸಿದೆ. ದೇವಾಲಯದ ಸಮೀಪವೇ ಇರುವ ಸರ್ಕಾರಿ ಶಾಲೆ ಹಾಗೂ ಖಾಸಗಿ ಶಾಲೆಯ ವಿದ್ಯಾರ್ಥಿಗಳು ಪ್ರತಿದಿನ ಅಲ್ಲಿ ಆಟವಾಡಿ ದಣಿವಾದಾಗ ದೇವಾಲಯ ಮೈದಾನದಲ್ಲಿ ನೆರಳಿಗಾಗಿ ಕೂರುತ್ತಾರೆ. ಅಲ್ಲದೆ ಮಕ್ಕಳು ಆಟವಾಡುವ ಸಮಯದಲ್ಲಿ ಕುಸಿದರೆ ಭಾರಿ ಅನಾಹುತವಾಗಲಿದೆ. ನೂರಾರು ವರ್ಷಗಳ ಇತಿಹಾಸವಿರುವ ಈ ದೇವಾಲಯವನ್ನು ಸರ್ಕಾರ ನಿರ್ಲಕ್ಷ್ಯ ವಹಿಸಿದ್ದು, ಸರ್ಕಾರ ಹಾಗೂ ಸಚಿವ ವೆಂಕಟೇಶ್ ಅವರು ಬೆಟ್ಟದಪುರದ ದೇವಾಲಯದ ಕಡೆ ಹೆಚ್ಚಿನ ಗಮನಕೊಟ್ಟು ತಕ್ಷಣವೇ ಜೀರ್ಣೋದ್ಧಾರ ಮಾಡಿದರೆ ಕುಸಿಯುವ ದೇವಾಲಯವನ್ನು ಸಂರಕ್ಷಿಸಿ ಅವಘಡ ಸಂಭವಿಸುವ ಮೊದಲು ತಾಲೂಕು ಆಡಳಿತ ಎಚ್ಚೆತ್ತುಕೊಳ್ಳಬೇಕೆಂದು ಸಾರ್ವಜನಿಕರ ಮನವಿ.

– ಬೆಟ್ಟದಪುರ ಗ್ರಾಮಸ್ಥರು, ಪಿರಿಯಾಪಟ್ಟಣ ತಾ.

■ ಕುಪ್ಪೇಗಾಲ ಗ್ರಾಮದವರೆಗೆ ಬಸ್ ಸೌಕರ್ಯ ವಿಸ್ತರಿಸಿ

ಮಾನ್ಯರೆ,

ಕೆಎಸ್‌ಆರ್‌ಟಿಸಿ ಹೊಸದಾಗಿ ನಂಜನಗೂಡಿನಿಂದ ಸಿದ್ದರಾಮನಹುಂಡಿ ಗ್ರಾಮದವರೆಗೆ ಬಸ್ ಸೌಕರ್ಯ ಕಲ್ಪಿಸಿರುವುದು ಸ್ವಾಗತಾರ್ಹವಾಗಿದೆ. ಸಿದ್ದರಾಮನ ಹುಂಡಿಯಿಂದ ಕುಪ್ಪೇಗಾಲ ಗ್ರಾಮ 4 ಕಿ.ಮೀ. ದೂರದಲ್ಲಿದೆ. ಆದುದರಿಂದ ಈ ಬಸ್ ಅನ್ನು ಕುಪ್ಪೇಗಾಲ ಗ್ರಾಮದವರೆಗೆ ವಿಸ್ತರಿಸಿದರೆ ಇನ್ನೂ 2 ಗ್ರಾಮಗಳ ಪ್ರಯಾಣಿಕರಿಗೆ ಅನುಕೂಲವಾಗುತ್ತದೆ.

ಆದುದರಿಂದ ಸಂಬಂಧಪಟ್ಟ ಸಾರಿಗೆ ಅಧಿಕಾರಿಗಳು ನಂಜನಗೂಡಿನಿಂದ ಸಿದ್ದರಾಮನಹುಂಡಿ ಗ್ರಾಮದವರೆಗೆ ಬರುತ್ತಿರುವ ಬಸ್ ಅನ್ನು ಕುಪ್ಪೇಗಾಲ ಗ್ರಾಮದವರೆಗೆ ಬರುವಂತೆ ವ್ಯವಸ್ಥೆ ಮಾಡಬೇಕು. ಈ ಬಸ್ ಕುಪ್ಪೇಗಾಲ ಗ್ರಾಮಕ್ಕೆ ಬಂದು ಹೋದರೆ ಕುಪ್ಪೇಗಾಲ, ಮುದ್ದೇಗೌಡನ ಹುಂಡಿ, ಹೊಸಹಳ್ಳಿ ಗ್ರಾಮದ ಪ್ರಯಾಣಿಕರು, ನಂಜನಗೂಡು ಮತ್ತು ಈ ಮಾರ್ಗದ ಗ್ರಾಮಗಳಿಗೆ ಹೋಗಲು ತುಂಬಾ ಅನುಕೂಲವಾಗುತ್ತದೆ.

–ಎಸ್.ಸಿದ್ದೇಗೌಡ, ಕುಪ್ಪೇಗಾಲ, ಮೈಸೂರು.

ಚಿಂತನೆ



ಡಾ. ವಿ. ರಂಗನಾಥ್
ಲೇಖಕರು ಹಾಗೂ ನಿವೃತ್ತ ತಹಸೀಲ್ದಾರರು
ಮೊ: 94482 08746/ 97421 79000

ದೈನ್ಯತೆಯ ಹಿಂದೆ ಮಾನವೀಯತೆಯೂ ಇರಬಹುದು!!

ಜೀವನದಲ್ಲಿ ಕೆಲವು ಸಲ ನಾವು ತೆಗೆದುಕೊಂಡ ನಿರ್ಧಾರಗಳು ಸರಿಯಾಗಿರುವುದಿಲ್ಲ. ಆತುರಕ್ಕೆ ಕೆಲವು ತಪ್ಪು ನಿರ್ಧಾರಗಳನ್ನು ತೆಗೆದುಕೊಂಡಿರುತ್ತೇವೆ. ನಂತರ ವಿವೇಚಿಸಿದಾಗ ಅದು ತಪ್ಪು ಎಂದು ಕಂಡುಬರುತ್ತದೆ. ನಮ್ಮ ಕನ್ನಡದಲ್ಲಿ ಒಂದೆರಡು ಸೊಗಸಾದ ಮಾತುಗಳಿವೆ. 'ಕೋಪಕ್ಕೆ ಕೊಯ್ದು ಕೊಂಡ ಮೂಗು ಮತ್ತೆ ಸರಿ ಮಾಡಲಾಗದು' ಎಂಬುದು ಒಂದಾದರೆ, 'ಪ್ರತ್ಯಕ್ಷ ಕಂಡರೂ ಪ್ರಾಮಾಣಿಸಿ ನೋಡು' ಎಂಬುದು ಇನ್ನೊಂದು. ಇವೆರಡನ್ನೂ ನಾವು ಆಗಾಗ್ಗೆ ನೆನಪಿಸಿ ಕೊಳ್ಳುತ್ತಿರಬೇಕು.

ಕೆಲವು ಸಲ ನಾವು ಕೆಲವರ ಬಗ್ಗೆ ತಾತ್ಸಾರ ಮನೋಭಾವ ತಾಳುತ್ತೇವೆ. ಕೊನೆಗೆ ಅವರಿಂದಲೇ ನಮಗೆ ಸಹಾಯವಾಗುತ್ತದೆ. ಕೆಲವು ಸಲ ಆಟೋಚಾಲಕರು ಪ್ರಯಾಣಿಕರು ತಮ್ಮ ಆಟೋದಲ್ಲಿ ಬಿಟ್ಟುಹೋದಂತಹ ಬೆಲೆ ಬಾಳುವ ಪದಾರ್ಥಗಳನ್ನು ವಾಪಸ್ಸು ತಂದುಕೊಟ್ಟಿದ್ದನ್ನು ಕಂಡಿದ್ದೇವೆ–ಕೇಳಿದ್ದೇವೆ. ಇಂತಹ ವೇಳೆ ನಾವು ಅಂದು ಕೊಂಡಿದ್ದು ಸರಿಯಲ್ಲ ಎಂಬ ನಿಜಸ್ಥಿತಿ ಮನದಟ್ಟಾಗುತ್ತದೆ. ಕೆಲವೊಮ್ಮೆ ನಾವು ದೊಡ್ಡ ಅಂಗಡಿಗಳಲ್ಲಿ ಹಣವನ್ನು ನೀಡಿದಾಗ ಅವರು ಕಡಿಮೆ ಕೊಟ್ಟಿದ್ದೀರಿ ಇಲ್ಲ, ನೀವು ಹಣವನ್ನು ಕೊಟ್ಟೇ ಇಲ್ಲ ಎಂದೋ ನಮ್ಮನ್ನು ದೂಷಿಸಬಹುದು. ಅದೇ ಕೆಲವು ಸಲ ತರಕಾರಿ, ಹಣ್ಣು ಮಾರುವವರಿಗೆ ನಾವು ಹೆಚ್ಚುವರಿ ಹಣ ನೀಡಿದಾಗ ಅವರು ಆ ಹೆಚ್ಚುವರಿ ಹಣವನ್ನು ವಾಪಸ್ಸು ಕೊಟ್ಟಿರುವುದು ಉಂಟು. ಕೆಲವೊಮ್ಮೆ ಸಣ್ಣ ವ್ಯಾಪಾರಿಗಳು ತಮ್ಮಲ್ಲಿರುವ ಸರಕು ಕಳಪೆ ಎಂದಾಗ ಅದನ್ನು ಹಣದ ಆಸೆಗಾಗಿ ನಮಗೆ ಮಾರದೇ, ಕೇಳಿದರೆ ಅದು ಸರಿಯಿಲ್ಲ ಎಂದೇ ಹೇಳುತ್ತಾರೆ. ಇವರೆಲ್ಲಾ ಸ್ಥಿತಿವಂತರು, ಶ್ರೀಮಂತರು ಎಂದೇನಲ್ಲ. ಆದರೆ, ಅವರು ಮಾನವೀಯತೆ, ಪ್ರಾಮಾಣಿಕತೆಯನ್ನು ಮೈಗೂಡಿಸಿ ಕೊಂಡಿರುತ್ತಾರೆ. ಕೆಲವೊಮ್ಮೆ ಅತ್ಯಂತ ಸಾಧಾರಣ ಉಡುಪು ಧರಿಸಿರುವವರು ಮೇಧಾವಿಗಳು ಎಂದು ನಂತರ ಕಂಡುಬರುವುದೂ ಇದೆ. ಇಲ್ಲೆಲ್ಲಾ ನಮ್ಮ ವಿವೇಚನೆ ಸರಿಯಾಗಿ ಕೆಲಸ ಮಾಡದಿರುವುದು ಮನವರಿಕೆ ಯಾಗುತ್ತದೆ. ಹಾಗಾಗಿಯೇ ಪ್ರತ್ಯಕ್ಷವಾಗಿ ಕಂಡರೂ ಕೆಲವೊಮ್ಮೆ ಅದು ನಿಜವಾಗಲಾರದು. ಅಲ್ಲಿ ನಮ್ಮ ವಿವೇಚನೆ ಕೆಲಸ ಮಾಡಬೇಕಾಗುತ್ತದೆ. ಹಾಗೆ ನೋಡಿದರೆ ಹಲವಾರು ಸಲ ಈ ಪ್ರಾಮಾಣಿಕ ಮನೋಭಾವ ಸಾಮಾನ್ಯ ಜನರಲ್ಲೇ ಹೆಚ್ಚಾಗಿದೆ ಎಂಬುದೂ ನಮಗೆ ಕಂಡುಬರುತ್ತದೆ.

ಇತ್ತೀಚೆಗೆ ಗಮನಿಸಿದ ಎರಡು ಸಂದರ್ಭಗಳನ್ನು ಇದಕ್ಕೆ ಪೂರಕವಾಗಿ ಉಲ್ಲೇಖಿಸಬಹುದು; ಒಂದು ಊರಿನ ಜನಪ್ರಿಯ ಹೋಟೆಲ್‌ಗೆ ಸಾಕಷ್ಟು ಜನರು ಬಂದು ಅಲ್ಲಿ ಊಟ, ತಿಂಡಿ ಮಾಡಿ ಹೋಗುತ್ತಿದ್ದರು. ಒಂದು ಸಲ ಒಬ್ಬ ವ್ಯಕ್ತಿ ಊಟ ಮಾಡಿ ಹಣವನ್ನು ನೀಡದೆ, ಹಾಗೆ ಹೊರಟು ಹೋದರು. ಅದನ್ನು ಕಂಡ ಇತರೆ ಗ್ರಾಹಕರು ಹೇಗೆ ಮೋಸ ಮಾಡುತ್ತಾರೆ ನೋಡಿ ಎಂದು ಬೇಸರಿಸಿಕೊಂಡರು. ಆ ವ್ಯಕ್ತಿಯನ್ನು ಹಿಡಿಯಬೇಕು ಎಂದು ಮರುದಿನವೂ ಅದೇ ಹೋಟೆಲ್ಲಿಗೆ ಹೋದರು. ಅದೇ ಸಮಯಕ್ಕೆ ಆತ ಮತ್ತೆ ಬಂದು ಊಟ ಮಾಡುತ್ತಿದ್ದ. ಇದನ್ನು ಅವರು ಹೋಟೆಲ್ ಮಾಲಿಕರಿಗೆ ತಿಳಿಸಿದರು. ಅದಕ್ಕೆ ಆ ಹೋಟೆಲ್ ಮಾಲೀಕರು ಅಷ್ಟಾಗಿ ತಲೆ ಕೆಡಿಸಿಕೊಳ್ಳದೇ 'ಅವನು ಹೋಗಲಿ, ಆಮೇಲೆ ಮಾತನಾಡೋಣ' ಎಂದು ಸುಮ್ಮನಾದ. ಹಿಂದಿನ ದಿನದ ಹಾಗೇ ಆ ವ್ಯಕ್ತಿ ಊಟ ಮಾಡಿ ತಲೆ ತಗ್ಗಿಸಿ ಕೊಂಡು ಜನರ ನಡುವೆ ಹೊರಗೆ ಹೊರಟೇ ಹೋದ. ಅವತ್ತು ಹಣ ಪಾವತಿಸಲಿಲ್ಲ. ಅಲ್ಲಿದ್ದ ಒಬ್ಬ ಗ್ರಾಹಕ ನಂತರ ಮಾಲಿಕನಲ್ಲಿ ಬಂದು ಏಕೆ ಅವನನ್ನು ಹೋಗಲು ಬಿಟ್ಟಿರಿ ಎಂದು ಕೇಳಬಹುದೇ? ಎಂದರು. ಅದಕ್ಕೆ ಆ ಮಾಲಿಕ 'ಸರ್, ನೀವೊಬ್ಬರೇ ಅಲ್ಲ, ನಮ್ಮ ಹೋಟೆಲ್‌ನ ಹಲವಾರು ನಿಯಮಿತ ಗ್ರಾಹಕರು ಅವನು ಇಲ್ಲಿ ಬಂದು ತಿಂದು ಹಣ ಕೊಡದೆ ಹೋಗಿದ್ದನ್ನು ಗಮನಿಸಿ ನನಗೆ ದೂರು ನೀಡಿದ್ದಾರೆ. ಅದು ನನಗೂ ಗೊತ್ತಿದೆ. ಈ ವ್ಯಕ್ತಿ ಪ್ರತಿದಿನ ಎದುರುಗಡೆ ಇರುವ ಕಲ್ಲಿನ ಮೇಲೆ ಕೂತಿರುತ್ತಾನೆ. ನಮ್ಮ ಹೋಟೆಲ್ ಜನರಿಂದ ತುಂಬುವವರೆಗೆ ಕಾಯುತ್ತಿರುತ್ತಾನೆ. ಜನ ತುಂಬಿದಾಗ ಬಂದು ಊಟ ಮಾಡಿ ಎದ್ದು ಹೋಗುತ್ತಾನೆ. ಅದನ್ನು ನಾನೂ ತುಂಬಾ ಸಾರಿ ನೋಡಿದ್ದೇನೆ. ಆದರೆ, ಅವನನ್ನು ಯಾವತ್ತೂ ಹಿಡಿಯಬೇಕು ಎನ್ನಿಸಲಿಲ್ಲ. ಅವನು ಬಂದಾಗ ನಾನು ತಡೆಯುವುದೂ ಇಲ್ಲ ಎನ್ನುತ್ತಾನೆ. ಏಕೆ ಎಂದು ಕಾರಣ ಕೇಳಿದರೆ ಆತ ಹೇಳಿದ ಮಾತು ಮನನೀಯವಾದದು. 'ನನಗೆ ಏನೆನಿಸುತ್ತದೆ ಎಂದರೆ, ನನ್ನ ಈ ಹೋಟೆಲ್ ತುಂಬಿ ತುಳುಕುತ್ತಿರುವುದಕ್ಕೆ ಆತನೇ ಕಾರಣ ಎಂದು. ಏಕೆಂದರೆ ಆತ ಮುಂಜಾನೆಯೇ ಬಂದು ಆ ಕಲ್ಲಿನ ಮೇಲೆ ಕುಳಿತು, ಹೋಟೆಲ್‌ಗೆ ಹೆಚ್ಚಿನ ಜನರು ಬರಲಿ ಎಂದು ದೇವರಲ್ಲಿ ಪ್ರಾರ್ಥಿಸುತ್ತಿರುತ್ತಾನೆ. ಹಾಗೆ ಜನರು ಬಂದಾಗ ಮಾತ್ರ ಅವನು ಬಂದು ಊಟ ಮಾಡಿ, ಹಣ ಪಾವತಿಸದೇ ಹೋಗುತ್ತಾನೆ. ಕಡಿಮೆ ಜನ ಇದ್ದರೆ ಹಾಗೆ ಬರುವುದೇ ಇಲ್ಲ. ಅವನ ಕಷ್ಟ, ಬಡತನ ನನಗೆ ತಿಳಿಯದು. ಆದರೆ ತನ್ನ ಒಂದು ಹೊತ್ತಿನ ಊಟಕ್ಕಾಗಿ ಅವನು ದೇವರಲ್ಲಿ ನನ್ನ ಹೋಟೆಲ್ ಪರವಾಗಿ ಪ್ರಾರ್ಥನೆ ಮಾಡುತ್ತಾನಲ್ಲಾ, ಅದಕ್ಕೆ ಬೆಲೆ ಕಟ್ಟಲಾಗದು. ಆದ್ದರಿಂದ ಅವನು ನನ್ನ ಹಿತೈಷಿ ಎಂದೇ ನಾನು ಭಾವಿಸುತ್ತೇನೆ' ಎಂದು ಹೇಳುತ್ತಾರೆ.



> ಕೆಲವೊಮ್ಮೆ ನಾವು ದೊಡ್ಡ ಅಂಗಡಿಗಳಲ್ಲಿ ಹಣವನ್ನು ನೀಡಿದಾಗ ಅವರು ಕಡಿಮೆ ಕೊಟ್ಟಿದ್ದೀರಿ ಇಲ್ಲ, ನೀವು ಹಣವನ್ನು ಕೊಟ್ಟೇ ಇಲ್ಲ ಎಂದೋ ನಮ್ಮನ್ನು ದೂಷಿಸಬಹುದು. ಅದೇ ಕೆಲವು ಸಲ ತರಕಾರಿ, ಹಣ್ಣು ಮಾರುವವರಿಗೆ ನಾವು ಹೆಚ್ಚುವರಿ ಹಣ ನೀಡಿದಾಗ ಅವರು ಆ ಹೆಚ್ಚುವರಿ ಹಣವನ್ನು ವಾಪಸ್ಸು ಕೊಟ್ಟಿರುವುದು ಉಂಟು. ಕೆಲವೊಮ್ಮೆ ಸಣ್ಣ ವ್ಯಾಪಾರಿಗಳು ತಮ್ಮಲ್ಲಿರುವ ಸರಕು ಕಳಪೆ ಎಂದಾಗ ಅದನ್ನು ಹಣದ ಆಸೆಗಾಗಿ ನಮಗೆ ಮಾರದೇ, ಕೇಳಿದರೆ ಅದು ಸರಿಯಿಲ್ಲ ಎಂದೇ ಹೇಳುತ್ತಾರೆ. ಇವರೆಲ್ಲಾ ಸ್ಥಿತಿವಂತರು, ಶ್ರೀಮಂತರು ಎಂದೇನಲ್ಲ. ಆದರೆ, ಅವರು ಮಾನವೀಯತೆ, ಪ್ರಾಮಾಣಿಕತೆಯನ್ನು ಮೈಗೂಡಿಸಿಕೊಂಡಿರುತ್ತಾರೆ.

ಎಂತಹ ಅರ್ಥಗರ್ಭಿತ ಸನ್ನಿವೇಶ ಎಂದು ಇದನ್ನು ಗಮನಿಸಿದಾಗ ಅನ್ನಿಸುತ್ತದೆ. ಒಬ್ಬ ವ್ಯಕ್ತಿ ತನ್ನ ಒಂದು ಊಟಕ್ಕಾಗಿ ಈ ಹೋಟೆಲ್‌ಗೆ ಹೆಚ್ಚು ಜನ ಬರಲಿ ಎಂದು ಪ್ರಾರ್ಥಿಸುವುದು, ಅದರಂತೆ ಜನರು ಬರುವುದು ಒಂದು ರೀತಿಯ ಕಾಕತಾಳೀಯವೆನಿಸಿದರೂ, ಆತನ ಪ್ರಾಮಾಣಿಕ ಕೋರಿಕೆ ವಿಶೇಷ ಅನ್ನಿಸುವುದಲ್ಲವೆ? ಇದು ದೈನ್ಯತೆಯ ವ್ಯಕ್ತಿಯಲ್ಲಿನ ಒಂದು ಅಸಾಧಾರಣ ಮಾನವೀಯ ಮುಖ ಎಂದು ಪರಿಭಾವಿಸಬಹುದಾಗಿದೆ. ಆತನು ಹೋಟೆಲ್‌ಗೆ ಹೆಚ್ಚು ಜನರು ಬರಲಿ ಎಂದು ಪ್ರಾರ್ಥಿಸುವುದನ್ನು ಆ ಮಾಲೀಕ ಗೌರವಿಸುವುದನ್ನು ಕಂಡಾಗ ಮಾನವೀಯತೆಯ ಮತ್ತೊಂದು ಮುಖದ ದರ್ಶನವಾಗುತ್ತದೆ.

ಇಂತಹುದೇ ಮತ್ತೊಂದು ಪ್ರಸಂಗ. ಒಂದು ಊರಿನ ಒಬ್ಬ ಶ್ರೀಮಂತ ಒಂದು ಹೋಟೆಲ್ಲಿಗೆ ನಿಯಮಿತವಾಗಿ ಬರುತ್ತಾನೆ. ಆತ ಬರುವಾಗ ತನ್ನೊಡನೆ ಕೆಲವು ಸ್ನೇಹಿತರನ್ನೂ ಕರೆತರುತ್ತಾನೆ. ಆತನಿಗೆ ಸಾಮಾನ್ಯವಾಗಿ ಆ ಹೋಟೆಲ್ಲಿನ ಒಬ್ಬ ಯುವಕ ಸರ್ವರ್ ನಿಯಮಿತವಾಗಿ ಆಹಾರ ಸರಬರಾಜು ಮಾಡುತ್ತಿರುತ್ತಾನೆ. ಆತ ತಿಂಡಿ ತಿಂದು ಹೋಗುವಾಗ ಈ ಸರ್ವರ್‌ಗೆ ಟಿಪ್ಸ್ ಎಂದು ಒಂದಷ್ಟು ಹಣ ನೀಡಿ ಹೋಗುತ್ತಿರುತ್ತಾನೆ. ಆತ ಹಾಗೆ ನೀಡಿ ಹೋಗುವಾಗ ಈ ಯುವಕನ ದಡ್ಡತನಕ್ಕೆ ಟೀಕೆ ಮಾಡಿ ಹೋಗುತ್ತಾನೆ. ಆತ ಈತನನ್ನು ದಡ್ಡ ಎಂದು ಭಾವಿಸಲು ಆತ ಒಂದು ಕಾರಣ ನೀಡುತ್ತಾನೆ. ತಾನು ಪ್ರತಿಸಲ ಟಿಪ್ಸ್ ಎಂದು ನೀಡುವಾಗ ಆತನನ್ನು ಕರೆದು ಒಂದು ನೂರು ರೂಪಾಯಿಯ ನೋಟು ಹಾಗೂ ಐದು ನೂರು ರೂಪಾಯಿ ನೋಟು ಎರಡನ್ನೂ ಟೇಬಲ್ಲಿನ ಮೇಲೆ ಇಟ್ಟು ನಿನಗೆ ಯಾವುದು ಬೇಕೋ ಅದನ್ನು ತೆಗೆದುಕೋ ಎನ್ನುತ್ತೇನೆ. ಆ ಯುವ ಸರ್ವರ್ ಪ್ರತಿ ಸಲ ನೂರು ರೂಪಾಯಿ ನೋಟನ್ನೇ ತೆಗೆದುಕೊಳ್ಳುತ್ತಾನೆ. ಆಗ ಆ ಶ್ರೀಮಂತ ತನ್ನ ಸ್ನೇಹಿತರಿಗೆ ಅವನೊಬ್ಬ ಮೂರ್ಖ. ನಾನು ಐದು ನೂರು ರೂಪಾಯಿ ಹಣ ನೀಡಿದರೂ ಆತ ನೂರು ರೂಪಾಯಿ ತೆಗೆದುಕೊಳ್ಳುತ್ತಾನೆ. ಅವನಿಗೆ ಹಣದ ಬೆಲೆಯೇ ಗೊತ್ತಿಲ್ಲ. ಸರಿಯಾಗಿ ಗೊತ್ತಿದ್ದರೆ ಇಷ್ಟು ಹೊತ್ತಿಗೆ ಅವನು ಈ ಹೋಟೆಲ್ಲಿನ ಮಾಲೀಕನಾಗಬಹುದಾಗಿತ್ತು ಎಂದು ಸ್ನೇಹಿತರೊಡನೆ ಛೇಡಿಸಿ ಮಾತನಾಡಿ ಸಂತೋಷ ಪಡುತ್ತಾನೆ. ಒಮ್ಮೆ ಇದನ್ನು ಗಮನಿಸಿದ ಹಿರಿಯರೊಬ್ಬರು ಆ ಸರ್ವರ್ ಬಳಿ ಬಂದು ಇದೇಕೆ ಹೀಗೆ ಮಾಡುತ್ತೀಯೆ? ಅವರು ನಿನ್ನನ್ನು ಗೇಲಿ ಮಾಡಿ ನಗುತ್ತಾರೆ. ನೀನೇಕೆ ಐದು ನೂರು ರೂಪಾಯಿಯ ಬದಲು ನೂರು ರೂಪಾಯಿ ಪಡೆಯುತ್ತೀಯಾ ಎಂದಾಗ ಆ ಯುವಕ ಹೇಳುತ್ತಾನೆ; ಅದು ನನಗೂ ಗೊತ್ತು. ನಾನು ಎಂದಾದರೂ ಐದು ನೂರು ರೂಪಾಯಿ ತೆಗೆದುಕೊಂಡಿದ್ದೆ ಆದರೆ ಮುಂದೆ ಆತ ನನಗೆ ಟಿಪ್ಸ್ ನೀಡುವುದನ್ನು ನಿಲ್ಲಿಸಬಹುದು. ಆತ ನೀಡುತ್ತಿರುವ ನೂರು ರೂಪಾಯಿಯಿಂದಲೇ ಇಂದು ನಾನು ಹಲವು ಸಾವಿರ ಸಂಗ್ರಹಿಸಿದ್ದೇನೆ. ಅವರು ನನ್ನ ಬಗ್ಗೆ ಅಪಹಾಸ್ಯ ಮಾಡಿ ಸಂತೋಷ ಪಡುವುದಾದರೆ ನಾನು ಅದಕ್ಕೆ ಏಕೆ ಚಿಂತಿಸಲಿ. ನನಗೆ ಗ್ರಾಹಕರ ಸಂತೋಷ ಮುಖ್ಯ ಎನ್ನುತ್ತಾನೆ. ಇಲ್ಲಿ ಯಾರು ಮೂರ್ಖರು ಎಂಬ ಪ್ರಶ್ನೆ ಉದ್ಭವಿಸುತ್ತದೆ. ಹಾಗೆ ನೋಡಿದರೆ ಆ ಯುವ ಸರ್ವರ್ ಅನಿಸಿಕೆ ಸರಿ ಎನಿಸುವುದಲ್ಲವೇ?

ನಾವು ಅನೇಕ ಬಾಬಾ, ಸನ್ಯಾಸಿಗಳನ್ನು ನೋಡಿದ್ದೇವೆ. ಅವರೆಂದೂ ಭಿಕ್ಷೆ ಬೇಡುವುದಿಲ್ಲ. ರಸ್ತೆ ಬದಿಯಲ್ಲಿ ಸುಮ್ಮನೆ ಕುಳಿತಿರುತ್ತಾರೆ. ಯಾರಾದರೂ ಏನಾದರೂ ಕೊಟ್ಟರೆ ತೆಗೆದುಕೊಳ್ಳುತ್ತಾರೆ. ಹಾಗೆ ಕೊಟ್ಟವರಿಗೆ ಶುಭವಾಗಲಿ ಎಂದು ಹಾರೈಸುತ್ತಾರೆ. ಅವರನ್ನು ನಾವು ದಡ್ಡ ಶಿಖಾಮಣಿಗಳು ಎಂದು ಪರಿಗಣಿಸಲಾಗುವುದಿಲ್ಲ ಹಾಗೂ ಅವರಿಂದ ಯಾರಿಗೂ ತೊಂದರೆಯೂ ಆಗುವುದಿಲ್ಲ. ಅವರು ಹಾಗೆ ಮಾಡಲು ಏನು ಕಾರಣವೋ ತಿಳಿಯದು. ಕೆಲವು ಸಲ ಅಮಾಯಕರು ಎಂದು ಭಾವಿಸುವವರಿಂದ ನಮಗೆ ಅನುಕೂಲವೇ ಆಗುತ್ತದೆ.

ನಾನು ಕೆಲಸ ಮಾಡುತ್ತಿದ್ದ ಕಚೇರಿಯಲ್ಲಿ ಒಬ್ಬ ಗ್ರೂಪ್ ಡಿ ನೌಕರನಿದ್ದ. ಆತ ಸ್ವಲ್ಪ ಗಲೀಜು ಮನುಷ್ಯ. ಆತ ಹಾಕುತ್ತಿದ್ದ ಬಟ್ಟೆ ಅತ್ಯಂತ ಸಾಧಾರಣವಾದುದು ಹಾಗೂ ಸದಾ ಕೊಳಕಾಗಿರುತ್ತಿತ್ತು. ಆತ ಊಟ ಮಾಡುತ್ತಿದ್ದುದೂ ಅತೀ ಸಾಧಾರಣ. ಕೆಲವು ಸಲ ಹಳಸಿದ್ದನ್ನೇ ತಿನ್ನುತ್ತಿದ್ದ. ಅವನನ್ನು ಕಂಡವರು ಅವನ ಬಗ್ಗೆ ಅಸಹ್ಯ ಪಡುತ್ತಿದ್ದರು. ಆದರೆ ಆತ ಪ್ರಾಮಾಣಿಕ. ಒಮ್ಮೆ ಕಚೇರಿಗೆ ಬಂದವರೊಬ್ಬರ ಪರ್ಸ್ ಕೆಳಗೆ ಬಿದ್ದು ಹೋಗಿತ್ತು. ಅದನ್ನು ಯಾರೂ ಗಮನಿಸಿರಲಿಲ್ಲ. ಆ ಪರ್ಸ್ ಈತನ ಕೈಗೆ ಸಿಕ್ಕಿತು. ಅದರಲ್ಲಿ ಸಾಕಷ್ಟು ಹಣ ಹಾಗೂ ಪತ್ರಗಳು ಇದ್ದವು. ಆದರೆ ಈ ವ್ಯಕ್ತಿ ಅದನ್ನು ತಂದು ಕಚೇರಿ ಮುಖ್ಯಸ್ಥರ ಬಳಿ ಕೊಟ್ಟು, ಅದು ತನಗೆ ಸಿಕ್ಕಿದ್ದಾಗಿ ಹೇಳಿದ. ಕೆಲ ಸಮಯದ ನಂತರ ಅದರ ಮೂಲ ಮಾಲೀಕ ಪರ್ಸ್ ಹುಡುಕಿಕೊಂಡು ಬಂದಾಗ ಕಚೇರಿ ಮುಖ್ಯಸ್ಥರು ಅದನ್ನು ಅವರಿಗೆ ಹಿಂದಿರುಗಿಸಿ, ಅದು ಸಿಕ್ಕಿದ ಪರಿ ವಿವರಿಸಿದರು. ಆ ವ್ಯಕ್ತಿ ಇವನಿಗೆ ಒಂದಷ್ಟು ಹಣ ನೀಡಲು ಬಂದಾಗ ಅದನ್ನು ಪಡೆಯಲು ಆತ ನಿರಾಕರಿಸಿದ. ಆತ ನಿವೃತ್ತಿ ಹೊಂದುವ ದಿನ ಬೆಳಗ್ಗೆಯೇ ಕಚೇರಿಗೆ ಬಂದು ಇಡೀ ಕಚೇರಿಯನ್ನು ಗುಡಿಸಿ, ನೀರು ಹಾಕಿ ಶುದ್ಧ ಮಾಡಿದ್ದೇ ಅಲ್ಲದೆ, ಹತ್ತಿರದ ಗಿಡದಿಂದ ಒಂದಷ್ಟು ಹೂವು ತಂದು ಕಚೇರಿಯಲ್ಲಿದ್ದ ಫೋಟೋಗಳಿಗೆ ಪೂಜೆ ಮಾಡಿದ. ಇದೇಕೆ ಹೀಗೆ ಎಂದರೆ, ಇಷ್ಟು ವರ್ಷ ನನಗೆ ಅನ್ನ ಹಾಕಿದ್ದು ಈ ಕಚೇರಿ. ಅದಕ್ಕೆ ನಮಿಸುವುದು ನನ್ನ ಕರ್ತವ್ಯ ಎಂದು ಕಚೇರಿಗೆ ದೀರ್ಘದಂಡ ನಮಸ್ಕಾರ ಮಾಡಿದ. ಅಲ್ಲಿದ್ದವರಿಗೆಲ್ಲಾ ಅದು ಒಂದು ಹೊಸ ಅನುಭವ. ಈ ಹಿಂದೆ ಯಾರೂ ಅಂತಹ ಯೋಚನೆ ಮಾಡಿರಲಿಲ್ಲ. ಇಲ್ಲೆಲ್ಲಾ ಸಾಧಾರಣ ವ್ಯಕ್ತಿಗಳ ಅಸಾಧಾರಣ ರೂಪ ನಮಗೆ ಗೊತ್ತಾಗುತ್ತದೆ. ವ್ಯಕ್ತಿಯ ಹೊರ ರೂಪಕ್ಕಿಂತ ಒಳ ರೂಪ ಮುಖ್ಯ ಎನಿಸುತ್ತದೆ.

ಶ್ರೀ ವ್ಯಾಸರಾಜ ತೀರ್ಥರು ವಿದ್ವತ್ತಿನ ಗಣಿ

ಶ್ರೀ ವ್ಯಾಸತೀರ್ಥ ವಿದ್ಯಾಪೀಠದ 10ನೇ ವಾರ್ಷಿಕೋತ್ಸವದಲ್ಲಿ ಸುತ್ತೂರು ಶ್ರೀ ಅಭಿಮತ

ಮೈಸೂರು, ಜು.4(ಎಸ್‌ಪಿಎನ್)– ಸಕಲ ಶಾಸ್ತ್ರಗಳಲ್ಲಿ ಪರಿಣತಿ ಹೊಂದಿದ್ದ ಶ್ರೀ ವ್ಯಾಸರಾಜ ತೀರ್ಥರು ವಿದ್ವತ್ತಿನ ಗಣಿ ಎಂದರೆ ತಪ್ಪಾಗಲಾರದು. ಈ ಸಾಲಿನಲ್ಲಿ ಈಗಿನ ಪೀಠಾಪತಿಗಳಾದ ಶ್ರೀ 1008 ಶ್ರೀವಿದ್ಯಾ ಶ್ರೀಶತೀರ್ಥ ಸ್ವಾಮೀಜಿ ಅವರನ್ನು ಪರಿಗಣಿಸಬಹುದು ಎಂದು ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅಭಿಪ್ರಾಯಪಟ್ಟರು.

ಮೈಸೂರು ಕೃಷ್ಣಮೂರ್ತಿಪುರಂನಲ್ಲಿರುವ ಶ್ರೀ ವ್ಯಾಸ ತೀರ್ಥವಿದ್ಯಾಪೀಠದ ಆವರಣದಲ್ಲಿ ಶ್ರೀ ವ್ಯಾಸರಾಜ ಮಠದ (ಸೋಸಲೆ) ವತಿಯಿಂದ ಶ್ರೀ 1008 ಶ್ರೀವಿದ್ಯಾ ಶ್ರೀಶತೀರ್ಥ ಸ್ವಾಮೀಜಿ ಶ್ರೀಪಾದಂ ಗಳವರ 9ನೇ ಪೀಠಾರೋಹಣ ವಾರ್ಷಿಕೋತ್ಸವ ಮತ್ತು ಶ್ರೀ ವ್ಯಾಸತೀರ್ಥ ವಿದ್ಯಾಪೀಠದ 10ನೇ ವಾರ್ಷಿಕೋತ್ಸವ ಸಮಾರಂಭದಲ್ಲಿ ಸಾನ್ನಿಧ್ಯ ವಹಿಸಿ ಮಾತನಾಡಿದರು.

ಶ್ರೀ ವ್ಯಾಸರಾಜ ತೀರ್ಥರು ಉತ್ಕೃಷ್ಟ ದೇವರ ನಾಮಗಳ ಕನ್ನಡದಲ್ಲಿ ರಚನೆ ಮಾಡಿದ್ದಾರೆ. ಅಲ್ಲದೆ, ಶಾಸ್ತ್ರೀಯ ಸಂಗೀತದಲ್ಲೂ ಪರಿಣತಿ ಹೊಂದಿದ್ದರು. ಅವರ ಕಾಲದ ಕರ್ನಾಟಕ ಸಂಗೀತ ವಿದ್ವಾಂಸರು ಶ್ರೀ ವ್ಯಾಸರಾಜ ತೀರ್ಥರ ಬಗ್ಗೆ ಉನ್ನತ ಅಭಿಪ್ರಾಯ ಹೊಂದಿದ್ದರು. ಅಲ್ಲದೆ, ಈಗಿನ ಶ್ರೀ ವಿದ್ಯಾಶ್ರೀಶ ತೀರ್ಥರು ತಮ್ಮ ಪೂರ್ವಾಶ್ರಮದಲ್ಲಿ ಬೆಂಗಳೂರು ಮತ್ತು ತಿರುಪತಿ ವಿವಿಗಳಲ್ಲಿ ಕುಲಪತಿಗಳಾಗಿ ಉತ್ತಮ ಕೆಲಸ ಮಾಡಿದ್ದು, ಇವರು ಶ್ರೀ ವ್ಯಾಸರಾಜ ಮಠದ ಪೀಠಾಧಿಪತಿಗಳಾದ ಮೇಲೆ ಅದರ ಹಿಂದಿನ ವೈಭವ ಮರುಕಳಿಸುವಲ್ಲಿ ಇವರು ಸಾಕಷ್ಟು ಶ್ರಮಿಸುತ್ತಿದ್ದಾರೆ ಎಂದರು.

ಶ್ರೀವಿದ್ಯಾಶ್ರೀಶ ತೀರ್ಥರು ಶ್ರೀ ಮಠದ ಉಸ್ತುವಾರಿ ವಹಿಸಿಕೊಂಡು 9 ವರ್ಷ ಪೂರೈಸಿದ್ದು, ಈ ಅವಧಿಯಲ್ಲಿ ಮಠದ ಹಿಂದಿನ ವಿದ್ವತ್ತಿನ ವೈಭವವನ್ನು ಮರುಕಳಿಸಲು ಸಾಕಷ್ಟು ಶ್ರಮಿಸಿ, ಭಕ್ತರ ಮನ ಗೆಲ್ಲುವಲ್ಲಿ ಯಶಸ್ವಿಯಾಗಿದ್ದಾರೆ. ನಿವೃತ್ತ ಐಎಎಸ್ ಅಧಿಕಾರಿ ಕೆ.ಜಯರಾಜ್ ಅವರ ಮಾರ್ಗದರ್ಶನದಲ್ಲಿ ಈ ಮಠ ಹಲವು ಸುಧಾರಣೆಗಳನ್ನು ಕಂಡಿದೆ. ಧಾರ್ಮಿಕ ಕ್ಷೇತ್ರದಲ್ಲಿ ಶ್ರೀ ವ್ಯಾಸರಾಜ ಮಠದ ವೈಭವ ಮರುಕಳುಹಿಸುವಲ್ಲಿ ಅವರ ಕೊಡುಗೆಯೂ ಇದೆ ಎಂದರು.

ಶ್ರೀಗಳು ತಿರುಪತಿ ವಿವಿಯಲ್ಲಿ ಕುಲಪತಿಗಳಾಗಿದ್ದ ವೇಳೆ, ಹಿಂದಿನ ಪೇಜಾವರ ಶ್ರೀಗಳು ತಿರುಪತಿ ಸುತ್ತಮುತ್ತ ಅನ್ಯಧರ್ಮೀಯರ ಉಪಟಳದ ವಿರುದ್ಧ ಧ್ವನಿಯೆತ್ತಿದ್ದಾಗ, ಶ್ರೀಗಳ ಹೋರಾಟಕ್ಕೆ ಒತ್ತಾಸೆಯಾಗಿ ನಿಂತಿದ್ದವರು ಶ್ರೀವಿದ್ಯಾಶ್ರೀಶ ತೀರ್ಥರು, ಅವರು ಹಿಂದೂ ಧರ್ಮ ಹಾಗೂ ವೇದ–ಉಪನಿಷತ್‌ಗಳ ಉಳಿವಿಗೆ ಸಾಕಷ್ಟು ಕೊಡುಗೆ ನೀಡುತ್ತಿದ್ದಾರೆ ಎಂದು ಬಣ್ಣಿಸಿದರು.

ಹಿಂದಿನ ಕಾಲದಲ್ಲಿ ಜನ ಸಾಮಾನ್ಯರ ಅಗತ್ಯಗಳನ್ನು ಪೂರೈಸಲು ಸಂತರು ರಾಜಮನೆತನದ ಪ್ರೋತ್ಸಾಹವನ್ನು ಬಳಸಿಕೊಂಡ ಅಸಂಖ್ಯಾತ ನಿದರ್ಶನಗಳಿವೆ. ಪ್ರತಿಯೊಂದು ಊರುಗಳಲ್ಲೂ ಕೆರೆ, ಕಟ್ಟೆ, ವಿಶ್ರಾಂತಿ ಸ್ಥಳಗಳನ್ನು ಕಟ್ಟಿಸುತ್ತಿದ್ದರು. ಎಲ್ಲಾ ವರ್ಗದ ಜನರನ್ನು ಒಟ್ಟುಗೂಡಿಸಿ ಆಧ್ಯಾತ್ಮವಾಗಿ ಒಂದೂಗೂಡಿಸುತ್ತಿದ್ದರು ಈ ನಿಟ್ಟಿನಲ್ಲಿ ಶ್ರೀ ವ್ಯಾಸರಾಜ ತೀರ್ಥರ ಕೊಡುಗೆ ಅಪಾರ ಎಂದರು.

ಈ ಹಿಂದೆ ಗುರುಕುಲ ಪದ್ಧತಿಯಲ್ಲಿ ವಿದ್ಯಾರ್ಥಿಗಳು ಶ್ರದ್ಧೆಯಿಂದ ವಿದ್ಯೆ ಕಲಿಯುತ್ತಿದ್ದರು. ಆದರೆ, ಇತ್ತೀಚಿನ ದಿನಗಳಲ್ಲಿ ಶಿಕ್ಷಣ ಪದ್ಧತಿಯಲ್ಲಿ ಬದಲಾವಣೆಯಾಗಿದೆ. ಕೇವಲ ವೃತ್ತಿ ಮತ್ತು ವ್ಯವಹಾರ ಆಧಾರಿತ ಶಿಕ್ಷಣ ಪದ್ಧತಿ ಜಾರಿಯಲ್ಲಿರುವುದರಿಂದ ಸಾಮಾಜಿಕ ಹಾಗೂ ಆಧ್ಯಾತ್ಮ ಮೌಲ್ಯ ಕುಸಿಯುತ್ತಿವೆ ಎಂದ ಶ್ರೀಗಳು ಬೇಸರ ವ್ಯಕ್ತಪಡಿಸಿದರು.



ಶ್ರೀ 1008 ಶ್ರೀವಿದ್ಯಾಶ್ರೀಶತೀರ್ಥ ಸ್ವಾಮೀಜಿ ಶ್ರೀಪಾದಂಗಳವರ 9ನೇ ಪೀಠಾರೋಹಣ ವಾರ್ಷಿಕೋತ್ಸವವನ್ನು ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಉದ್ಘಾಟಿಸಿದರು. ಈ ವೇಳೆ ಡಿಆರ್‌ಡಿಓ ನಿವೃತ್ತ ವಿಜ್ಞಾನಿ ಪ್ರಹ್ಲಾದ್ ರಾಮರಾವ್, ಡಿಸಿಎಕ್ಸ್ ಇಂಡಿಯಾದ ಎಂಡಿ ಡಾ.ಎಚ್.ಎಸ್.ರಾಘವೇಂಧ್ರ ರಾವ್, ಅಲ್ಫಾ ವಿನ್ಯಾಸ ತಂತ್ರಜ್ಞಾನ ಸಂಸ್ಥೆ ಸಿಇಓ ಎಚ್.ಎಸ್. ಹರಿಪ್ರಸಾದ್ ಉಪಸ್ಥಿತರಿದ್ದರು

ನಿವೃತ್ತ ಐಎಎಸ್ ಅಧಿಕಾರಿ ಕೆ.ಜಯರಾಜ್ ಮಾತನಾಡಿ, ನಾನಾ ಕಾರಣಗಳಿಂದ ಶ್ರೀ ವ್ಯಾಸರಾಜ ಮಠದ ಘನತೆಗೆ ಚ್ಯುತಿ ಬರುವ ಘಟನೆಗಳು ಈ ಹಿಂದೆ ನಡೆದಿದ್ದವು. ಆ ಎಲ್ಲಾ ಸಂಕಷ್ಟಗಳಿಂದ ಶ್ರೀ ಮಠವು ತನ್ನ ಹಿಂದಿನ ವೈಭವಕ್ಕೆ ಮರುಕಳಿಸುತ್ತಿದೆ. ಶ್ರೀ ಮಠದಲ್ಲಿ ಶ್ರೀ ವ್ಯಾಸರಾಜ ಕಾಲದ ವೈಭವ ಮರುಕಳಿಸಲು ಶ್ರೀ ವಿದ್ಯಾಶ್ರೀಶ ತೀರ್ಥರ ಕಾರ್ಯ ಶ್ಲಾಘನೀಯ ಎಂದರು.

ಡಿಆರ್‌ಡಿಓ ಮಾಜಿ ವಿಜ್ಞಾನಿ ಪ್ರಹ್ಲಾದ್ ರಾಮರಾವ್ ಮಾತನಾಡಿ, ಯುವ ಸಮೂಹ ಪ್ರಯತ್ನದಿಂದ ವಿಕಸಿತ ಭಾರತ ರೂಪುಗೊಳ್ಳಲು ಸಾಧ್ಯ ಎಂದ ಅವರು, ಗುರುಕುಲದ ಶಿಕ್ಷಣದಲ್ಲಿ ವಿಜ್ಞಾನ, ತಂತ್ರಜ್ಞಾನದ ಕಲಿಕೆಯಿತ್ತು. ಆಧುನಿಕ ಶಿಕ್ಷಣವೂ ಅದನ್ನೇ ಮುಂದುವರಿಸಿದೆ. ಪೂರ್ವ ಕಾಲದಲ್ಲಿನ ಆಚರಣೆಗಳಿಗೂ ವೈಜ್ಞಾನಿಕತೆಯ ಸ್ಪರ್ಶ ಇತ್ತು ಇಂದಿನ ವಿದ್ಯಾರ್ಥಿಗಳು ಎಲ್ಲಾ ವಿಚಾರಗಳ ಅಧ್ಯಯನ ಮಾಡುವುದೊಂದಿಗೆ ಆಧ್ಯಾತ್ಮಿಕವಾಗಿಯೂ ತೊಡಗಿಸಿಕೊಳ್ಳಬೇಕು. ವ್ಯಾಸರಾಜ ಮಠ ನೀಡುತ್ತಿರುವ ಶಿಕ್ಷಣವು ಇತರರಿಗೆ ಮಾದರಿಯಾಗಿತ್ತು. ಇಂತಹ ಕಾರ್ಯಕ್ಕೆ ಎಲ್ಲರೂ ಸಹಕಾರ ನೀಡಬೇಕು. ಭವಿಷ್ಯದ ಭಾರತದಲ್ಲಿ ವಿಜ್ಞಾನ, ತಂತ್ರಜ್ಞಾನದೊಂದಿಗೆ ದೇಶದ ರಕ್ಷಣೆಗಾಗಿ ಯುದ್ಧ ಭ್ಯಾಸವು ಅಗತ್ಯವಾಗಿದೆ ಎಂದು ಅಭಿಪ್ರಾಯಪಟ್ಟರು.

ಈ ವೇಳೆ ಡಿಆರ್‌ಡಿಓ ನಿವೃತ್ತ ವಿಜ್ಞಾನಿ ಪ್ರಹ್ಲಾದ್ ರಾಮರಾವ್, ಡಿಸಿಎಕ್ಸ್ ಇಂಡಿಯಾದ ವ್ಯವಸ್ಥಾಪಕ ನಿರ್ದೇಶಕ ಡಾ.ಎಚ್.ಎಸ್.ರಾಘವೇಂಧ್ರ ರಾವ್, ಅಲ್ಫಾ ವಿನ್ಯಾಸ ತಂತ್ರಜ್ಞಾನ ಸಂಸ್ಥೆಯ ಸಿಇಓ ಎಚ್.ಎಸ್. ಹರಿಪ್ರಸಾದ್ ಸೇರಿದಂತೆ ಇತರರಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಬೂಕರ್ ಪ್ರಶಸ್ತಿ ವಿಜೇತ ಬಾನು ಮುಷ್ತಾಕ್‌ಗೆ ಮೈಸೂರಲ್ಲಿ ಅಭಿನಂದನೆ

ಮೈಸೂರು ಈಗ ಲಂಡನ್‌ನಂತೆ ಕಂಗೊಳಿಸುತ್ತಿದೆ: ಮುಷ್ತಾಕ್ ಸಂತಸ



ಅಭಿರುಚಿ ಪ್ರಕಾಶನದ 30ನೇ ವರ್ಷದ ಸಂಭ್ರಮಾಚರಣೆ ಅಂಗವಾಗಿ ಬೂಕರ್ ಪ್ರಶಸ್ತಿ ವಿಜೇತರಾದ ಲೇಖಕಿ ಬಾನು ಮುಷ್ತಾಕ್ ಅವರನ್ನು ಅಭಿನಂದಿಸಲಾಯಿತು. ಬಹುಭಾಷಾ ನಟ ಪ್ರಕಾಶ್ ರೈ, ಹಿರಿಯ ಲೇಖಕ ಪ್ರೊ.ಪಿ.ವಿ.ನಂಜರಾಜ ಅರಸು, ರಾಜ್ಯ ಮಾಹಿತಿ ಆಯುಕ್ತ ಡಾ.ಹರೀಶ್ ಕುಮಾರ್, ಹಿರಿಯ ಪ್ರಕಾಶಕ ಪ್ರೊ.ಬಿ.ಎನ್.ಶ್ರೀರಾಮ್, ಅಭಿರುಚಿ ಗಣೇಶ್ ಮತ್ತಿತರರಿದ್ದರು.

ಮೈಸೂರು, ಜು.4(ಎಂಕೆ)– ಮೈಸೂರಿನ ಜಯಲಕ್ಷ್ಮಿಪುರಂನಲ್ಲಿರುವ ಕೊಡಗು ಸಹಕಾರ ಸಂಘದ ಸಭಾಂಗಣದಲ್ಲಿ ಅಭಿರುಚಿ ಪ್ರಕಾಶನದ 30ನೇ ವರ್ಷದ ಸಂಭ್ರಮಾಚರಣೆ ಅಂಗವಾಗಿ ಬೂಕರ್ ಪ್ರಶಸ್ತಿ ವಿಜೇತರಾದ ಲೇಖಕಿ ಬಾನು ಮುಷ್ತಾಕ್ ಅವರಿಗೆ ಅಭಿನಂದನೆ ಹಾಗೂ ಪುಸ್ತಕ ಬಿಡುಗಡೆ ಸಮಾರಂಭ ಶುಕ್ರವಾರ ನಡೆಯಿತು.

ಕಾರ್ಯಕ್ರಮ ಉದ್ಘಾಟಿಸಿದ ಬಹುಭಾಷಾ ನಟ ಪ್ರಕಾಶ್ ರೈ, ಬೂಕರ್ ಪ್ರಶಸ್ತಿ ವಿಜೇತರಾದ ಬಾನು ಮುಷ್ತಾಕ್ ಅವರನ್ನು ಸನ್ಮಾನಿಸಿ, ಅಭಿನಂದಿಸಿದರು. ಬಳಿಕ ಮಾತನಾಡಿದ ಅವರು, ಬಾನು ಮುಷ್ತಾಕ್ ಅವರ ಬರವಣಿಗೆ ನೋಡಿದಾಗ ನನಗೆ ಸಾಹಿತ್ಯಕ್ಕಿಂತ ಪ್ರತಿರೋಧದ ಧ್ವನಿಯಾಗಿ ಕೇಳಿಸುತ್ತದೆ. ನನ್ನದಲ್ಲ, ನಮ್ಮದಲ್ಲದ ನೋವಿಗೆ ಸ್ಪಂದಿಸಿ ಹರಿಯುವ ಕಣ್ಣೀರಿಗೆ ಅವರ ಬರವಣಿಗೆಯ ಪರಿಚಯವಾಗಿದೆ. ಸೂಕ್ಷ್ಮ ಸಂವೇದನೆಯ ನಾಲ್ಕು ದಶಕಗಳ ಅನ್ಯಾಯದ ವಿರುದ್ಧದ ಧ್ವನಿಗೆ ವಿಶ್ವ ಮಟ್ಟದ ಬೂಕರ್ ಪ್ರಶಸ್ತಿ ಸಂದಿದ್ದು, ಆ ಮೂಲಕ ಬಾನು ಮುಷ್ತಾಕ್ ಅವರು ಕನ್ನಡ ಸಾಹಿತ್ಯದತ್ತ ಎಲ್ಲರನ್ನು ಸೆಳೆದಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಮೈಸೂರು ಲಂಡನ್‌ನಂತಿದೆ: ಸನ್ಮಾನ ಸ್ವೀಕರಿಸಿದ ಬಳಿಕ ಮಾತನಾಡಿದ ಲೇಖಕಿ ಬಾನು ಮುಷ್ತಾಕ್, ಲಂಡನ್‌ನಲ್ಲಿ ಬೂಕರ್ ಪ್ರಶಸ್ತಿ ಸಲುವಾಗಿ ಹೋದಾಗ ಒಂದು ವಾರಕ್ಕೂ ಹೆಚ್ಚಾಗಿ ಅಲ್ಲಿಯೇ ಉಳಿದುಕೊಂಡಿದ್ದೇವು. ಪ್ರಕಾಶಕರು ಕಾರ್‌ನಲ್ಲಿ ನಮ್ಮನ್ನು ಅಲ್ಲಿನ ಫೆಸ್ಟಿವಲ್ ಒಂದಕ್ಕೆ ಕರೆದುಕೊಂಡು ಹೋಗುವಾಗ ಎಲ್ಲರೂ ನಮ್ಮನ್ನು ಚಿರಪರಿಚಿತರಂತೆಯೇ ನೋಡುತ್ತಿದ್ದರು. ಆಗ ನನಗೆ ಇಲ್ಲಿಗೂ ಅಲ್ಲಿಗೂ ಸಾಕಷ್ಟು ಸಾಮ್ಯತೆ ಇದೆಯಲ್ಲಾ ಅನ್ನಿಸುತ್ತಿತ್ತು. ನಾನು ಆಗಾಗ ಮೈಸೂರಿಗೆ ಬಂದಿದ್ದೂ ಇವತ್ತಿನ ಮೈಸೂರನ್ನು ನೋಡಿದಾಗ ಮೈಸೂರು ಏನಾದರೂ ಲಂಡನ್‌ನಲ್ಲಿದೆಯೇ ಎನಿಸುತ್ತಿದೆ ಎಂದು ಮೈಸೂರಿನ ಮೇಲಿನ ಅಭಿಮಾನ ತೋರಿದರು.

ಪಾರಂಪರಿಕ ಕಟ್ಟಡಗಳ ಸರಂಕ್ಷಣೆ ಅಗತ್ಯ: ಮೈಸೂರಿನಂತೆಯೇ ದೊಡ್ಡ ದೊಡ್ಡ ರಸ್ತೆಗಳು, ಪಾರಂಪರಿಕ ಕಟ್ಟಡಗಳು ಲಂಡನ್‌ನಲ್ಲಿಯೂ ಇವೆ. ಲಂಡನ್‌ನಲ್ಲಿ 300–400 ವರ್ಷಗಳಷ್ಟು ಹಳೆಯ ಪಾರಂಪರಿಕ ಕಟ್ಟಡಗಳಿಗೆ ಪಾರಂಪರಿಕ ಕಟ್ಟಡವೆಂಬ ಟ್ಯಾಗ್ ಅಂಟಿಸಿ, ಯಥಾಸ್ಥಿತಿಯಲ್ಲಿ ಸಂರಕ್ಷಣೆ ಮಾಡಿ ಪ್ರವಾಸಿಗರ ವೀಕ್ಷಣೆಗೆ ಅವಕಾಶ ಮಾಡಿಕೊಟ್ಟು ಹಣ ಸಂಪಾದನೆ ಮಾಡುತ್ತಿದ್ದಾರೆ. ಆದರೆ, ನಮ್ಮಲ್ಲಿರುವ ಪಾರಂಪರಿಕ ಕಟ್ಟಡಗಳನ್ನು ಸಂರಕ್ಷಣೆ ಮಾಡದೇ ಏನೇನೋ ಮಾಡಿಬಿಟ್ಟಿದ್ದೇವೆ. ಲಂಡನ್‌ನ ಮ್ಯೂಸಿಯಂಗಳಲ್ಲಿ ಭಾರತದಿಂದ ಕದ್ದು ತೆಗೆದುಕೊಂಡು ಹೋದ ಕತ್ತಿ, ಕಿರೀಟಗಳನ್ನು ತೋರಿಸಿ ಹಣ ಸಂಪಾದಿಸುತ್ತಿದ್ದಾರೆ ಎಂದು ಪಾರಂಪರಿಕ ಕಟ್ಟಡಗಳ ಮಹತ್ವವನ್ನು ತಿಳಿಸುತ್ತಾ ಬೂಕರ್ ಪ್ರಶಸ್ತಿ ಸ್ವೀಕರಿಸಿದ ಸಂದರ್ಭ ಮತ್ತು ಲಂಡನ್ ಪ್ರವಾಸದಲ್ಲಾದ ಅನುಭವಗಳನ್ನು ಮೆಲುಕು ಹಾಕಿದರು.

ಪುಸ್ತಕಗಳ ಬಿಡುಗಡೆ: ಇದೇ ವೇಳೆ ಬೂಕರ್ ಪ್ರಶಸ್ತಿ ವಿಜೇತರಾದ ಲೇಖಕಿ ಬಾನು ಮುಷ್ತಾಕ್ ರಚಿತ 'ಎದೆಯ ಹಣತೆ(3ನೇ ಮುದ್ರಣ)', ಹಸೀನಾ ಮತ್ತು ಇತರೆ ಕಥೆಗಳು(4ನೇ ಮುದ್ರಣ)' ಹಾಗೂ ಹಿರಿಯ ಲೇಖಕ ಪ್ರೊ.ಪಿ.ವಿ.ನಂಜರಾಜ ಅರಸು ರಚಿತ 'ಇತಿಹಾಸ ಸೃಷ್ಟಿಸಿದ ಪುಟ್ಟಹಳ್ಳಿ ಹದಿನಾರು', 'ಟಿಪ್ಪು ಮಾನ್ಯತೆ ಸಿಗದ ಸುಲ್ತಾನ: ಅಂದು–ಇಂದು(2ನೇ ಮುದ್ರಣ)' ಕೃತಿಗಳನ್ನು ಬಿಡುಗಡೆ ಮಾಡಲಾಯಿತು.

ಬಾನು ಮುಷ್ತಾಕ್ ಅವರ ಕೃತಿಗಳ ಕುರಿತು ಕನ್ನಡ ಪ್ರಾಧ್ಯಾಪಕಿ ಡಾ.ಲತಾ ಮೈಸೂರು ಮಾತನಾಡಿದರು. ರಾಜ್ಯ ಮಾಹಿತಿ ಆಯುಕ್ತ ಡಾ.ಹರೀಶ್ ಕುಮಾರ್, ಹಿರಿಯ ಪ್ರಕಾಶಕ ಪ್ರೊ.ಬಿ.ಎನ್.ಶ್ರೀರಾಮ್, ಅಭಿರುಚಿ ಪ್ರಕಾಶನದ ಅಭಿರುಚಿ ಗಣೇಶ್, ಆರ್.ಸುಮ ಮತ್ತಿತರರಿದ್ದರು.

ಈ ಪ್ರಪಂಚದಲ್ಲಿ ದ್ವೇಷಕ್ಕೆ, ಯುದ್ಧಕ್ಕೆ ಅವಕಾಶ ಇಲ್ಲ...!

ನಮ್ಮ ಹಿರಿಯರು ಹೇಳಿದಂತೆ 'ದೇಶ ಸುತ್ತು; ಕೋಶ ಓದು' ಎಂಬುದು ನಿಜಕ್ಕೂ ಒಳ್ಳೆಯದು. ಆ ಸೂಕ್ತಿಯನ್ನು ಪಾಲಿಸಿದರೆ ಪ್ರಪಂಚ ಎಷ್ಟು ವಿಶಾಲವಾಗಿದೆ. ಜನರು ಎಷ್ಟು ಸೌಮ್ಯ ಹಾಗೂ ಸ್ನೇಹಮಯಿಯಾಗಿದ್ದಾರೆ ಎಂಬುದು ತಿಳಿಯುತ್ತದೆ. ಈ ಪ್ರಪಂಚದಲ್ಲಿ ದ್ವೇಷಕ್ಕೆ, ಯುದ್ಧಕ್ಕೆ ಅವಕಾಶ ಇಲ್ಲ. ಆದ್ದರಿಂದ ನಮ್ಮ ಹಿರಿಯರು ಹೇಳಿದಂತೆ ಒಂದು ಮನಸ್ಥಿತಿಯಿಂದ ದೇಶ ಸುತ್ತೋಣ, ಕೋಶ ಓದೋಣ. ಮನುಷ್ಯ ಮನುಷ್ಯನ ನಡುವಿನ ಸಂಬಂಧವನ್ನು ಬೆಸೆಯುವ ಮನಸ್ಸು ನಮ್ಮದಾದರೆ ಅವಮಾನಗಳು, ಅನುಮಾನಗಳೆಲ್ಲವೂ ಮೂಲೆ ಸೇರಲಿವೆ.

- ಬಾನು ಮುಷ್ತಾಕ್,
ಬೂಕರ್ ಪ್ರಶಸ್ತಿ ವಿಜೇತ ಲೇಖಕಿ

46 ರೂ. ಮೊತ್ತಕ್ಕೆ 50 ರೂ. ಟಿಕೆಟ್: ಭಾರೀ ಟೀಕೆ ಬೆನ್ನಲ್ಲೇ ಕೆಎಸ್‌ಆರ್‌ಟಿಸಿ ಆದೇಶ ರದ್ದು



ಬೆಂಗಳೂರು, ಜು.4– 46 ರೂ. ಟಿಕೆಟ್ ಮೊತ್ತ ಆಗಿದ್ದರೂ ಪ್ರಯಾಣಿಕರಿಂದ 50 ರೂ. ಪ್ರಯಾಣ ಶುಲ್ಕ ವಿಧಿಸಿದ್ದಕ್ಕೆ ಕೆಎಸ್ ಆರ್‌ಟಿಸಿ ವಿರುದ್ಧ ಸಾಮಾಜಿಕ ಜಾಲತಾಣದಲ್ಲಿ ಭಾರೀ ಟೀಕೆ ವ್ಯಕ್ತವಾಗುತ್ತಿದೆ.

ಪ್ರಯಾಣಿಕರೊಬ್ಬರು ಜುಲೈ 2ರ ರಾತ್ರಿ 9 ಗಂಟೆ ದಕ್ಷಿಣ ಕನ್ನಡ ಜಿಲ್ಲೆಯ ಉಪ್ಪಿನಂಗಡಿಯಿಂದ ಅಲಂಗಾರು ಕಡೆಗೆ ಸ್ಲೀಪರ್ ಬಸ್ಸಿನಲ್ಲಿ ಹೊರಟ್ಟಿದ್ದಾರೆ. ಟಿಕೆಟ್ ದರ 46 ರೂ. ಆಗಿದ್ದರೂ ನಿರ್ವಾಹಕ 50 ರೂ. ಪಡೆದಿದ್ದಾನೆ.

ಈ ಟಿಕೆಟಿನ ಫೋಟೋ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗುತ್ತಿದ್ದಂತೆ ಮಾಜಿ ಸಚಿವ, ರಾಜಾಜಿನಗರದ ಬಿಜೆಪಿ ಶಾಸಕ ಸುರೇಶ್ ಕುಮಾರ್ ಅವರು ಪೋಸ್ಟ್ ಶೇರ್ ಮಾಡಿ, ರಾಜ್ಯ ಸಾರಿಗೆ ಸಚಿವರು ಅಥವಾ ಸಂಬಂಧಪಟ್ಟ ಅಧಿಕಾರಿ ಇದಕ್ಕೆ ಸ್ಪಷ್ಟೀಕರಣ ನೀಡಬೇಕೆಂದು ಕೇಳಿದ್ದರು. ಭಾರೀ ಟೀಕೆ ವ್ಯಕ್ತವಾಗುತ್ತಿದ್ದಂತೆ ಕೆಎಸ್‌ಆರ್‌ಟಿಸಿ ಸ್ಪಷ್ಟನೆ ನೀಡಿ ಹಿಂದೆ ಹೊರಡಿಸಿದ್ದ ಆದೇಶವನ್ನು ರದ್ದುಗೊಳಿಸಿದೆ.

ಪ್ರಯಾಣಿಕರು ಟಿಕೆಟ್ ಕಾಯ್ದಿರಿಸಲು ಪಿಒಎಸ್ ಯಂತ್ರಗಳನ್ನು ಹಾಗೂ ಇಟಿಎಂ ಯಂತ್ರಗಳಲ್ಲಿ ಯುಪಿಐ ವ್ಯವಸ್ಥೆ ಒದಗಿಸಿದ್ದರಿಂದ ಪ್ರಯಾಣ ದರವನ್ನು ರೌಂಡ್ ಆಫ್ ಮಾಡುವ ಅವಶ್ಯಕತೆ ಇಲ್ಲದಿರುವುದರಿಂದ ಈಗ ಈ ಆದೇಶವನ್ನು ಹಿಂದಕ್ಕೆ ಪಡೆಯಲಾಗಿದೆ. ಈ ವ್ಯವಸ್ಥೆಯನ್ನು ಸ್ಥಗಿತಗೊಳಿಸಲು ಈಗಾಗಲೇ ತೀರ್ಮಾನ ಕೈಗೊಳ್ಳಲಾಗಿದ್ದು, ತಂತ್ರಾಂಶದಲ್ಲಿ ಈ ಸಂಬಂಧ ಬದಲಾವಣೆ ಮಾಡುವ ಕ್ರಮ ಪ್ರಗತಿಯಲ್ಲಿರುತ್ತದೆ.

ಪ್ರವೀಣ್ ನೆಟ್ಟಾರು ಹತ್ಯೆಯ ಪ್ರಮುಖ ಆರೋಪಿ ವಶಕ್ಕೆ

ಕಣ್ಣೂರು: ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಬೆಳ್ಳಾರೆಯ ಬಿಜೆಪಿ ಯುವ ಮೋರ್ಚಾ ಸದಸ್ಯ ಪ್ರವೀಣ್ ನೆಟ್ಟಾರು ಹತ್ಯೆ ಪ್ರಕರಣದ ಪ್ರಮುಖ ಆರೋಪಿಯನ್ನು ವಶಕ್ಕೆ ಪಡೆಯಲಾಗಿದೆ ಎಂದು ರಾಷ್ಟ್ರೀಯ ತನಿಖಾ ದಳ (ಎನ್‌ಐಎ) ತಿಳಿಸಿದೆ.

ಕಳೆದೆರಡು ವರ್ಷಗಳಿಂದ ತಲೆ ಮರೆಸಿಕೊಂಡಿದ್ದ ಆರೋಪಿ ಅಬ್ದುಲ್ ರಹಿಮಾನ್‌ನನ್ನು ಎನ್‌ಐಎ ವಶಕ್ಕೆ ಪಡೆದಿದೆ. ಕತಾರ್‌ನಿಂದ ಬಂದ ಆರೋಪಿಯನ್ನು ಕೇರಳದ ಕಣ್ಣೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಎನ್‌ಐಎ ತಂಡ ವಶಕ್ಕೆ ಪಡೆದಿದೆ. ಬೆಳ್ಳಾರೆಯಲ್ಲಿ 2022ರ ಜುಲೈನಲ್ಲಿ ಪ್ರವೀಣ್ ನೆಟ್ಟಾರು ಹತ್ಯೆ ನಡೆದಿತ್ತು. ಈ ಪ್ರಕರಣದ ತನಿಖೆಯನ್ನು 2022ರ ಆಗಸ್ಟ್‌ನಲ್ಲಿ ಎನ್‌ಐಎಗೆ ಹಸ್ತಾಂತರಿಸಲಾಗಿತ್ತು.

ಇಂದಿನಿಂದ ಎರಡು ದಿನ ಮೈಸೂರು ಸಾಹಿತ್ಯ ಸಂಭ್ರಮ



ಪ್ರಮೋದಾ ದೇವಿ ಒಡೆಯರ್



ಬಾನು ಮುಷ್ತಾಕ್



ದೀಪಾ ಭಾಸ್ತಿ



ಪ್ರಹ್ಲಾದ ರಾಮರಾವ್


ಮೈಸೂರು, ಜು.4– ಮೈಸೂರು ಲಿಟರರಿ ಫೋರಂ ಚಾರಿಟೇಬಲ್ ಟ್ರಸ್ಟ್ ಮತ್ತು ಮೈಸೂರು ಬುಕ್ ಕ್ಲಬ್ಸ್ ಚಾರಿಟೇಬಲ್ ಟ್ರಸ್ಟ್ ಸಹಯೋಗದಲ್ಲಿ ಎರಡು ದಿನಗಳ 'ಮೈಸೂರು ಸಾಹಿತ್ಯ ಸಂಭ್ರಮ' ಆಯೋಜಿಸಲಾಗಿದೆ.

ನಗರದ ಸದರನ್ ಸ್ಟಾರ್ ಹೋಟೆಲ್‌ನಲ್ಲಿ ಎರಡು ದಿನಗಳ ಕಾಲ ನಡೆಯಲಿರುವ 9ನೇ ಆವೃತ್ತಿಯ 'ಸಾಹಿತ್ಯ ಸಂಭ್ರಮ (ಲಿಟರೇಚರ್ ಫೆಸ್ಟಿವಲ್)'ವನ್ನು ಶನಿವಾರ ಬೆಳಗ್ಗೆ 10ಕ್ಕೆ ರಾಜವಂಶಸ್ಥೆ ಪ್ರಮೋದಾ ದೇವಿ ಒಡೆಯರ್ ಉದ್ಘಾಟಿಸಲಿದ್ದಾರೆ.

ಇತ್ತೀಚೆಗಷ್ಟೇ ಅಂತಾರಾಷ್ಟ್ರೀಯ ಬೂಕರ್ ಪ್ರಶಸ್ತಿಗೆ ಭಾಜನರಾದ ಬಾನು ಮುಷ್ತಾಕ್ ಹಾಗೂ ದೀಪಾ ಭಾಸ್ತಿ, ಡಿಆರ್‌ಡಿಓ ನಿವೃತ್ತ ವಿಜ್ಞಾನಿ ಪ್ರಹ್ಲಾದ ರಾಮರಾವ್ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ.

ಸಾಹಿತ್ಯ ಸಂಭ್ರಮದ ಎರಡೂ ದಿನ (ಶನಿವಾರ–ಭಾನುವಾರ) ಜ್ಯೋತಿ ಸಭಾಂಗಣದಲ್ಲಿ ಇಂಗ್ಲಿಷ್ ಹಾಗೂ ಗಾರ್ಡೇನಿಯಾ ವೇದಿಕೆಯಲ್ಲಿ ಕನ್ನಡ ಭಾಷೆಯಲ್ಲಿ ಭಾಷಣಗಳು ಮತ್ತು ಚರ್ಚೆಗಳು ನಡೆಯಲಿವೆ. ಸಾಹಿತ್ಯ, ಇತಿಹಾಸ, ಪತ್ರಿಕೋದ್ಯಮ, ಸಿನಿಮಾ, ಸಂಗೀತ, ರಂಗಭೂಮಿ, ಜಾನಪದ ಸಂಸ್ಕೃತಿ ಮತ್ತು ಕಲೆಗಳು ಸೇರಿದಂತೆ ವೈವಿಧ್ಯಮಯ ಕ್ಷೇತ್ರಗಳ ಸಾಧಕರು ಭಾಗವಹಿಸಲಿದ್ದಾರೆ ಎಂದು ಮೈಸೂರು ಸಾಹಿತ್ಯ ಉತ್ಸವ ಮತ್ತು ಮೈಸೂರು ಸಾಹಿತ್ಯ ಸಂಭ್ರಮ–2025ರ ಸಂಸ್ಥಾಪಕ ನಿರ್ದೇಶಕಿ ಶುಭ ಸಂಜಯ್ ಅರಸ್ ತಿಳಿಸಿದ್ದಾರೆ.

ಕೆಬಿಜಿ ಅವರ 'ದಿ ಹಿಡನ್ ಲೈಫ್ ಆಫ್ ಎ ಯೋಗಿ' ಕೃತಿ ಬಿಡುಗಡೆ





ಡಾ.ಕೆ.ಬಿ.ಗಣಪತಿ

ಮೈಸೂರು, ಜು.4– 'ಮೈಸೂರು ಸಾಹಿತ್ಯ ಸಂಭ್ರಮ'ದ ಉದ್ಘಾಟನೆ ಬಳಿಕ 'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ಪತ್ರಿಕೆಗಳ ಸಂಸ್ಥಾಪಕ ಸಂಪಾದಕರಾದ ಡಾ.ಕೆ.ಬಿ.ಗಣಪತಿ(ಕೆಬಿಜಿ) ಅವರ 'ದಿ ಹಿಡನ್ ಲೈಫ್ ಆಫ್ ಎ ಯೋಗಿ' ಪುಸ್ತಕ ಬಿಡುಗಡೆಯಾಗಲಿದೆ.

ಕೆ.ಬಿ.ಗಣಪತಿ ಅವರು 1939ರಲ್ಲಿ ಜನಿಸಿದ್ದು, 1978ರಲ್ಲಿ 'ಸ್ಟಾರ್ ಆಫ್ ಮೈಸೂರ್' ಸಂಜೆ ಆಂಗ್ಲ ದೈನಿಕ ಹಾಗೂ 1980ರಲ್ಲಿ 'ಮೈಸೂರು ಮಿತ್ರ' ಬೆಳಗಿನ ಕನ್ನಡ ದೈನಿಕ ಆರಂಭಿಸಿದರು. ಇವರು 'ಮೈಸೂರು ಮಿತ್ರ'ದಲ್ಲಿ 'ಛೂಮಂತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್'ನಲ್ಲಿ 'ಅಬ್ರಕಡಬ್ರ' ಅಂಕಣಗಳಲ್ಲಿ ನಿರಂತರವಾಗಿ ಸಾವಿರಾರು ಲೇಖನಗಳನ್ನು ಬರೆದಿದ್ದಾರೆ. ಕೆಬಿಜಿಯವರ ಅಂಕಣಗಳೆಂದರೆ ಎಲ್ಲಾ ವಿಚಾರವನ್ನು ಒಳಗೊಂಡಂತವು ಅರ್ಥಾತ್ 'ನವರಸ'ಗಳಿಂದ ಕೂಡಿರುತ್ತವೆ ಎಂಬುದು ಓದುಗರ ಪ್ರೀತಿಯ ಅಚ್ಚುಮೆಚ್ಚಿನ ಸಂತಸದ ನುಡಿ.

ಸುಪ್ರೀಂಕೋರ್ಟ್, ಚುನಾವಣಾ ಆಯೋಗದ ನಿರ್ದೇಶನದಂತೆ ಚುನಾವಣಾ ಕಾರ್ಯಗಳಿಗೆ ಶಿಕ್ಷಕರ ನಿಯೋಜನೆ

ರಾಜ್ಯ ಜಂಟಿ ಮುಖ್ಯ ಚುನಾವಣಾಧಿಕಾರಿ ಎಸ್.ಯೋಗೇಶ್ವರ್ ಸ್ಪಷ್ಟನೆ

ಮೈಸೂರು, ಜೂ.4(ಎಸ್‌ಪಿಎನ್)– ಸುಪ್ರೀಂಕೋರ್ಟ್ ಮತ್ತು ಭಾರತ ಚುನಾವಣಾ ಆಯೋಗದ ನಿರ್ದೇಶನದಂತೆ ಶಿಕ್ಷಕರನ್ನು ಮತದಾರರ ಪಟ್ಟಿ ಪರಿಷ್ಕರಣೆ ಮತ್ತು ಚುನಾವಣಾ ಕಾರ್ಯಗಳಿಗೆ ನಿಯೋಜಿಸಲಾಗುತ್ತಿದೆ ಎಂದು ರಾಜ್ಯ ಜಂಟಿ ಮುಖ್ಯ ಚುನಾವಣಾಧಿಕಾರಿ ಎಸ್.ಯೋಗೇಶ್ವರ್ ಸ್ಪಷ್ಟಪಡಿಸಿದ್ದಾರೆ.

ಶಾಲಾ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿ ರಶ್ಮಿ ವಿ.ಮಹೇಶ್ ಅವರು, ಸಾರ್ವಜನಿಕ ಹಿತಾಸಕ್ತಿ ಅಡಿಯಲ್ಲಿ ಶಾಲಾ ಹಂತದ ವಿವಿಧ ಶಿಕ್ಷಕರನ್ನು ಚುನಾವಣಾ ಸಂಬಂಧಿತ ಮತದಾರರ ಪಟ್ಟಿ ಪರಿಷ್ಕರಣೆ ಕಾರ್ಯಕ್ಕೆ ನಿಯೋಜಿಸಿರುವುದನ್ನು ಹಿಂಪಡೆಯಲು ಜಿಲ್ಲಾ ಚುನಾವಣಾಧಿಕಾರಿಗಳಿಗೆ ಸ್ಪಷ್ಟ ನಿರ್ದೇಶನ ನೀಡುವಂತೆ ಕೋರಿದ್ದರು.

ಇದಕ್ಕೆ ಸ್ಪಷ್ಟನೆ ನೀಡಿರುವ ಚುನಾವಣಾ ಆಯೋಗ, ಶಿಕ್ಷಕರನ್ನು ಬೂತಮಟ್ಟದ ಅಧಿಕಾರಿಗಳನ್ನಾಗಿ ನೇಮಕ ಮಾಡುವ ಕುರಿತು ಸುಪ್ರೀಂಕೋರ್ಟ್ ಮತ್ತು ಭಾರತ ಚುನಾವಣಾ ಆಯೋಗ ಹೊರಡಿಸಿರುವ ನಿರ್ದೇಶನಗಳು ಹಾಗೂ ಮಾರ್ಗಸೂಚಿ ಅನ್ವಯ ಬೋಧಕ ಸಿಬ್ಬಂದಿಗಳನ್ನು ರಜಾ ದಿನ ಹಾಗೂ ಇತರೆ ಬಿಡುವಿನ ವೇಳೆಯಲ್ಲಿ ಮತದಾರರ ಪಟ್ಟಿ ಪರಿಷ್ಕರಣೆ ಹಾಗೂ ಚುನಾವಣಾ ಕರ್ತವ್ಯಕ್ಕೆ ನಿಯೋಜನೆ ಮಾಡಬಹುದು. ಅಲ್ಲದೆ, ಬೋಧಕೇತರ ಸಿಬ್ಬಂದಿಗಳನ್ನು ಕಾನೂನಿನಲ್ಲಿ ಅವಕಾಶ ಇದ್ದಲ್ಲಿ ಮಾತ್ರ ನಿಯೋಜನೆ ಮಾಡಬಹುದು ಸ್ಪಷ್ಟಪಡಿಸಿದ್ದಾರೆ.

ಮುಂದುವರೆದು ಭಾರತ ಚುನಾವಣಾ ಆಯೋಗದ ದಿನಾಂಕ:5.6.2025ರ ಸುತ್ತೋಲೆಯಲ್ಲಿ ಪ್ರಜಾ ಪ್ರತಿನಿಧಿ ಕಾಯ್ದೆ, 1950 ಕಲಂ(2) ರಡಿಯಲ್ಲಿ ಬೂತ್ ಮಟ್ಟದ ಅಧಿಕಾರಿಗಳನ್ನು ನೇಮಕ ಮಾಡುವಾಗ ಗ್ರೂಪ್ 'ಸಿ' ಸಿಬ್ಬಂದಿಯನ್ನು ಪರಿಗಣಿಸಬೇಕು. ಇವರು ಲಭ್ಯವಿಲ್ಲದಿದ್ದಾಗ ಅಂಗನವಾಡಿ ಗುತ್ತಿಗೆ ಶಿಕ್ಷಕರು ಅಥವಾ ಕೇಂದ್ರ ಸರ್ಕಾರದ ನೌಕರರನ್ನು ನೇಮಿಸಲು ನಿರ್ದೇಶನ ನೀಡಲಾಗಿರುತ್ತದೆ. ಶಿಕ್ಷಣ ಇಲಾಖೆ ಪ್ರಧಾನ ಕಾರ್ಯದರ್ಶಿಗಳ ಸುತ್ತೋಲೆಯಂತೆ ಶಿಕ್ಷಕರನ್ನು ಬೂತ್‌ಮಟ್ಟದ ಅಧಿಕಾರಿ ಹುದ್ದೆಯಿಂದ ಕೈಬಿಡಲು ಯಾವುದೇ ರೀತಿಯ ವಿನಾಯಿತಿ ಇರುವುದಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.

ಲೋಕಸಭೆ ಮತ್ತು ವಿದಾನಸಭಾ ಕ್ಷೇತ್ರಗಳ ಹಂತದಲ್ಲಿ ಬೂತ್‌ಮಟ್ಟದ ಅಧಿಕಾರಿಗಳಿಗೆ ತರಬೇತಿ ಕಾರ್ಯಕ್ರಮಗಳು ಜರುಗುತ್ತಿದ್ದು, ಪ್ರಾಥಮಿಕ ಶಾಲಾ ಶಿಕ್ಷಕರನ್ನು ಒಳಗೊಂಡಂತೆ ಬೂತ್‌ಮಟ್ಟದ ಅಧಿಕಾರಿಗಳಾಗಿ ನೇಮಕಗೊಂಡಿರುವ ಎಲ್ಲಾ ನೌಕರರು ಕಡ್ಡಾಯವಾಗಿ ತರಬೇತಿಗೆ ಹಾಜರಾಗಬೇಕು ಎಂದು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ(ಚುನಾವಣೆಗಳು)ಯ ತಿಳಿಸಿದ್ದಾರೆ.

2ನೇ ಟೆಸ್ಟ್: ಭಾರತಕ್ಕೆ 244 ರನ್ ಮುನ್ನಡೆ

ಎಡ್ಜ್‌ಬಾಸ್ಟನ್, ಜು.4– ಪ್ರವಾಸಿ ಭಾರತದ ವಿರುದ್ಧ ನಡೆಯುತ್ತಿರುವ ಆಂಡರ್ಸನ್–ತೆಂಡೂಲ್ಕರ್ ಟೆಸ್ಟ್ ಸರಣಿಯ 2ನೇ ಪಂದ್ಯದಲ್ಲಿ ಇಂಗ್ಲೆಂಡ್ ತನ್ನ ಮೊದಲ ಇನ್ನಿಂಗ್ಸ್‌ನಲ್ಲಿ 407 ರನ್‌ಗಳಿಗೆ ಆಲೌಟ್ ಆಗಿದೆ. ಇದರೊಂದಿಗೆ 2ನೇ ಇನ್ನಿಂಗ್ಸ್ ಆರಂಭಿಸಿರುವ ಭಾರತ 3ನೇ ದಿನದ ಅಂತ್ಯಕ್ಕೆ 1 ವಿಕೆಟ್ ನಷ್ಟಕ್ಕೆ 63 ರನ್ ಗಳಿಸಿದ್ದು 244 ರನ್‌ಗಳ ಮುನ್ನಡೆ ಗಳಿಸಿದೆ.

3 ವಿಕೆಟ್ ನಷ್ಟಕ್ಕೆ 77 ರನ್‌ಗಳಿಂದ ಮೂರನೇ ದಿನದಾಟ ಆರಂಭಿಸಿದ ಇಂಗ್ಲೆಂಡ್ ಸ್ವಲ್ಪ ಹೊತ್ತಲೇ ಜೋರೂಟ್ 22, ನಾಯಕ ಬೆನ್ ಸ್ಟೋಕ್ಸ್ ವಿಕೆಟ್ ಕಳೆದುಕೊಂಡಿತು. ಈ ವೇಳೆ 6ನೇ ವಿಕೆಟ್‌ಗೆ ಜೊತೆಯಾದ ಹ್ಯಾರಿ ಬ್ರೂಕ್ ಹಾಗೂ ಜೇಮಿ ಸ್ಮಿತ್ 303 ರನ್‌ಗಳ ಜೊತೆಯಾಟವಾಡಿ ಬೇರ್ಪಟ್ಟರು. ಹ್ಯಾರಿ ಬ್ರೂಕ್ 1 ಸಿಕ್ಸರ್, 17 ಬೌಂಡರಿ ಒಳಗೊಂಡ 158 ರನ್ ಗಳಿಸಿ ನಿರ್ಗಮಿಸಿದರು. ಮತ್ತೊಂದೆಡೆ ಅಬ್ಬರಿಸಿದ ಜೇಮಿ ಸ್ಮಿತ್ 4 ಸಿಕ್ಸರ್, 21 ಬೌಂಡರಿ ಒಳಗೊಂಡ 184 ರನ್ ಗಳಿಸಿ ಅಜೇಯರಾಗಿ ಉಳಿದರು. ಭಾರತದ ಪರ ಮೊಹಮ್ಮದ್ ಸಿರಾಜ್ 6, ಆಕಾಶ್ ದೀಪ್ 4 ವಿಕೆಟ್ ಉರುಳಿಸಿದರು.

ಬಳಿಕ 2ನೇ ಇನ್ನಿಂಗ್ಸ್ ಆರಂಭಿಸಿದ ಭಾರತಕ್ಕೆ ಆರಂಭಿಕರಾದ ಕೆ.ಎಲ್.ರಾಹುಲ್, ಯಶಸ್ವಿ ಜೈಸ್ವಾಲ್ ಬಿರುಸಿನ ಆರಂಭ ಒದಗಿಸಿದರು. ಮೊದಲ ವಿಕೆಟ್‌ಗೆ 51 ರನ್‌ಗಳ ಜೊತೆಯಾಟವಾಡಿದರು. ಈ ವೇಳೆ 6 ಬೌಂಡರಿ ಒಳಗೊಂಡ 28 ರನ್ ಗಳಿಸಿ ಜೈಸ್ವಾಲ್ ವಿಕೆಟ್ ಒಪ್ಪಿಸಿದರು. ಮತ್ತೊಂದೆಡೆ ಕೆ.ಎಲ್.ರಾಹುಲ್ 28 ಹಾಗೂ ಕರುಣ್ ನಾಯರ್ 7 ರನ್ ಗಳಿಸಿ 4ನೇ ದಿನಕ್ಕೆ ಬ್ಯಾಟಿಂಗ್ ಕಾಯ್ದುಕೊಂಡಿದ್ದಾರೆ.

ಕ್ರಿಮಿನಲ್ ಮಾನನಷ್ಟ ಮೊಕದ್ದಮೆ: ಡಿಕೆಶಿ ವಿರುದ್ಧದ ವಿಚಾರಣೆಗೆ ಹೈಕೋರ್ಟ್ ತಡೆ

ಬೆಂಗಳೂರು, ಜು.4– ರಾಜ್ಯದಲ್ಲಿ ಬಿಜೆಪಿ ನೇತೃತ್ವದ ಸರ್ಕಾರದ ಅವಧಿಯಲ್ಲಿ 'ಭ್ರಷ್ಟಾಚಾರ ದರ ಪಟ್ಟಿ' ಎಂಬ ಹೆಸರಿನಲ್ಲಿ ಜಾಹೀರಾತು ಪ್ರಕಟಿಸಿದ್ದ ಆರೋಪದಲ್ಲಿ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ವಿರುದ್ಧ ರಾಜ್ಯ ಬಿಜೆಪಿ ಘಟಕ ಹೂಡಿದ್ದ ಕ್ರಿಮಿನಲ್ ಮಾನನಷ್ಟ ಮೊಕದ್ದಮೆ ಪ್ರಕರಣದ ವಿಚಾರಣೆಗೆ ಕರ್ನಾಟಕ ಹೈಕೋರ್ಟ್ ಶುಕ್ರವಾರ ತಡೆ ನೀಡಿದೆ.

ಬಿಜೆಪಿ ವಿಧಾನ ಪರಿಷತ್ ಸದಸ್ಯ ಬಿಎಸ್ ಕೇಶವ ಪ್ರಸಾದ್ ಅವರು ಸಲ್ಲಿಸಿದ್ದ ಪ್ರಕರಣ ರದ್ದು ಕೋರಿ ಕೆಪಿಸಿಸಿ ಅಧ್ಯಕ್ಷರೂ ಆದ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಸ್.ಆರ್.ಕೃಷ್ಣ ಕುಮಾರ್ ಅವರಿದ್ದ ಏಕ ಸದಸ್ಯಪೀಠ, ಪ್ರತಿವಾದಿಗಳಿಗೆ ನೋಟಿಸ್ ಜಾರಿ ಮಾಡಿದರು. ಮುಂದಿನ ವಿಚಾರಣೆಯನ್ನು ಜುಲೈ 29ಕ್ಕೆ ಮುಂದೂಡಿದ್ದು, ಮುಂದಿನ ಆದೇಶದವರೆಗೆ ಸದ್ಯದ ವಿಚಾರಣೆಗೆ ತಡೆ ನೀಡಿದ್ದಾರೆ.

2023ರ ಕರ್ನಾಟಕ ವಿಧಾನಸಭಾ ಚುನಾವಣೆಗೂ ಮುನ್ನ ಕಾಂಗ್ರೆಸ್ ಪಕ್ಷವು 'ಭ್ರಷ್ಟಾಚಾರ ದರ ಪಟ್ಟಿ' ಎಂಬ ಶೀರ್ಷಿಕೆಯ ಅಡಿಯಲ್ಲಿ ಪ್ರಮುಖ ದಿನ ಪತ್ರಿಕೆಗಳ ಮುಖಪುಟದಲ್ಲಿ ವಿವಾದಾತ್ಮಕ ಜಾಹೀರಾತುಗಳನ್ನು ಪ್ರಕಟಿಸಿದ ನಂತರ ಬಿಜೆಪಿ ಮಾನನಷ್ಟ ಮೊಕದ್ದಮೆ ಹೂಡಿತ್ತು.

ಚಿನ್ನ ಕಳ್ಳಸಾಗಣೆ ಪ್ರಕರಣ: ರನ್ಯಾ ರಾವ್‌ಗೆ ಸೇರಿದ 34 ಕೋಟಿ ಮೌಲ್ಯದ ಆಸ್ತಿ ಜಪ್ತಿ



ನವದೆಹಲಿ, ಜು.4– ದುಬೈನಿಂದ ಚಿನ್ನ ಕಳ್ಳ ಸಾಗಣೆಯ ಪ್ರಕರಣದಲ್ಲಿ ಬಂಧಿತರಾಗಿ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ನ್ಯಾಯಾಂಗ ಬಂಧನದಲ್ಲಿರುವ ನಟಿ ಹರ್ಷವರ್ಧನಿ ರನ್ಯಾ (ರನ್ಯಾ ರಾವ್) ಅವರಿಗೆ ಸೇರಿದ 34.12 ಕೋಟಿ ಮೌಲ್ಯದ ಆಸ್ತಿಯನ್ನು ಜಾರಿ ನಿರ್ದೇಶನಾಲಯ ಜಪ್ತಿ ಮಾಡಿದೆ.

ಹಣ ಅಕ್ರಮ ವರ್ಗಾವಣೆ ಪ್ರಕರಣದಡಿ ಬಂಧಿತರಾಗಿರುವ ರನ್ಯಾಗೆ ಸೇರಿದ ಬೆಂಗಳೂರಿನ ವಿಕ್ಟೋರಿಯಾ ಲೇಔಟ್‌ನಲ್ಲಿ ಮನೆ, ಅರ್ಕಾವತಿ ಬಡಾವಣೆಯಲ್ಲಿ ನಿವೇಶನ, ತುಮಕೂರಿನಲ್ಲಿ ಕೈಗಾರಿಕಾ ನಿವೇಶನ, ಆನೇಕಲ್ ತಾಲ್ಲೂಕಿನಲ್ಲಿ ಕೃಷಿ ಜಮೀನನ್ನು ಜಪ್ತಿ ಮಾಡಲಾಗಿದೆ ಎಂದು ಅಧಿಕಾರಿಗಳು ಶುಕ್ರವಾರ ತಿಳಿಸಿದ್ದಾರೆ.

ಚಿನ್ನ ಕಳ್ಳಸಾಗಣೆಗೆ ಸಂಬಂಧಿಸಿದಂತೆ ದಾಖಲಾಗಿರುವ ದೂರಿನಡಿ ಸಿಬಿಐ ಮತ್ತು ರೆವಿನ್ಯೂ ಗುಪ್ತಚರ ನಿರ್ದೇಶನಾಲಯ (ಡಿಆರ್‌ಐ) ಒಪ್ಪಿಗೆ ಮೇರೆಗೆ ಜಾರಿ ನಿರ್ದೇಶನಾಲಯವು ಪ್ರಕರಣ ದಾಖಲಿಸಿಕೊಂಡಿದೆ.

ರನ್ಯಾ ರಾವ್ ಅವರನ್ನು ಬೆಂಗಳೂರಿನ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಮಾರ್ಚ್ 3ರಂದು ದುಬೈನಿಂದ ಹಿಂದಿರುಗುವಾಗ ಬಂಧಿಸಲಾಗಿತ್ತು. ಕಸ್ಟಮ್ಸ್ ಅಧಿಕಾರಿಗಳು ಇವರನ್ನು ತಪಾಸಣೆ ನಡೆಸಿದಾಗ 12.56 ಕೋಟಿ ಮೌಲ್ಯದ 14.2 ಕೆ.ಜಿ. ಚಿನ್ನವನ್ನು ಅವರಿಂದ ವಶಕ್ಕೆ ಪಡೆಯಲಾಗಿತ್ತು.

ಶಕ್ತಿ ಇರೋ ಕಡೆ ನಾವು ಸ್ಪರ್ಧಿಸುತ್ತೇವೆ!

- ಕೇಂದ್ರ ಸಚಿವ ಕುಮಾರಸ್ವಾಮಿ ಸ್ಪಷ್ಟನೆ
- ನಿಖಿಲ್ ಪ್ರವಾಸ ಪಕ್ಷ ಸಂಘಟನೆ ಉದ್ದೇಶಕ್ಕೆ
- ಮೈತ್ರಿಯಲ್ಲಿ ಯಾವುದೇ ರೀತಿ ಗೊಂದಲ ಇಲ್ಲ



ಬೆಂಗಳೂರು, ಜು.4(ಕೆಎಂಶಿ)– ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಪಕ್ಷಕ್ಕೆ ಶಕ್ತಿ ಎಲ್ಲಿರುತ್ತದೆಂಯೋ ಆ ಕ್ಷೇತ್ರಗಳಲ್ಲಿ ಮಾತ್ರ ಸ್ಪರ್ಧೆ ಮಾಡುತ್ತೇವೆ ಎಂದು ಕೇಂದ್ರ ಸಚಿವ ಹಾಗೂ ಜೆಡಿಎಸ್ ನಾಯಕ ಎಚ್.ಡಿ.ಕುಮಾರಸ್ವಾಮಿ ಸ್ಪಷ್ಟಪಡಿಸಿದ್ದಾರೆ.

ಬಿಜೆಪಿ ಜೊತೆಗಿನ ಚುನಾವಣಾ ಮೈತ್ರಿಗೆ ಯಾವುದೇ ಭಂಗವಿಲ್ಲ, ಪಕ್ಷ ಸಂಘಟನೆ ದೃಷ್ಟಿಯಿಂದ ಜೆಡಿಎಸ್ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ರಾಜ್ಯ ಪ್ರವಾಸ ಕೈಗೊಂಡಿದ್ದಾರೆ ಎಂದರೆ, ನಾವೇ ಸ್ವತಂತ್ರವಾಗಿ ಚುನಾವಣಾ ಕಣಕ್ಕೆ ಇಳಿಯುತ್ತೇವೆ ಎಂದು ಅರ್ಥವಲ್ಲ ಎಂದು ಸುದ್ದಿಗಾರರೊಂದಿಗೆ ಮಾತನಾಡುತ್ತ ತಿಳಿಸಿದರು.

ಪಕ್ಷ ಸಂಘಟನೆಗಾಗಿ ಅವರು ರಾಜ್ಯ ಪ್ರವಾಸ ಕೈಗೊಂಡಿದ್ದಾರೆಯೇ ಹೊರತು ನಮ್ಮ ಮೈತ್ರಿ ಪಕ್ಷದ ವಿರುದ್ಧವಲ್ಲ. ಮೈತ್ರಿ ಬಗ್ಗೆ ನಾನು ಈಗಾಗಲೇ ಸ್ಪಷ್ಟಪಡಿಸಿದ್ದೇನೆ. ಪಕ್ಷ ಸಂಘಟನೆ ಮಾಡುತ್ತೇವೆ ಎಂದಾಕ್ಷಣ 224 ವಿಧಾನಸಭಾ ಕ್ಷೇತ್ರಗಳಲ್ಲೂ ಸ್ಪರ್ಧಿಸುತ್ತೇವೆ ಎಂದಲ್ಲ, ನಮಗೆ ಆ ಶಕ್ತಿಯೂ ಇಲ್ಲ. ವಿಧಾನಸಭೆ ಸೇರಿದಂತೆ ಯಾವುದೇ ಚುನಾವಣೆ ಎದುರಾದರೂ ಮೈತ್ರಿಯಿಂದಲೇ ಕಣಕ್ಕಿಳಿಯುತ್ತೇವೆ. ಎಷ್ಟು ಕ್ಷೇತ್ರಗಳಲ್ಲಿ ಸ್ಪರ್ಧಿಸಬೇಕು ಎಂಬ ಬಗ್ಗೆ ದೆಹಲಿ ಬಿಜೆಪಿ ವರಿಷ್ಠರೊಂದಿಗೆ ಚರ್ಚಿಸಿ ತೀರ್ಮಾನ ಕೈಗೊಳ್ಳುತ್ತೇವೆ ಎಂದರು.

ಕಾಂಗ್ರೆಸ್ ಆಡಳಿತದಲ್ಲಿ ಮುಖ್ಯಮಂತ್ರಿ ಬದಲಾವಣೆ ವಿಚಾರ ಕುರಿತಂತೆ ಪ್ರತಿಕ್ರಿಯಿಸಲು ಆಸಕ್ತಿ ತೋರದ ಕುಮಾರಸ್ವಾಮಿ, ಅವರಲ್ಲಿ ಯಾರು ಅಧಿಕಾರದಲ್ಲಿ ಇದ್ದರೇನು, ಇಲ್ಲದಿದ್ದರೇನು, ನನಗೂ ಅದಕ್ಕೂ ಸಂಬಂಧವಿಲ್ಲ. ಹೃದಯಾಘಾತದಿಂದ ರಾಜ್ಯಾದ್ಯಂತ ಸಾವುಗಳು ಸಂಭವಿಸುತ್ತಿವೆ ಈ ಬಗ್ಗೆ ಸರ್ಕಾರ ಎಚ್ಚರಿಕೆಯಿಂದ ಕಾರ್ಯ ನಿರ್ವಹಿಸಬೇಕಿತ್ತು. ಆದರೆ, ಏನೂ ಮಾಡುತ್ತಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಈ ಸಮಸ್ಯೆ ಹಾಸನ ಜಿಲ್ಲೆಗೆ ಮಾತ್ರ ಸೀಮಿತವಾಗಿಲ್ಲ. ಇಡೀ ರಾಜ್ಯದಲ್ಲಿ ಉಂಟಾಗಿದೆ. ಇದಕ್ಕಾಗಿ ಪಕ್ಷದ ವತಿಯಿಂದಲೇ ಸಾರ್ವಜನಿಕರ ಉಚಿತ ಆರೋಗ್ಯ ತಪಾಸಣೆ ಮಾಡುವ ಬಗ್ಗೆ ಚಿಂತನೆ ನಡೆದಿದೆ ಎಂದರು.

ವಾರ್ಷಿಕ ಸರ್ವ ಸದಸ್ಯರ ಮಹಾಸಭೆ

ಮೈಸೂರು, ಜು.4– ಮೈಸೂರಿನ ವಿಜಯನಗರ 3ನೇ ಹಂತದಲ್ಲಿರುವ ದಿ ಹೆರಿಟೇಜ್ ಕ್ಲಬ್‌ನ 25ನೇ ವಾರ್ಷಿಕ ಸರ್ವ ಸದಸ್ಯರ ಮಹಾಸಭೆಯನ್ನು ಜು.6 ರಂದು ಬೆಳಗ್ಗೆ 11 ಗಂಟೆಗೆ ದಿ ಹೆರಿಟೇಜ್ ಕ್ಲಬ್ ಆವರಣದಲ್ಲಿ ಏರ್ಪಡಿಸಲಾಗಿದೆ.



ಸೂಪರ್ ಯುನೈಟೆಡ್ ರ‍್ಯಾಪಿಡ್ ಮತ್ತು ಬ್ಲಿಟ್ಜ್ ಟೂರ್ನಿ

ವಿಶ್ವ ನಂ.1 ಕಾರ್ಲ್‌ಸನ್‌ಗೆ ಸೋಲುಣಿಸಿದ ಗುಕೇಶ್



ಗುಕೇಶ್

ರಝಾಗ್ರೆಬ್ (ಕ್ರೊವೇಷ್ಯಾ): ವಿಶ್ವ ಚಾಂಪಿಯನ್ ಡಿ.ಗುಕೇಶ್ ಅವರು ವಿಶ್ವದ ಅಗ್ರಮಾನ್ಯ ಆಟಗಾರ ಮ್ಯಾಗ್ನಸ್ ಕಾರ್ಲ್‌ಸನ್ ಅವರ ಮೇಲೆ ಸ್ಫೂರ್ತಿಯುತ ಗೆಲುವು ಸಾಧಿಸಿದರು. ಸೂಪರ್ ಯುನೈಟೆಡ್ ರ‍್ಯಾಪಿಡ್ ಮತ್ತು ಬ್ಲಿಟ್ಜ್ ಚೆಸ್ ಟೂರ್ನಿಯ ಆರನೇ ಸುತ್ತಿನ ನಂತರ ಏಕಾಂಗಿಯಾಗಿ ಅಗ್ರಸ್ಥಾನಕ್ಕೇರಿದರು.

ಗುರುವಾರ ತಡರಾತ್ರಿ ಮುಗಿದ ಪಂದ್ಯದಲ್ಲಿ ದೊರೆತ ಗೆಲುವು ಗುಕೇಶ್ ಅವರಿಗೆ ಸತತ ಐದನೆಯದ್ದು. ಅವರು ಸಂಭವನೀಯ 12 ಪಾಯಿಂಟ್‌ಗಳಲ್ಲಿ 10 ಪಾಯಿಂಟ್ಸ್ ಕಲೆ ಹಾಕಿದ್ದಾರೆ.

ಭಾರತದ ಆಟಗಾರ ಪೋಲೆಂಡ್‌ನ ಯಾನ್ ಕ್ರಿಸ್ಟೋಫ್ ಡುಡಾ ಅವರಿಗಿಂತ ಎರಡು ಪಾಯಿಂಟ್ ಮುಂದೆ ಇದ್ದಾರೆ. ಏಳು ಪಾಯಿಂಟ್ ಗಳಿಸಿರುವ ಅಮೆರಿಕದ ವೆಸ್ಲಿ ಸೊ ಮೂರನೇ ಸ್ಥಾನದಲ್ಲಿ ಇದ್ದರೆ, ನಾರ್ವೆಯ ಕಾರ್ಲ್‌ಸನ್, ನೆದರ್ಲೆಂಡ್ಸ್‌ನ ಅನೀಶ್ ಗಿರಿ ಮತ್ತು ಸ್ಥಳೀಯ ಆಟಗಾರ ಇವಾನ್ ಸರಿಕ್ (ತಲಾ 6 ಪಾಯಿಂಟ್ಸ್) ಅವರು ನಾಲ್ಕರಿಂದ ಆರರವರೆಗಿನ ಸ್ಥಾನಗಳನ್ನು ಪಡೆದಿದ್ದಾರೆ.

ಆರ್.ಪ್ರಜ್ಞಾನಂದ ಮತ್ತು ಅಮೆರಿಕದ ಫ್ಯಾಬಿಯಾನೊ ಕರುವಾನ ತಲಾ ಐದು ಪಾಯಿಂಟ್ಸ್ ಸಂಗ್ರಹಿಸಿದ್ದಾರೆ. ಫ್ರಾನ್ಸ್‌ನ ಆಟಗಾರ ಅಲಿರೇಝಾ ಫಿರೋಝ್‌ಜಾ (4 ಪಾಯಿಂಟ್ಸ್) ಒಂಬತ್ತನೇ ಸ್ಥಾನ ಪಡೆದಿದ್ದಾರೆ. ನದಿರ್ಬೆಕ್ ಅಬ್ದು ಸತ್ತಾರೋವ್ (3) ಕೊನೆಯ (10ನೇ) ಸ್ಥಾನದಲ್ಲಿದ್ದಾರೆ.

ನಾರ್ವೆ ಚೆಸ್ ಟೂರ್ನಿಯಲ್ಲಿ ಗುಕೇಶ್ ಎದುರು ಪರಾಭವಗೊಂಡ ವೇಳೆ ಕಾರ್ಲ್‌ಸನ್ ಹತಾಶೆಯಿಂದ ಜೋರಾಗಿ ಟೇಬಲ್‌ಗೆ ಗುದ್ದಿದ್ದರು. ಕ್ಲಾಸಿಕಲ್ (ಸಾಂಪ್ರದಾಯಿಕ) ಚೆಸ್‌ನಲ್ಲಿ ಗುಕೇಶ್ ಅವರು ಕಾರ್ಲ್‌ಸನ್ ವಿರುದ್ಧ ಗಳಿಸಿದ ಮೊದಲ ಜಯ ಅದಾಗಿತ್ತು.

ಕಿಂಗ್ ಪಾನ್ ಓಪನಿಂಗ್ ಕಂಡ ಈ ಆಟದಲ್ಲಿ ಕಾರ್ಲ್‌ಸನ್ ಆರಂಭದಲ್ಲಿ ಸ್ವಲ್ಪ ಅನುಕೂಲ ಹೊಂದಿದ್ದರು. ಆದರೆ, ಗುಕೇಶ್ ಅವರು ಪರಿಪೂರ್ಣ ಪ್ರತಿ ಹೋರಾಟಕ್ಕೆ ನಾರ್ವೆಯ ಆಟಗಾರಬಳಿ ಉತ್ತರವಿರಲಿಲ್ಲ. 49 ನಡೆಗಳಲ್ಲಿ ಗುಕೇಶ್ ಜಯಗಳಿಸಿದರು. ಈ ಪಂದ್ಯಕ್ಕೆ ಮೊದಲು ಗುಕೇಶ್ ಅವರು ಅಬ್ದು ಸತ್ತಾರೋವ್ ಅವರನ್ನು ಮಣಿಸಿದ್ದರು. ಪ್ರಜ್ಞಾನಂದ ಅವರಿಗೆ ಗುರುವಾರವೂ ಗೆಲುವು ಒಲಿಯಲಿಲ್ಲ. ಅವರು ಕರುವಾನ, ಕಾರ್ಲ್‌ಸನ್ ಮತ್ತು ಅನಿಶ್ ಗಿರಿ ಜೊತೆ ಡ್ರಾ ಮಾಡಿಕೊಳ್ಳಬೇಕಾಯಿತು.

ಶ್ರೀರಂಗಪಟ್ಟಣ ಪ್ರವಾಸೋದ್ಯಮ ಅಭಿವೃದ್ಧಿಗೆ ನೂರು ಕೋಟಿ

● ಜಿಲ್ಲೆಯ ಕೆರೆ, ಕಟ್ಟೆಗಳಿಗೆ ನೀರು ಹರಿಸಲು ಹೆಚ್ಚಿಕೆ ತಾಕೀತು ● ಎಕ್ಸ್‌ಪ್ರೆಸ್ ವೇನಲ್ಲಿ 3.18 ಕೋಟಿ ದಂಡ ವಸೂಲಿ: ಜಿಲ್ಲಾಧಿಕಾರಿ

ಮಂಡ್ಯ, ಜು.4– ಜಿಲ್ಲೆಯ ಶ್ರೀರಂಗಪಟ್ಟಣ ತಾಲೂಕಿನ ಪ್ರವಾಸಿ ತಾಣಗಳ ಸಮಗ್ರ ಅಭಿವೃದ್ಧಿಗೆ ನೂರು ಕೋಟಿ ಮಂಜೂರು ಮಾಡುವಂತೆ ಕೇಂದ್ರ ಪ್ರವಾಸೋದ್ಯಮ ಸಚಿವರಿಗೆ ಮನವಿ ಸಲ್ಲಿಸಲಾಗಿದೆ ಎಂದು ಕೇಂದ್ರ ಉಕ್ಕು ಹಾಗೂ ಭಾರೀ ಕೈಗಾರಿಕಾ ಸಚಿವ ಹೆಚ್.ಡಿ.ಕುಮಾರಸ್ವಾಮಿ ತಿಳಿಸಿದರು.

ಶುಕ್ರವಾರ ನಗರದ ಜಿಪಂ ಕಾವೇರಿ ಸಭಾಂಗಣದಲ್ಲಿ ನಡೆದ ದಿಶಾ ಸಭೆ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಶ್ರೀರಂಗಪಟ್ಟಣದಲ್ಲಿ ಹಲವು ಪ್ರವಾಸಿ ತಾಣಗಳಿದ್ದು, ಈ ಎಲ್ಲಾ ತಾಣಗಳ ಅಭಿವೃದ್ಧಿಪಡಿಸಿ ಪ್ರವಾಸಿಗರ ಆಕರ್ಷಿಸಲು ಮತ್ತು ಯುವಕರಿಗೆ ಉದ್ಯೋಗ ಸೃಷ್ಟಿಸುವ ನಿಟ್ಟಿನಲ್ಲಿ ಚಿಂತನೆ ನಡೆಸಲಾಗಿದೆ ಎಂದರು.

ಪ್ರವಾಸಿ ತಾಣಗಳ ಅಭಿವೃದ್ಧಿ ದೃಷ್ಟಿಯಿಂದ ಈಗಾಗಲೇ ಕೇಂದ್ರ ಪ್ರವಾಸೋದ್ಯಮ ಸಚಿವ ಗಜೇಂದ್ರ ಶೇಖಾವತ್ ಅವರನ್ನು ಭೇಟಿ ಮಾಡಿ ಚರ್ಚೆ ನಡೆಸಿ ಮನವಿ ಸಲ್ಲಿಸಿದ್ದು, ಶೀಘ್ರ ಹಣ ಬಿಡುಗಡೆ ಮಾಡಿಸಿ ಪ್ರವಾಸಿತಾಣಗಳ ಅಭಿವೃದ್ಧಿ ಕಾಮಗಾರಿ ಆರಂಭಿಸಲಾಗುವುದು ಎಂದರು.

ಕೆರೆಕಟ್ಟೆಗಳಿಗೆ ನೀರು ತುಂಬಿಸಿ: ಈ ಬಾರಿ ಮುಂಗಾರು ಮಳೆ ಉತ್ತಮವಾಗಿದ್ದು, ಕೆಆರ್‌ಎಸ್ ಜಲಾಶಯ ಭರ್ತಿಯಾಗಿದೆ ರೈತರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಜಿಲ್ಲೆಯ ಎಲ್ಲಾ ಕೆರೆಕಟ್ಟೆಗಳನ್ನು ಭರ್ತಿ ಮಾಡಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಇನ್ನೂ 2 ತಿಂಗಳ ಕಾಲ ಮಳೆ ಬರಲಿದ್ದು, ಅಷ್ಟರೊಳಗೆ ಕೆರೆಕಟ್ಟೆಗಳ ತುಂಬಿಸಬೇಕು. ಇಲ್ಲದಿದ್ದರೆ ತಮಿಳುನಾಡು ಕೆಆರ್‌ಎಸ್ ಭರ್ತಿಯಾಗಿದೆ ಎಂದು ನೀರಿಗೆ ಬೇಡಿಕೆ ಇಡಲಿದೆ. ಆದ್ದರಿಂದ ನಮ್ಮ ಕೆರೆಗಳು ಭರ್ತಿಯಾಗಬೇಕು ಎಂದು ತಿಳಿಸಿದರು.

ಮಳೆ ಕೊರತೆ ಇಲ್ಲ: ಜಿಲ್ಲಾಧಿಕಾರಿ ಡಾ.ಕುಮಾರ ಮಾತನಾಡಿ, ಜಿಲ್ಲೆಯಲ್ಲಿ ಈ ಬಾರಿ ಮುಂಗಾರು ಮಳೆ ಉತ್ತಮವಾಗಿದ್ದು, ಯಾವುದೇ ರೀತಿಯ ಮಳೆ ಕೊರತೆ ಇಲ್ಲ. ಕೆಆರ್‌ಎಸ್ ಭರ್ತಿಯಾಗಿರುವ ಹಿನ್ನೆಲೆಯಲ್ಲಿ ತಗ್ಗು ಪ್ರದೇಶಗಳಲ್ಲಿ ಹಾನಿ ಉಂಟಾಗದಂತೆ ಮುಂಜಾಗ್ರತೆ ಕ್ರಮ ವಹಿಸಲಾಗಿದೆ. 1.50 ಲಕ್ಷ ಕ್ಯುಸೆಕ್ ನೀರನ್ನು ಹೊರಬಿಟ್ಟರೆ ಯಾವುದೇ ಸಮಸ್ಯೆ ಇಲ್ಲ. ಆದರೆ 1.75 ಲಕ್ಷ ಕ್ಯುಸೆಕ್ ನೀರು ಬಿಟ್ಟರೆ ನದಿ ಪಾತ್ರದ ಪ್ರದೇಶಗಳಿಗೆ ಹಾನಿಯಾಗಲಿದೆ. ಈ ಹಿನ್ನೆಲೆಯಲ್ಲಿ ಟಾಸ್ಕ್ ಪೋರ್ಸ್ ಸಮಿತಿ ರಚಿಸಿದ್ದು, ರಕ್ಷಣೆಗೆ ಎಲ್ಲಾ ರೀತಿಯ ಸಿದ್ಧತೆ ಮಾಡಿಕೊಳ್ಳಲಾಗಿದೆ ಎಂದು ಸಭೆಗೆ ಮಾಹಿತಿ ನೀಡಿದರು.

ಈಗಾಗಲೇ ಜೂ.20ರವರೆಗೆ ಜಿಲ್ಲೆಯ ನಾಲೆಗಳಿಗೆ ನೀರು ಹರಿಸಲಾಗಿದೆ. ಪಾಂಡವಪುರ ತಾಲೂಕಿನ ಕನಗನಮರಡಿ ಬಳಿ ನಾಲಾ ಆಧುನೀಕರಣ ಕಾಮಗಾರಿ ನಡೆಯುತ್ತಿರುವುದರಿಂದ ನೀರು ಬಿಡಲು ವಿಳಂಬವಾಗಿದೆ. ಆದರೆ ಈ ಹಿಂದೆ 10 ವರ್ಷಗಳ ಅಂಕಿ ಅಂಶ ಪ್ರಕಾರ ಜುಲೈ ಎರಡನೇ ವಾರದಿಂದ ಆಗಸ್ಟ್ ಮೊದಲ ವಾರದವರೆಗೆ ನೀರು ಬಿಡಲಾಗುತ್ತಿತ್ತು. ಇಂಜಿನಿಯರ್‌ಗಳು ಇನ್ನೂ 10 ದಿನಗಳ ಕಾಲ ಸಮಯಾವಕಾಶ ಕೇಳಿದ್ದು, ನಂತರ ನಾಲೆಗಳಿಗೆ ನೀರು ಹರಿಸಲಾಗುವುದು ಎಂದು ತಿಳಿಸಿದರು.

ಮಳವಳ್ಳಿ ಕಡೇ ಭಾಗಕ್ಕೆ ನೀರಿಲ್ಲ ದಿಶಾ ಸಮಿತಿ ಸದಸ್ಯ ಹಾಗೂ ಮಾಜಿ ಶಾಸಕ ಕೆ.ಅನ್ನದಾನಿ ಮಾತನಾಡಿ, ಕೆಆರ್‌ಎಸ್ ಅಣೆಕಟ್ಟೆ ಭರ್ತಿಯಾಗಿದ್ದು, ನಾಲೆಗಳಿಗೆ ನೀರು ಹರಿಸುತ್ತಿಲ್ಲ. ನಾಲೆಗಳಿಗೆ ನೀರು ಬಿಟ್ಟರೂ ಮಳವಳ್ಳಿ ತಾಲೂಕಿನ ಕಡೆ ಭಾಗಕ್ಕೆ ಸಮರ್ಪಕವಾಗಿ ನೀರು ತಲುಪುವುದಿಲ್ಲ. ಅಲ್ಲದೇ ಕೆರೆಕಟ್ಟೆಗಳು ತುಂಬಿಲ್ಲ. ಅದರಲ್ಲೂ ಜೂನ್‌ನಲ್ಲಿ ನಾಲೆಗಳಿಗೆ ನೀರು ಬಿಟ್ಟಾಗ ಕೊನೇ ಭಾಗಕ್ಕೆ ನೀರು ತಲುಪಿಲ್ಲ. ಹೀಗಾದರೆ ಆ ಭಾಗದ ರೈತರ ಪರಿಸ್ಥಿತಿ ಏನು ಎಂದು ಪ್ರಶ್ನಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಕಾವೇರಿ ನೀರಾವರಿ ನಿಗಮದ ಅಧೀಕ್ಷಕ ಇಂಜಿನಿಯರ್ ರಘುರಾಮ್ ಮಳವಳ್ಳಿ ಮತ್ತು ಮದ್ದೂರಿನ 170 ಕೆರೆಗಳು ಭರ್ತಿಯಾಗಿದ್ದು, 17 ಕೆರೆಗಳು ಮಾತ್ರ ಶೇ.25ರಷ್ಟು ಮಾತ್ರ ತುಂಬಿದೆ. ಜೊತೆಗೆ ಹೆಬ್ಬಕವಾಡಿ ಬಳಿ ನಾಲಾ ಆಧುನೀಕರಣ ಕಾಮಗಾರಿ ನಡೆಯುತ್ತಿದ್ದು, ಇದಾದ ಬಳಿಕ ಕಡೇ ಭಾಗಕ್ಕೆ ನೀರು ಕೊಡಲಾಗುವುದು ಎಂದು ತಿಳಿಸಿದಾಗ, ಜಿಲ್ಲಾಧಿಕಾರಿ ಡಾ.ಕುಮಾರ ಮಾತನಾಡಿ, ಸಮರ್ಪಕವಾಗಿ ಕಡೇ ಭಾಗಕ್ಕೆ ನೀರು ತಲುಪಿಸುವಂತೆ ಸೂಚಿಸಿದರು.

ಹೇಮಾವತಿ ನೀರು ತಲುಪಿಲ್ಲ: ನಾಗಮಂಗಲ ಹಾಗೂ ಕೊಪ್ಪ ಭಾಗಕ್ಕೆ ಹೇಮಾವತಿ ನದಿ ನೀರು ತಲುಪುತ್ತಿಲ್ಲ. ಈ ಬಗ್ಗೆ ಅಧಿಕಾರಿಗಳು ಸಹ ಕ್ರಮ ವಹಿಸುತ್ತಿಲ್ಲ ಎಂದು ವಿಧಾನಪರಿಷತ್ ಸದಸ್ಯ ಕೆ.ವಿವೇಕಾನಂದ ಅಸಮಾಧಾನ ವ್ಯಕ್ತಪಡಿಸಿದರು.

ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಮಾತನಾಡಿ, ಚಿಕ್ಕಮಗಳೂರು ಭಾಗದಲ್ಲಿ ಸಮರ್ಪಕ ಮಳೆಯಾಗಿದೆ. ಈ ನಿಟ್ಟಿನಲ್ಲಿ ಹೇಮಾವತಿ ಅಣೆಕಟ್ಟೆ ಸಹ ಭರ್ತಿಯಾಗಿದ್ದು, ತುಮಕೂರು ಜಿಲ್ಲೆಯವರು ಸಹ ನೀರಿಗಾಗಿ ಬೇಡಿಕೆ ಇಡುತ್ತಿದ್ದಾರೆ. ಜಿಲ್ಲೆಯ ಹೇಮಾವತಿ ನದಿ ನೀರು ಆಶ್ರಿತ ನಾಗಮಂಗಲ, ಕೆ.ಆರ್.ಪೇಟೆ, ಪಾಂಡವಪುರ ಹಾಗೂ ಮದ್ದೂರಿನ ಕಡೇ ಭಾಗಕ್ಕೆ ಸಮರ್ಪಕವಾಗಿ ನೀರು ಒದಗಿಸುವಂತೆ ಸೂಚಿಸಿದರು.

ಬಾಲ್ಯ ವಿವಾಹಕ್ಕೆ ಕಡಿವಾಣಕ್ಕೆ ಸೂಚನೆ: ಶಾಸಕ ಪಿ.ರವಿಕುಮಾರ್‌ಗೌಡ ಗಣಿಗ ಮಾತನಾಡಿ, ಜಿಲ್ಲೆಯಲ್ಲಿ ಬಾಲ ಗರ್ಭಿಣಿಯರ ಸಂಖ್ಯೆ ಹೆಚ್ಚಾಗುತ್ತಿರುವುದರ ಬಗ್ಗೆ ಪ್ರಶ್ನಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಉಪ ನಿರ್ದೇಶಕ ಎಸ್.ರಾಜಮೂರ್ತಿ, ಕಳೆದ ವರ್ಷ 134 ಬಾಲ ಗರ್ಭಿಣಿಯರು ಪತ್ತೆಯಾಗಿದ್ದರು. ಆದರೆ ಈ ವರ್ಷ ಪ್ರಕರಣ ಇಳಿಮುಖವಾಗಿದ್ದು, ಅಂಕಿ ಅಂಶ ಬಿಡುಗಡೆಯಾಗಬೇಕಿದೆ. ಬಾಲ ಗರ್ಭಿಣಿಯರ ನಿಯಂತ್ರಿಸಲು ಬಾಲ್ಯ ವಿವಾಹ ತಡೆಗಟ್ಟಲು ಕ್ರಮ ವಹಿಸಲಾಗುತ್ತಿದೆ. ಜಿಲ್ಲಾಧಿಕಾರಿ ಮತ್ತು ಸಿಇಓ ನೇತೃತ್ವದಲ್ಲಿ ಸಭೆ ನಡೆಸಲಾಗಿದೆ. ಗ್ರಾಮೀಣ ಪ್ರದೇಶಗಳಲ್ಲಿ ಜಾಗೃತಿ ಕಾರ್ಯಕ್ರಮ ಅರಿವು ಮೂಡಿಸುವ ಕಾರ್ಯಕ್ರಮಗಳ ಮಾಡಲಾಗಿದೆ ಎಂದು ಸಭೆಗೆ ತಿಳಿಸಿದರು.

ಹೆಣ್ಣು ಭ್ರೂಣಹತ್ಯೆ ಬಗ್ಗೆ ಜಾಗೃತಿ ವಹಿಸಿ: ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಮಾತನಾಡಿ, ಈ ಹಿಂದೆ ಜಿಲ್ಲೆಯಲ್ಲಿ ಹೆಣ್ಣು ಭ್ರೂಣ ಹತ್ಯೆ ಹೆಚ್ಚು ನಡೆದಿದ್ದು, ಈ ಬಗ್ಗೆ ಜನರಲ್ಲಿ ಅರಿವು ಮೂಡಿಸಿ, ಇಂತಹ ಘಟನೆಗಳು ಮರು ಕಳುಹಿಸದಂತೆ ಎಚ್ಚರಿಕೆ ವಹಿಸಿ, ಜಿಲ್ಲೆಯಲ್ಲಿ ಆಂಬುಲೆನ್ಸ್ ಕೊರತೆ ಇದ್ದು, ಮದ್ದೂರಿನಿಂದ ಮಂಡ್ಯಕ್ಕೆ ಕರೆತರುವಾಗ ಮಗು ಸಾವನ್ನಪ್ಪಿದೆ. ಆಂಬುಲೆನ್ಸ್ ಕೊರತೆ ನಿವಾರಿಸಿ ಎಂದು ಆರೋಗ್ಯ ಇಲಾಖೆ ಅಧಿಕಾರಿಗಳಿಗೆ ಸೂಚಿಸಿದರು.

ಹೆದ್ದಾರಿಯಲ್ಲಿ ಅಪಘಾತ ಇಳಿಮುಖ: ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್ ವೇನಲ್ಲಿ ಅಪಘಾತಗಳು ಕ್ರಮೇಣ ಇಳಿಮುಖವಾಗಿದೆ ಎಂದ ಡಿಸಿ ಡಾ.ಕುಮಾರ್, 2023ರಲ್ಲಿ 109 ಮಂದಿ ಅಪಘಾತದಿಂದ ಮೃತಪಟ್ಟಿದ್ದರು. 2024ರಲ್ಲಿ 80, 2025ರಲ್ಲಿ 43 ಮಂದಿ ಸಾವನ್ನಪ್ಪಿದ್ದಾರೆ. ಅಪಘಾತಗಳ ತಡೆಯುವ ನಿಟ್ಟಿನಲ್ಲಿ ಆಯಾ ಕಟ್ಟಿನ ಜಾಗದಲ್ಲಿ ಎಐ ಕ್ಯಾಮೆರಾಗಳ ಅಳವಡಿಸಿ ರಸ್ತೆ ಸುರಕ್ಷತಾ ನಿಯಮಗಳ ಉಲ್ಲಂಘನೆಯಾಗದಂತೆ ಕ್ರಮ ವಹಿಸಲಾಗಿದೆ. ಸಂಚಾರ ನಿಯಮ ಉಲ್ಲಂಘಿಸಿದ ಹಿನ್ನೆಲೆಯಲ್ಲಿ ಕಳೆದ ವರ್ಷ 2.16 ಕೋಟಿ ರೂ. ದಂಡ ಸಂಗ್ರಹಿಸಲಾಗಿದೆ. ಪ್ರಸ್ತುತ ವರ್ಷ 1.02 ಕೋಟಿ ರೂ. ದಂಡ ಸೇರಿದಂತೆ ಒಟ್ಟು 3.18 ಕೋಟಿ ರೂ. ದಂಡ ವಸೂಲಿ ಮಾಡಲಾಗಿದೆ ಎಂದರು.

ಸಭೆಯಲ್ಲಿ ಎಂ.ಎಸ್.ರಾಮಯ್ಯ ಗ್ರೂಪ್ ಆಫ್ ಇನ್‌ಸ್ಟಿಟ್ಯೂಷನ್ ವತಿಯಿಂದ ಸಿಎಸ್‌ಆರ್ ಯೋಜನೆಯಡಿ 6 ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ಹಾಗೂ ಶ್ರವಣ ದೋಷವುಳ್ಳ 6 ಮಕ್ಕಳಿಗೆ ಶ್ರವಣ ಸಾಧನವನ್ನು ಹೆಚ್.ಡಿ.ಕುಮಾರಸ್ವಾಮಿ ವಿತರಿಸಿದರು. ಶಾಸಕ ಹೆಚ್.ಟಿ.ಮಂಜು, ಜಿಪಂ ಸಿಇಓ ಕೆ.ಆರ್.ನಂದಿನಿ, ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ ಇದ್ದರು.



ವಿದ್ಯಾರ್ಥಿನಿಗೆ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಲ್ಯಾಪ್‌ಟಾಪ್ ವಿತರಿಸಿದರು.

ಕುಮಾರಸ್ವಾಮಿ ಕಾಲಿಗೆ ಬಿದ್ದ ರವಿ ಗಣಿಗ

ಮಂಡ್ಯ: ಕಾಂಗ್ರೆಸ್ ಶಾಸಕ ರವಿಕುಮಾರ್ ಗಣಿಗ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರ ಕಾಲಿಗೆ ಬಿದ್ದು, ಆಶೀರ್ವಾದ ಪಡೆದ ಸನ್ನಿವೇಶ ದಿಶಾ ಸಭೆಯಲ್ಲಿ ನಡೆಯಿತು.

ದಿಶಾ ಸಭೆಗೆ ಕುಮಾರಸ್ವಾಮಿ ಆಗಮಿಸುತ್ತಿದ್ದಂತೆ ರವಿ ಗಣಿಗ ಕಾಲಿಗೆ ಬಿದ್ದರು. ಬಳಿಕ ಹೆಚ್ಡಿಕೆ ರವಿ ಬೆನ್ನು ತಟ್ಟಿ ತಮ್ಮ ಸ್ಥಳದಲ್ಲಿ ಕುಳಿತರು. ಬಳಿಕ ಸಭೆ ಆರಂಭಕ್ಕೂ ಮುನ್ನ ಕುಮಾರಸ್ವಾಮಿ ಕುಳಿತಿದ್ದ ಖುರ್ಚಿ ಬಳಿಗೆ ಹೋದ ರವಿ, ಶಾಲು ಹೊದಿಸಿ, ಏಲಕ್ಕಿ ಹಾರ ಹಾಕಿ ಸನ್ಮಾನಿಸಿದರು.

ಕಳೆದ ದಿಶಾ ಸಭೆಯಲ್ಲೂ ಹೆಚ್ಡಿಕೆ ಕಾಲಿಗೆ ಬಿದ್ದಿದ್ದ ರವಿ ಗಣಿಗ ಈ ಸಭೆಯಲ್ಲೂ ಕೇಂದ್ರ ಸಚಿವರ ಕಾಲಿಗೆ ಬಿದ್ದಿದ್ದು, ಗಮನ ಸೆಳೆಯಿತು. ಈವರೆಗೂ ಹೆಚ್ಡಿಕೆ ಅಧ್ಯಕ್ಷತೆಯಲ್ಲಿ 2 ದಿಶಾ ಸಭೆ ನಡೆದಿದ್ದು, ಎರಡು ಸಭೆಯಲ್ಲೂ ಮಂಡ್ಯ ಜಿಲ್ಲೆಯ 6 ಕಾಂಗ್ರೆಸ್ (ದರ್ಶನ್ ಪುಟ್ಟಣ್ಣಯ್ಯ ಸೇರಿ) ಶಾಸಕರು, ಇಬ್ಬರು ವಿಧಾನ ಪರಿಷತ್ ಸದಸ್ಯರ ಪೈಕಿ ರವಿ ಗಣಿಗ ಹೊರತು ಪಡಿಸಿ ಉಳಿದ್ಯಾವ ಕಾಂಗ್ರೆಸ್ ಶಾಸಕರು ಹಾಜರಾಗಿಲ್ಲ.


ಅನ್ನದಾನಿ–ರವಿ ಗಣಿಗ ನಡುವೆ ಮಾತಿನ ಚಕಮಕಿ

ಸಭೆಯಲ್ಲಿ ಮಳವಳ್ಳಿ ಪುರಸಭಾಧ್ಯಕ್ಷ ರಾಜೀನಾಮೆ ಅಂಗೀಕಾರಕ್ಕೆ ಸಂಬಂಧಪಟ್ಟಂತೆ ಜಿಲ್ಲಾಧಿಕಾರಿ ಡಾ.ಕುಮಾರ್ ಅವರೊಂದಿಗೆ ಮಾಜಿ ಶಾಸಕ ಕೆ.ಅನ್ನದಾನಿ ಮಾತನಾಡುತ್ತಿದ್ದ ವೇಳೆ ಮಧ್ಯೆ ಪ್ರವೇಶಿಸಿದ ಶಾಸಕ ರವಿಕುಮಾರ್ ಗಣಿಗ, ನಿಮ್ಮ ಪುರಸಭೆ ವಿಚಾರ ದಿಶಾ ಸಭೆಯಲ್ಲಿ ಬೇಡ ಎಂದು ಅನ್ನದಾನಿಗೆ ಹೇಳಿದಾಗ ಇಬ್ಬರ ನಡುವೆ ಮಾತಿನ ಚಕಮಕಿ ನಡೆಯಿತು.

ಪುರಸಭೆ ವಿಚಾರವನ್ನು ದಿಶಾ ಸಭೆಯಲ್ಲಿ ಏಕೆ ಚರ್ಚೆ ಮಾಡುತ್ತೀರಾ?. ಇಲ್ಲಿ ರಾಜಕೀಯ ಚರ್ಚೆ ಬೇಡ ಎಂದು ರವಿಕುಮಾರ್ ಗಣಿಗ ಹೇಳಿದರು. ಇದರಿಂದ ಕುಪಿತಗೊಂಡ ಅನ್ನದಾನಿ ದಿಶಾ ಸಭೆಯಲ್ಲಿ ಪ್ರಶ್ನಿಸದೆ ಇನ್ನೆಲ್ಲಿ ಪ್ರಶ್ನಿಸಬೇಕು. ನಾನೇನು ಅವಾಚ್ಯ ಶಬ್ಧ ಬಳಸಿದ್ದೇನೆಯೇ, ನಿಮ್ಮ ರಾಜಕೀಯವನ್ನು ಇಲ್ಲೇಕೆ ತರುತ್ತೀರಾ? ಎಂದು ಏರುಧ್ವನಿಯಲ್ಲಿ ಪ್ರಶ್ನಿಸಿದರು.

ಈ ವೇಳೆ ಮಧ್ಯೆ ಪ್ರವೇಶಿಸಿದ ಕೇಂದ್ರ ಸಚಿವ ಕುಮಾರಸ್ವಾಮಿ, ಇಲ್ಲೇನು ರಾಜಕೀಯ ನಡೆಯುತ್ತಿದೆ ಎಂಬುದು ತಿಳಿದಿದೆ. ಇಲ್ಲಿ ಈ ಚರ್ಚೆ ಬೇಕಾ? ನಿಮ್ಮ ಸಮಸ್ಯೆ ಏನು ಚರ್ಚಿಸಿದರೆ ಏನು ಪ್ರಯೋಜನ ಎಂದು ಅನ್ನದಾನಿಗೆ ಬುದ್ಧಿ ಹೇಳುವ ನೆಪದಲ್ಲಿ ಶಾಸಕ ರವಿಕುಮಾರ್ ಮುಂದೆಯೇ ರಾಜ್ಯ ಸರ್ಕಾರ ಮತ್ತು ಜಿಲ್ಲಾಡಳಿತದ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದರು.

ಕಾವೇರಿ ನದಿಗೆ ಹಾರಿದ್ದ ಕಾನೂನು ವಿದ್ಯಾರ್ಥಿನಿ ರಕ್ಷಣೆ



ವಿದ್ಯಾರ್ಥಿನಿ ಪವಿತ್ರಳನ್ನು ಪೊಲೀಸರು ರಕ್ಷಿಸಿರುವುದು.

ಶ್ರೀರಂಗಪಟ್ಟಣ: ಆತ್ಮಹತ್ಯೆ ಮಾಡಿಕೊಳ್ಳಲು ಗುರುವಾರ ಸಂಜೆ ಕಾವೇರಿ ನದಿಗೆ ಹಾರಿ ತಾಲೂಕಿನ ಹಂಗರಹಳ್ಳಿ ಬಳಿ ನದಿ ಮಧ್ಯೆ ಮರಕ್ಕೆ ಸಿಲುಕಿ ಪವಾಡ ಸದೃಶವಾಗಿ ಬದುಕುಳಿದಿದ್ದ ಬೆಂಗಳೂರಿನ ಕಾನೂನು ವಿದ್ಯಾರ್ಥಿನಿಯನ್ನು ಶುಕ್ರವಾರ ಬೆಳಗ್ಗೆ ರಕ್ಷಿಸಲಾಗಿದೆ.

ಬೆಂಗಳೂರಿನ ಎಲೆಕ್ಟ್ರಾನಿಕ್ ಸಿಟಿ ನಿವಾಸಿ ಪವಿತ್ರ (19) ಎಂಬಾಕೆಯನ್ನು ಅಗ್ನಿಶಾಮಕ ಸಿಬ್ಬಂದಿ ಮತ್ತು ಪೊಲೀಸರು ರಕ್ಷಿಸಿದ್ದು, ಪಟ್ಟಣದ ಸಾರ್ವಜನಿಕ ಆಸ್ಪತ್ರೆಗೆ ದಾಖಲಿಸಿದ್ದಾರೆ.

ನದಿಗೆ ಹಾರಿದ್ದ ಪವಿತ್ರ ಸುಮಾರು 5 ಕಿಮೀ ಪ್ರವಾಹದಲ್ಲಿ ಕೊಚ್ಚಿ ಹೋಗಿ ನದಿ ಮಧ್ಯೆ ಮರವೊಂದಕ್ಕೆ ಸಿಲುಕಿಕೊಂಡಿದ್ದರು. ಇಡೀ ರಾತ್ರಿ ಮರದ ಮೇಲೆ ಕುಳಿತಿದ್ದರು. ಶುಕ್ರವಾರ ಮುಂಜಾನೆ ಕಾಪಾಡಿ... ಎಂದು ಕೂಗಿಕೊಂಡಿದ್ದರಿಂದ ರೈತರಿಗೆ ನದಿ ಮಧ್ಯೆ ವ್ಯಕ್ತಿಯೊಬ್ಬರು ಸಿಲುಕಿಕೊಂಡಿರುವುದು ಗೊತ್ತಾಗಿದೆ. ವಿಷಯ ತಿಳಿದು ಸ್ಥಳಕ್ಕಾಮಿಸಿದ ಅರಕೆರೆ ಠಾಣೆ ಎಸ್‌ಐ ಎನ್.ವಿನೋದಕುಮಾರ್ ನೇತೃತ್ವದ ಪೊಲೀಸರ ತಂಡ ಮತ್ತು ಅಗ್ನಿಶಾಮಕ ಸಿಬ್ಬಂದಿ ಪವಿತ್ರ ಅವರನ್ನು ರಕ್ಷಿಸಿ, ಅವರ ಪೋಷಕರಿಗೆ ವಿಷಯ ಮುಟ್ಟಿಸಿದ್ದಾರೆ. ನದಿಯಲ್ಲಿ ನೀರಿನ ಸೆಳೆತ ಮತ್ತಷ್ಟು ಹೆಚ್ಚಾಗಿದ್ದರೆ ಅವರು ಕೊಚ್ಚಿ ಹೋಗುತ್ತಿದ್ದರು ಎಂದು ಎಸ್‌ಐ ವಿನೋದ್ ಕುಮಾರ್ ತಿಳಿಸಿದ್ದಾರೆ. ಆತ್ಮಹತ್ಯೆಗೆ ಯತ್ನಿಸಲು ನಿಖರ ಕಾರಣ ತಿಳಿದು ಬಂದಿಲ್ಲ ಎಂದು ಹೇಳಿದ್ದಾರೆ.

ಎಲ್‌ಐಸಿ ಪ್ರತಿನಿಧಿಗಳ ಒಕ್ಕೂಟದ ಪದಾಧಿಕಾರಿಗಳ ಆಯ್ಕೆ

ಶ್ರೀರಂಗಪಟ್ಟಣ: ಭಾರತೀಯ ಜೀವ ವಿಮಾ ಪ್ರತಿನಿಧಿಗಳ ಶ್ರೀರಂಗಪಟ್ಟಣ ಒಕ್ಕೂಟದ ಅಧ್ಯಕ್ಷರಾಗಿ ನಂದೀಶ್, ಪ್ರಧಾನ ಕಾರ್ಯದರ್ಶಿಯಾಗಿ ಎಂ.ಪ್ರಭುಸ್ವಾಮಿ ಆಯ್ಕೆಯಾಗಿದ್ದಾರೆ.

ಪಟ್ಟಣದ ಮಂಗಳಧಾಮದಲ್ಲಿ ಭಾರತೀಯ ಜೀವಾ ವಿಮಾ ಪ್ರತಿನಿಧಿಗಳ ಒಕ್ಕೂಟದ ಗೌರವಾಧ್ಯಕ್ಷ ಟಿ.ಎಂ.ಬಳ್ಳಾರಿಗೌಡ ಅಧ್ಯಕ್ಷತೆಯಲ್ಲಿ ಮತ್ತು ಮೈಸೂರು ವಿಭಾಗ ಮಂಡಳಿ ಪದಾಧಿಕಾರಿಗಳ ಸಮ್ಮುಖದಲ್ಲಿ ಆಯ್ಕೆ ಪ್ರಕ್ರಿಯೆ ನಡೆಯಿತು.

ಅಧ್ಯಕ್ಷರಾಗಿ ನಂದೀಶ್, ಪ್ರಧಾನ ಕಾರ್ಯದರ್ಶಿ ಎಂ.ಪ್ರಭುಸ್ವಾಮಿ, ಖಜಾಂಚಿ ಲೋಕೇಶ್, ಉಪಾಧ್ಯಕ್ಷರಾಗಿ ಯೋಗೇಂದ್ರ ಹಾಗೂ ಜಿ.ಬಿ.ದೇವರಾಜು, ಸಹ ಕಾರ್ಯದರ್ಶಿ ಶಿವಕುಮಾರ್, ಸಂಘಟನಾ ಕಾರ್ಯದರ್ಶಿ ಹೆಚ್.ಎನ್.ಮಹೇಶ್ ಅವರನ್ನು ಆಯ್ಕೆ ಮಾಡಲಾಯಿತು. ನೂತನ ನಿರ್ದೇಶಕರಾಗಿ ಬಿ.ಮಹದೇವು, ಎ.ಸಿದ್ದೇಗೌಡ, ಬಿ.ವಿ.ಕುಮಾರಿ, ಆರ್.ಶ್ರೀಧರ, ರೇಖಾ, ಬಿ.ಮಹೇಶ್, ಪುರುಷೋತ್ತಮ, ಶಿವಕುಮಾರ್, ದೇವದಾಸ ವೆಸ್ಲಿ ಅವರನ್ನ ಆಯ್ಕೆ ಮಾಡಲಾಯಿತು.

ಈ ವೇಳೆ ಅಖಿಲ ಭಾರತ ಜೀವ ವಿಮಾ ಪ್ರತಿನಿಧಿಗಳ ಒಕ್ಕೂಟ ಮೈಸೂರು ವಿಭಾಗದ ಗೌರವಾಧ್ಯಕ್ಷ ವಿ.ಜಿ.ಅಶೋಕ, ಅಧ್ಯಕ್ಷ ಕೆಂಪೇಗೌಡ, ಶಿವಣ್ಣ, ಸಿ.ಸ್ವಾಮಿಗೌಡ, ಮಹೇಶ್ ಸೇರಿದಂತೆ ಇತರರು ನೂತನ ಪದಾಧಿಕಾರಿಗಳನ್ನು ಅಭಿನಂದಿಸಿದರು.



ಎಲ್‌ಐಸಿ ಪ್ರತಿನಿಧಿಗಳ ಒಕ್ಕೂಟಕ್ಕೆ ಆಯ್ಕೆಯಾದ ಪ್ರತಿನಿಧಿಗಳು.

ಮೂರನೇ ಪುಟದಿಂದ

ಡಿಸಿಎಫ್ ವಿರುದ್ಧ ಕ್ರಮಕ್ಕೆ ಕೇಂದ್ರಕ್ಕೆ ಪ್ರಸ್ತಾವನೆ

ಅದನ್ನು ತಿಂದ 5 ಹುಲಿ ಗಳು ಸಾವನ್ನಪ್ಪಿರುವುದು ಬೆಳಕಿಗೆ ಬಂದಿತ್ತು. ಈ ಹಿನ್ನೆಲೆಯಲ್ಲಿ ಮೂವರನ್ನು ಈಗಾಗಲೇ ಬಂಧಿಸಲಾಗಿದೆ. ಮತ್ತೊಂದೆಡೆ ಹುಲಿಗಳ ಸಾವಿನ ಸಂಬಂಧ ಅಪರ ಮುಖ್ಯ ಪ್ರಧಾನ ಅರಣ್ಯ ಸಂರಕ್ಷಣಾಧಿಕಾರಿ ಕುಮಾರ್ ಪುಷ್ಕರ್ ನೇತೃತ್ವದಲ್ಲಿ ವನ್ಯಜೀವಿ ವಿಭಾಗದ ಎಪಿಸಿಸಿಎಫ್ ಶ್ರೀನಿವಾಸಲು, ಚಾಮರಾಜನಗರ ಸಿಸಿಎಫ್ ಹೀರಾಲಾಲ್, ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರದ ಎಐಜಿ ಹರಿಣಿ ವೇಣುಗೋಪಾಲ್, ವನ್ಯಜೀವಿ ತಜ್ಞ ಡಾ. ಸಂಜಯ್ ಗುಬ್ಬಿ ಮತ್ತು ಮೈಸೂರು ಮೃಗಾಲಯದ ಸಹಾಯಕ ನಿರ್ದೇಶಕ ಡಾ. ಶಶಿಧರ್ ಅವರನ್ನೊಳಗೊಂಡ ಉನ್ನತ ಮಟ್ಟದ ವಿಚಾರಣಾ ಸಮಿತಿಯನ್ನು ಜೂನ್ 27ರಂದು ರಚಿಸಲಾಗಿತ್ತು.

ಈ ಸಮಿತಿಯು ನಿನ್ನೆ (ಜು.3) ಪ್ರಾಥಮಿಕ ವರದಿ ಸಲ್ಲಿಸಿದ್ದು, 5 ಹುಲಿಗಳು ರಸ್ತೆಯಿಂದ ಕೇವಲ 100 ಮೀಟರ್ ದೂರದಲ್ಲಿ ಹಾಗೂ ಕಳ್ಳಬೇಟೆ ನಿಗ್ರಹ ಶಿಬಿರದಿಂದ ಕೇಲವ 800 ಮೀಟರ್ ಅಂತರದಲ್ಲಿ ಸಾವನ್ನಪ್ಪಿದ್ದರೂ ಎರಡು ದಿನಗಳವರೆಗೆ ಅರಣ್ಯ ಇಲಾಖೆ ಸಿಬ್ಬಂದಿಯ ಗಮನಕ್ಕೆ ಬಾರದೇ ಇರುವುದು ಕಂಡು ಬಂದಿದೆ. ಇದಕ್ಕೆ ಕಳೆದ 3 ತಿಂಗಳಿನಿಂದ ಹೊರ ಗುತ್ತಿಗೆ ಸಿಬ್ಬಂದಿಗೆ ವೇತನ ಭತ್ಯೆ ನೀಡದೇ ಇರುವುದರಿಂದ ಗಸ್ತು ಕಾರ್ಯಕ್ಕೆ ಅಡಚಣೆ ಉಂಟಾಗಿರುವುದು ಇದಕ್ಕೆ ಕಾರಣ ಎಂದು ವರದಿಯಲ್ಲಿ ತಿಳಿಸಲಾಗಿದೆ.

2025ರ ಏಪ್ರಿಲ್ ಅಂತ್ಯದಲ್ಲಿ ಹಣ ಲಭ್ಯತೆ ಇದ್ದರೂ ಅದನ್ನು ಖಚಿತಪಡಿಸಿಕೊಳ್ಳದೇ ಸಿಬ್ಬಂದಿಗಳಿಗೆ ಸಕಾಲಿಕವಾಗಿ ವೇತನ ಪಾವತಿ ಮಾಡದೇ ಅಧಿಕಾರಿಗಳು ತಮ್ಮ ಕರ್ತವ್ಯದಲ್ಲಿ ವಿಫಲರಾಗಿದ್ದಾರೆ. ಏಪ್ರಿಲ್ ಮತ್ತು ಮೇ ತಿಂಗಳ ವೇತನ ಪಾವತಿಗೆ ಖಜಾನೆಗೆ ಬಿಲ್‌ಗಳನ್ನು ಸಲ್ಲಿಸುವಲ್ಲಿಯೂ ವಿಳಂಬವಾಗಿದೆ. ಇದರಿಂದಾಗಿ ವನ್ಯಜೀವಿ ರಕ್ಷಣಾ ಕರ್ತವ್ಯಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸಲು ಸಾಧ್ಯವಾಗದೇ 5 ಹುಲಿಗಳು ಸಾವಿಗೀಡಾಗಿದ್ದು, ಡಿಸಿಎಫ್ ವೈ.ಚಕ್ರಪಾಣಿ, ಎಸಿಎಫ್ ಗಜಾನನ ಹೆಗಡೆ ಮತ್ತು ಆರ್‌ಎಫ್‌ಓ ಮಾದೇಶ ಅವರ ಕರ್ತವ್ಯ ಲೋಪದಿಂದ ಹುಲಿಗಳ ಸಾವು ಸಂಭವಿಸಿದೆ ಎಂದು ವರದಿಯಲ್ಲಿ ತಿಳಿಸಲಾಗಿದೆ.

ಈ ಹಿನ್ನೆಲೆಯಲ್ಲಿ ಮೂವರು ಅಧಿಕಾರಿಗಳ ಅಮಾನತಿಗೆ ಅರಣ್ಯ, ಜೀವಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ್ ಬಿ.ಖಂಡ್ರೆ ಶಿಫಾರಸು ಮಾಡಿದ್ದರು. ಅವರ ಶಿಫಾರಸನ್ನು ಆಧರಿಸಿ ಇಲಾಖೆಯ ಅಧೀನ ಕಾರ್ಯದರ್ಶಿಗಳು ಇಬ್ಬರು ಅಧಿಕಾರಿ ಗಳನ್ನು ಅಮಾನತುಪಡಿಸಿ ಭಾರತೀಯ ಅರಣ್ಯ ಸೇವೆಗೆ ಸೇರಿದ ಡಿಸಿಎಫ್ ವೈಚಕ್ರಪಾಣಿ ವಿರುದ್ಧ ನಿಯಮಾನುಸಾರ ಕ್ರಮ ಕೈಗೊಳ್ಳಲು ಕೇಂದ್ರ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಿದ್ದಾರೆ.

ಪ್ರಾರ್ಥನೆ ವಿಫಲವಾಗದು

ಆದರೆ ಪ್ರಾರ್ಥನೆ ವಿಫಲವಾಗುವುದಿಲ್ಲ ಎಂಬುದು ನನ್ನ ನಂಬಿಕೆ. ನನಗೆ ಏನು ಬೇಕು ಅದನ್ನು ಕರುಣಿಸುವಂತೆ ಪ್ರಾರ್ಥನೆ ಮಾಡಿದ್ದೇನೆ ಎಂದು ಮಾರ್ಮಿಕವಾಗಿ ನುಡಿದರಲ್ಲದೇ, ದುಃಖವನ್ನು ದೂರ ಮಾಡುವ ದುರ್ಗಾದೇವಿ, ಚಾಮುಂಡೇಶ್ವರಿಯ ಕೃಪೆಯಿಂದಾಗಿ ರಾಜ್ಯದಲ್ಲಿ ಉತ್ತಮ ಮಳೆ ಬೀಳುತ್ತಿದೆ. ಈ ವರ್ಷ ರಾಜ್ಯದ ಜನರಿಗೆ ಶಾಂತಿ–ನೆಮ್ಮದಿ ಲಭಿಸಲಿ ಎಂದು ಪ್ರಾರ್ಥಿಸಿದ್ದೇನೆ. ಯಾವುದೇ ಕೆಲಸ ಪ್ರಾರಂಭ ಮಾಡಬೇಕಾದರೂ ತಾಯಿಯ ಆಶೀರ್ವಾದ ಕೇಳುತ್ತೇನೆ. ಹಾಗೆಯೇ ಈಗಲೂ ಕೂಡ ಕುಟುಂಬ ಸಮೇತವಾಗಿ ಬಂದು ತಾಯಿ ಚಾಮುಂಡೇಶ್ವರಿಯನ್ನು ದರ್ಶನ ಮಾಡಿ ಪ್ರಾರ್ಥನೆ ಸಲ್ಲಿಸಿದ್ದೇನೆ ಎಂದು ಹೇಳಿದರು.


ಹೃದಯಾಘಾತ: ತಜ್ಞರ ವರದಿ

ಮುಂದಾಗಿದ್ದಾರೆ. ಜಯದೇವ ಆಸ್ಪತ್ರೆಯ ನಿರ್ದೇಶಕ ಡಾ. ರವೀಂದ್ರನಾಥ್ ನೇತೃತ್ವದಲ್ಲಿ ಇಂದು ಹೃದಯಘಾತದ ತಾಂತ್ರಿಕ ಸಲಹಾ ಸಮಿತಿ ಸಭೆ ನಡೆಯಿತು. ಸಭೆಯಲ್ಲಿ ಹೃದಯಾಘಾತದ ಬಗ್ಗೆ ಸಿದ್ದವಾಗಿರುವ ವರದಿಯ ಬಗ್ಗೆ ತಾಂತ್ರಿಕ ಸಮಿತಿ ಸದಸ್ಯರು ಚರ್ಚಿಸಿದರು. ಅಂತಿಮ ವರದಿಯಲ್ಲಿನ ಸಾಧಕ–ಬಾಧಕಗಳ ಕುರಿತು ಚರ್ಚಿಸಲಾಯಿತು. ತಜ್ಞರು ವರದಿಗೆ ಗ್ರೀನ್ ಸಿಗ್ನಲ್ ನೀಡಿದ್ದಾರೆ. ಏಕಾಏಕಿ ಹೃದಯಾಘಾತಕ್ಕೆ ಕಾರಣಗಳೇನು ಎಂಬುವುದನ್ನು ತಜ್ಞರು ಪತ್ತೆ ಮಾಡಿದ್ದು, ಈ ಬಗ್ಗೆ ಮುಖ್ಯಮಂತ್ರಿಗಳಿಗೆ ವರದಿ ನೀಡಲು ಮುಂದಾಗಿದ್ದಾರೆ. ಎರಡು ದಿನಗಳಲ್ಲಿ ತಜ್ಞರು ಸರ್ಕಾರಕ್ಕೆ ವರದಿ ಸಲ್ಲಿಸಲಿದ್ದಾರೆ. ಬಳಿಕ ಸರ್ಕಾರ ಏನು ಕ್ರಮ ಕೈಗೊಳ್ಳುತ್ತದೆ ಕಾದು ನೋಡಬೇಕಿದೆ.

ತಜ್ಞ ವೈದ್ಯರನ್ನು ನಿಯೋಜಿಸಿ

ಬರುತ್ತಿದ್ದಾರೆ. ಇದನ್ನು ನಿಭಾಯಿಸಲು ಹೆಚ್ಚಿನ ತಜ್ಞ ವೈದ್ಯರ ಅಗತ್ಯವಿದೆ ಎಂದು ಪರಿಸ್ಥಿತಿಯನ್ನು ಮನದಟ್ಟು ಮಾಡಿದ್ದಾರೆ. 30 ವರ್ಷ ಮೇಲ್ಪಟ್ಟ ಎಲ್ಲಾ ನಾಗರಿಕರಿಗೆ ವಾರ್ಷಿಕ ಹೃದಯ ತಪಾಸಣೆಯನ್ನು ಕಡ್ಡಾಯ ಮಾಡಬೇಕು, ಗ್ರಾಮೀಣ ಪ್ರದೇಶದ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಹೃದಯಾಘಾತದ ಬಗ್ಗೆ ಸಲಹೆ ನೀಡಲು ಸಿಬ್ಬಂದಿಗೆ ತರಬೇತಿ ನೀಡಬೇಕು, ಆರೋಗ್ಯಕರ ಆಹಾರ ಪದ್ಧತಿ ಉತ್ತೇಜಿಸಬೇಕು ಮತ್ತು ಕಲಬೆರಕೆ ತಡೆಯಲು ಕಠಿಣ ಕ್ರಮ ಜಾರಿ ಮಾಡಬೇಕು, ಹೃದಯಾಘಾತವಾಗುತ್ತಿರುವ ಬಗ್ಗೆ ಅಧ್ಯಯನ ಮಾಡಬೇಕು ಎಂದು ದಿನೇಶ್ ಗೌಡ ಅವರು ಸರ್ಕಾರವನ್ನು ಆಗ್ರಹಿಸಿದ್ದಾರೆ.

ಅಪಾರ ಭಕ್ತರಿಂದ ದೇವಿ ದರ್ಶನ



ಚಾಮುಂಡೇಶ್ವರಿ ದೇವಾಲಯಕ್ಕೆ ಹೂವಿನ ಅಲಂಕಾರ ಮಾಡಿರುವುದು.

ಮತ್ತೆ ಕೆಲವೆಡೆ ಪೆಂಡಾಲ್‌ಗೆ ಬಳಸುವ ಸೈಡ್ ವಾಲ್ ಅಳವಡಿಸಲಾಗಿತ್ತು.

2000 ರೂ. ಟಿಕೆಟ್‌ಗೂ ಡಿಮ್ಯಾಂಡ್: ಇಂದು ಮುಂಜಾನೆಯಿಂದ ಮಧ್ಯಾಹ್ನದವರೆಗೂ 2 ಸಾವಿರ ರೂ. ಟಿಕೆಟ್ ಪಡೆದು ದರ್ಶನ ಪಡೆಯಲು ಬಂದ ಭಕ್ತರ ಸಂಖ್ಯೆ ಹೆಚ್ಚಾಗಿತ್ತು. ಐರಾವತ ಬಸ್‌ನಲ್ಲಿ ಲಲಿತಮಹಲ್ ಪ್ಯಾಲೇಸ್ ಮೈದಾನದಿಂದ ಆಗಮಿಸಿದ 2 ಸಾವಿರ ರೂ. ಟಿಕೆಟ್ ಪಡೆದ ಭಕ್ತರು ನೇರವಾಗಿ ದೇವಾಲಯಕ್ಕೆ ಬಂದು ದರ್ಶನ ಪಡೆದು ಪ್ರಾರ್ಥಿಸಿದರು.

ಕಂಗೊಳಿಸುತ್ತಿದ್ದು, ಭಕ್ತಿಯ ಸುಧೆಯಲ್ಲಿ ಭಕ್ತರು ತೇಲುವಂತೆ ಮಾಡುತ್ತದೆ. ದೇವಾಲಯಕ್ಕೆ ಬಂದ ಭಕ್ತರು ಹೂವಿನ ಅಲಂಕಾರ ಕಂಡು ಮಂತ್ರ ಮುಗ್ಧರಾದರು.

ಬದಲಾದ ಬ್ಯಾರಿಕೇಡ್ ವ್ಯವಸ್ಥೆ, ದರ್ಶನ ನಿರಾಳ: ಮೊದಲ ವಾರ ದೇವರ ದರ್ಶನ ಪಡೆಯುವ ವಿಷಯದಲ್ಲಿ ಗೊಂದಲ ಉಂಟಾಗಿ, ಭಕ್ತರು ಪರದಾಡಿದ್ದರು. ಈ ಹಿನ್ನೆಲೆಯಲ್ಲಿ ಈ ಬಾರಿ ನ್ಯೂನತೆ ಸರಿಪಡಿಸುವಂತೆ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ, ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಸಲಹೆ ನೀಡಿದ್ದರು. ಹಾಗಾಗಿ ಈ ಬಾರಿ ಕಳೆದ ವಾರದಲ್ಲಿ ಮಾಡಿದ್ದ ವ್ಯವಸ್ಥೆಯಲ್ಲಿ ಮಾರ್ಪಾಡು ಮಾಡಲಾಗಿತ್ತು. ಇದರಿಂದ ಯಾವುದೇ ಗೊಂದಲವಿಲ್ಲದೆ ಭಕ್ತರು ದರ್ಶನ ಪಡೆದರು

ಮೆಟ್ಟಿಲಿನಲ್ಲೂ ಜನ ಜಂಗುಳಿ: ಹರಕೆ ಹೊತ್ತ ಮಹಿಳೆಯರು, ಯುವತಿಯರೂ ಸೇರಿದಂತೆ ಇತರರು ಅಪಾರ ಸಂಖ್ಯೆಯಲ್ಲಿ ಮೆಟ್ಟಿಲು ಮೂಲಕ ಹಾದು ಬಂದರು. ಬೆಟ್ಟ ತಲುಪಿದ ಬಳಿಕ ಪ್ರತ್ಯೇಕ ಸಾಲಿನಲ್ಲಿ ತೆರಳಿ, ಧರ್ಮದರ್ಶನದ ಸಾಲಿಗೆ ಸೇರುವ ವ್ಯವಸ್ಥೆ ಮಾಡಲಾಗಿತ್ತು.

ಸಾಲಿನಿಂದ ಜಿಗಿಯಲು ತಡೆ: ಕಳೆದ ವಾರ ಒಂದು ಸಾಲಿನಿಂದ ಮತ್ತೊಂದು ಸಾಲಿಗೆ ಬ್ಯಾರಿಕೇಡ್ ಹಾರುವ ಮೂಲಕ ಕೆಲವರು ಉದ್ಧಟತನ ಪ್ರದರ್ಶಿಸಿದ್ದರು. ಈ ಬಾರಿ ಸಾಲಿನಿಂದ ಸಾಲಿಗೆ ಜಿಗಿಯುವುದನ್ನು ತಡೆಗಟ್ಟಲು ಕೆಲವೆಡೆ ಮೆಶ್ ಅಳವಡಿಸಲಾಗಿತ್ತು.

ಸಂಜೆ ನಂತರ ಕುಗ್ಗಿದ ಭಕ್ತರು: ಮಧ್ಯಾಹ್ನ 3 ಗಂಟೆಯಿಂದ 4.30ರವರೆಗೆ ಬೆಟ್ಟಕ್ಕೆ ಬರುವ ಭಕ್ತರ ಸಂಖ್ಯೆಯಲ್ಲಿ ಇಳಿಮುಖವಾಯಿತು. ಅದರಲ್ಲೂ 2 ಸಾವಿರ ರೂ. ಟಿಕೆಟ್ ಪಡೆದ ಭಕ್ತರ ಸಂಖ್ಯೆ ಬೆರಳೆಣಿಕೆಯಷ್ಟು ಕಂಡು ಬಂತು. ಇದರಿಂದ ದೇವಾಲಯದ ಆವರಣದಲ್ಲಿ ಭಕ್ತರ ಸಂಖ್ಯೆ ಕಡಿಮೆಯಾಗಿತು. ಸಂಜೆ 5 ಗಂಟೆ ನಂತರ ಬೆಟ್ಟಕ್ಕೆ ಬರುವ ಭಕ್ತರ ಸಂಖ್ಯೆ ಮತ್ತೆ ಹೆಚ್ಚಾಯಿತು.

ಗಣ್ಯರ ದಂಡು: ಇಂದು ಬೆಳಗ್ಗೆ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಅವರ ಪತ್ನಿ ಉಷಾ, ಸಚಿವ ಚಲುವರಾಯಸ್ವಾಮಿ, ಮಾಜಿ ಸಚಿವ ಹೆಚ್.ಡಿ. ರೇವಣ್ಣ, ವಿಧಾನ ಪರಿಷತ್ ಸದಸ್ಯ ಸೂರಜ್, ನಟ ದರ್ಶನ್, ಅವರ ಪತ್ನಿ ವಿಜಯಲಕ್ಷ್ಮೀ, ನಟರಾದ ಚಿಕ್ಕಣ್ಣ, ಧನ್ವೀರ್, ಕುರಿ ಪ್ರತಾಪ, ಸಂಜೆ ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ, ಮಾಜಿ ಶಾಸಕರಾದ ಅನಿತಾ ಕುಮಾರಸ್ವಾಮಿ, ಸಾ.ರಾ.ಮಹೇಶ್, ಅಶ್ವಿನ್ ಕುಮಾರ್, ಶಾಸಕ ಜಿ.ಡಿ.ಹರೀಶ್‌ಗೌಡ, ವಿಧಾನ ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ಮಾಜಿ ಮೇಯರ್‌ಗಳಾದ ಆರ್.ಲಿಂಗಪ್ಪ ಎಂ.ಜೆ.ರವಿ ಕುಮಾರ್ ಹಾಗೂ ಇನ್ನಿತರರು ಬೆಟ್ಟಕ್ಕೆ ಬಂದು ದರ್ಶನ ಪಡೆದರು.

ಮತ್ತೊಂದು ಸುಂದರ ಮಹಾದ್ವಾರ ನಿರ್ಮಾಣ

ಚುರುಕುಗೊಳ್ಳುವಂತೆ ಮಾಡಿದ್ದಾರೆ. 2015ರಲ್ಲಿ ಬೋಗಾದಿ ಮುಖ್ಯ ರಸ್ತೆ ಕಡೆಗೆ ಇಂಡೋ–ಸಾರ್ಸೆನಿಕ್ ಶೈಲಿಯ ದ್ವಾರ ದಂತೆಯೇ ಈ ದ್ವಾರವನ್ನೂ ನಿರ್ಮಾಣ ಮಾಡಲಾಗುತ್ತಿದ್ದು, 2021 ರಲ್ಲಿಯೇ ವಿನ್ಯಾಸ ಮಾಡಲಾಗಿತ್ತು. ಸುಮಾರು 50 ಅಡಿ ಎತ್ತರದ ಈ ದ್ವಾರದ ಗೋಪುರವೇ 25 ಅಡಿ ಎತ್ತರವಿದೆ. ಮಧ್ಯದಲ್ಲಿ ದೊಡ್ಡ ಗೇಟ್ ಮತ್ತು ಎರಡು ಬದಿಯಲ್ಲಿ ಚಿಕ್ಕ ಗೇಟ್‌ಗಳು ಬರಲಿವೆ ಎಂದು ಮೈಸೂರು ವಿವಿಯ ನಿವೃತ್ತ ಕಾರ್ಯಪಾಲಕ ಅಭಿಯಂತರರೂ ಆದ ಹಿರಿಯ ವಿನ್ಯಾಸಕಾರ ಹೆಚ್.ಕಿಶೋರ್ ಚಂದ್ರ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

> ಸುಮಾರು 5 ಕೋಟಿ ರೂ.ವೆಚ್ಚದಲ್ಲಿ ಇಂಡೋ–ಸಾರ್ಸೆನಿಕ್ ಶೈಲಿಯಲ್ಲಿ ನಿರ್ಮಿಸಲಾಗುತ್ತಿರುವ ದ್ವಾರದ ಕಾಮಗಾರಿ ಮುಂದಿನ ತಿಂಗಳಾಂತ್ಯಕ್ಕೆ ಮುಕ್ತಾಯಗೊಳ್ಳಲಿದೆ. ವಿನ್ಯಾಸಕ್ಕೆ ಅನುಗುಣವಾಗಿ ಯಾವುದೇ ಲೋಪವೂ ಆಗದಂತೆ ನಿರ್ಮಿಸಲಾಗುತ್ತಿದೆ.
>
> – **ಅಶೋಕ್**, ಗುತ್ತಿಗೆದಾರ

ಮೈಸೂರು ಪರಂಪರೆಗೆ ಸೇರ್ಪಡೆ: ಮೈಸೂರು ಅರಮನೆ, ನಗರಪಾಲಿಕೆ ಕಚೇರಿ ಸೇರಿದಂತೆ ಮೈಸೂರಿನಲ್ಲಿರುವ ಬಹುತೇಕ ಕಟ್ಟಡಗಳು ಇಂಡೋ–ಸಾರ್ಸೆನಿಕ್ ಶೈಲಿಯಲಿದ್ದು, ಅವುಗಳ ಸಾಲಿಗೆ ಮೈಸೂರು ವಿವಿಯ ಹೊಸ ದ್ವಾರವೂ ಸೇರ್ಪಡೆಯಾಗಲಿದೆ. ಮಾನಸ ಗಂಗೋತ್ರಿ ಕ್ಯಾಂಪಸ್‌ನಲ್ಲಿರುವ 70 ಅಡಿ ಎತ್ತರದ ಕ್ಲಾಕ್ ಟವರ್ ಕೂಡ ಇದೇ ಶೈಲಿಯಲ್ಲಿ ನಿರ್ಮಾಣ ಮಾಡಲಾಗಿದೆ ಎಂದು ತಿಳಿಸಿದರು.

ವಿದ್ಯಾರ್ಥಿಗಳ ಅನುಕೂಲತೆಗಾಗಿ ಹೊಸ ದ್ವಾರ: ಇಂಜಿನಿಯರಿಂಗ್, ಲಾ ಮತ್ತು ಸ್ಕೂಲ್ ಆಫ್ ಪ್ಲಾನಿಂಗ್ ಅಂಡ್ ಆರ್ಕಿಟೆಕ್ಚರ್ ವಿಭಾಗದ ಲ್ಲಿಯೇ ಒಂದೂವರೆ ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳಿದ್ದಾರೆ. ವಿದ್ಯಾರ್ಥಿ ಗಳ ಸಂಚಾರಕ್ಕೆ ಹಾಗೂ ಗಂಗೋತ್ರಿ ಕ್ಯಾಂಪಸ್ ಅನ್ನು ಇನ್ನಷ್ಟು ಅಭಿವೃದ್ಧಿಗೊಳಿಸುವ ನಿಟ್ಟಿನಲ್ಲಿ ಮತ್ತೊಂದು ಹೊಸ ದ್ವಾರ ನಿರ್ಮಿಸಲಾಗುತಿದೆ ಎಂದು ಮೈಸೂರು ವಿವಿ ಕುಲಪತಿ ಪ್ರೊ.ಎನ್. ಕೆ.ಲೋಕನಾಥ್ ಮಾಹಿತಿ ನೀಡಿದರು.

'ಆಪರೇಷನ್ ಸಿಂಧೂರ್' ವೇಳೆ ಭಾರತ ಮೂರು ವಿರೋಧಿಗಳನ್ನು ಎದುರಿಸುತ್ತಿತ್ತು

ಲೆಫ್ಟಿನೆಂಟ್ ಜನರಲ್ ರಾಹುಲ್ ಆರ್. ಸಿಂಗ್



ನವದೆಹಲಿ, ಜು.4– 'ಆಪರೇಷನ್ ಸಿಂಧೂರ್' ವೇಳೆ ಪಾಕಿಸ್ತಾನಕ್ಕೆ ಚೀನಾ ಮತ್ತು ಟರ್ಕಿ ಹೇಗೆಲ್ಲಾ ನೆರವು ನೀಡಿದವು ಎಂಬುದನ್ನು ಸೇನೆಯ ಉಪ ಮುಖ್ಯಸ್ಥರಾಗಿರುವ ಲೆಫ್ಟಿನೆಂಟ್ ಜನರಲ್ ರಾಹುಲ್ ಆರ್. ಸಿಂಗ್ ಶುಕ್ರವಾರ ತಿಳಿಸಿದ್ದಾರೆ.

ಭಾರತಕ್ಕೆ ತೊಂದರೆ ನೀಡುವ ಸಲುವಾಗಿ ಪಾಕಿಸ್ತಾನವನ್ನು ಬಳಸಿಕೊಂಡ ಚೀನಾ ನಾಲ್ಕು ದಿನಗಳ ಭಾರತ–ಪಾಕಿಸ್ತಾನ ಸೇನಾ ಸಂಘರ್ಷದ ಸಂದರ್ಭದಲ್ಲಿ ಸಾಧ್ಯವಿರುವ ಎಲ್ಲಾ ರೀತಿಯ ನೆರವು ನೀಡಿತ್ತು ಎಂದು ಅವರು ಹೇಳಿದ್ದಾರೆ.

FICCI ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದ ಲೆಫ್ಟಿನೆಂಟ್ ಜನರಲ್, ತನ್ನ ವಿವಿಧ ಶಸಾಸ್ತ್ರಗಳನ್ನು ಪರೀಕ್ಷಿಸಲು ಭಾರತ ಮತ್ತು ಪಾಕ್ ಸಂಘರ್ಷವನ್ನು ಲೈವ್ ಲ್ಯಾಬ್ ರೀತಿ ಬಳಸಿಕೊಂಡ ಚೀನಾ, ಪಾಕಿಸ್ತಾನಕ್ಕೆ ಲೈವ್ ಅಪ್ಡೇಟ್ ನೀಡುತಿತ್ತು ಎಂದು ಹೇಳಿದರು. ನಮಗೆ ಒಂದು ಗಡಿ ಮತ್ತು ಇಬ್ಬರು ಎದುರಾಳಿಗಳಿದ್ದು, ವಾಸ್ತವವಾಗಿ ಮೂವರಿದ್ದರು. ಎದುರಾಳಿಯಾಗಿದ್ದ ಪಾಕಿಸ್ತಾನಕ್ಕೆ ಚೀನಾ ಎಲ್ಲಾ ರೀತಿಯ ಬೆಂಬಲ ನೀಡುತಿತ್ತು. ಪಾಕಿಸ್ತಾನದ ಶೇ. 81 ರಷ್ಟು ಮಿಲಿಟರಿ ಸರಕುಗಳು ಚೀನಾದವು. ಇತರ ಶಸಾಸ್ತಗಳೊಂದಿಗೆ ತನ್ನ ಸಶಸ್ತ್ರಗಳನ್ನು ಪರೀಕ್ಷಿಸಲು ಚೀನಾಕ್ಕೆ ಸೇನಾ ಸಂಘರ್ಷ ಲೈವ್ ಲ್ಯಾಬ್‌ನಂತಿತ್ತು ಎಂದರು.

ಟರ್ಕಿ ಕೂಡಾ ಚೀನಾದಂತೆಯೇ ಪಾಕಿಸ್ತಾನಕ್ಕೆ ನೆರವು ನೀಡಿದೆ. DGMO ಮಟ್ಟದ ಮಾತುಕತೆಗಳು ನಡೆಯುತ್ತಿರುವಾಗ, ನಮ್ಮ ಪ್ರಮುಖ ಯುದ್ಧ ವಿಮಾನಗಳ ಬಗ್ಗೆ ಚೀನಾದಿಂದ ಲೈವ್ ಅಪ್ಡೇಡ್‌ಗಳನ್ನು ಪಾಕಿಸ್ತಾನ ಪಡೆದಿತ್ತು ಎಂದು ತಿಳಿಸಿದರು.

ಭಯೋತ್ಪಾದಕ ಮೂಲಸೌಕರ್ಯಗಳ ಮೇಲೆ ನಿಖರವಾದ ದಾಳಿ ನಡೆದ ಭಾರತೀಯ ಸಶಸ್ತ್ರ ಪಡೆಗಳನ್ನು ಶ್ಲಾಘಿಸಿದ ಲೆಫ್ಟಿನೆಂಟ್ ಜನರಲ್ ರಾಹುಲ್ ಆರ್ ಸಿಂಗ್, ಆಪರೇಷನ್ ಸಿಂಧೂರ್‌ನಿಂದ ಕೆಲವು ಪಾಠ ಕಲಿತಿದ್ದೇವೆ. ನಾಯಕತ್ವದಿಂದ ಬಂದ ಕಾರ್ಯತಂತ್ರದ ಸಂದೇಶ ಸ್ಪಷ್ಟವಾಗಿತ್ತು. ಮಾನವ ಗುಪ್ತಚರ ಮತ್ತು ತಂತ್ರಜ್ಞಾನ ಬಳಸಿ ಸಂಗ್ರಹಿಸಿದ ಮಾಹಿತಿ ಆಧಾರದ ಮೇಲೆ ದಾಳಿ ಯೋಜಿಸಲಾಗಿತ್ತು. ಹೀಗಾಗಿ 21 ಉಗ್ರರ ಮೂಲಸೌಕರ್ಯಗಳನ್ನು ಟಾರ್ಗೆಟ್ ಮಾಡಲಾಗಿತ್ತು. ಅದರಲ್ಲಿ ಒಂಬತ್ತು ಉಗ್ರರ ನೆಲೆ ಧ್ವಂಸಗೊಳಿಸಲಾಗಿದೆ ಎಂದು ತಿಳಿಸಿದರು.

ಸೇನೆಯ ಮೂರು ವಿಭಾಗಗಳು ಸರಿಯಾದ ಮಾಹಿತಿ ಕಳುಹಿಸಲು ಈ ವಿಧಾನ ಅನುಸರಿಸಲು ನಿರ್ಧಾರಿಸಲಾಯಿತು. ನಮ್ಮ ಉದ್ದೇಶ ಈಡೇರಿದಾಗ ಅದನ್ನು ನಿಲ್ಲಿಸಲು ಕಡಿಮೆ ಮಾಡಬೇಕು. ಯುದ್ಧ ಆರಂಭಿಸುವುದು ಸುಲಭ. ಆದರೆ ನಿಲ್ಲಿಸುವುದು ಬಹಳ ಕಷ್ಟ ಎಂದು ಸೇನೆಯ ಉಪ ಮುಖ್ಯಸ್ಥರು ತಿಳಿಸಿದರು.

ಪತಿಯಿಂದಲೇ ಮಹಿಳಾ ಕೌನ್ಸಿಲರ್ ಬರ್ಬರ ಹತ್ಯೆ

ಚೆನ್ನೈ: ಚೆನ್ನೈನ ಪಶ್ಚಿಮ ಉಪನಗರದಲ್ಲಿರುವ ತಿರುನಿಂದ್ರವೂರ್ ಪುರಸಭೆಯ ಮಹಿಳಾ ಕೌನ್ಸಿಲರ್ ಒಬ್ಬರನ್ನು ಅವರ ಪತಿಯೇ ಕೊಚ್ಚಿ ಕೊಂದಿದ್ದಾರೆ ಎಂದು ಪೊಲೀಸರು ಶುಕ್ರವಾರ ತಿಳಿಸಿದ್ದಾರೆ.

ಎಸ್.ಗೋಮತಿ (38) ಹತ್ಯೆಗೀಡಾದ ಕೌನ್ಸಿಲರ್, ಅವರು ಸ್ವತಂತ್ರ ಅಭ್ಯರ್ಥಿಯಾಗಿ ಸ್ಪರ್ಧಿಸಿ ಪುರಸಭೆ ಚುನಾವಣೆಯಲ್ಲಿ ಗೆದ್ದಿದ್ದರು. ಗುರುವಾರ ರಾತ್ರಿ ತಿರುನಿಂದ್ರವೂರಿನ ಪೆರಿಯಾರ್ ಕಾಲೋನಿಯಲ್ಲಿರುವ ಅವರ ಮನೆಯ ಬಳಿ ಆಕೆಯ ಪತಿ ಸ್ಟೀಫನ್ ರಾಜ್ ಹಲ್ಲೆ ನಡೆಸಿದ ಪರಿಣಾಮ ಗೋಮತಿ ಸಾವನ್ನಪ್ಪಿದ್ದರು. ರಕ್ತದ ಮಡುವಿನಲ್ಲಿ ಬಿದ್ದಿದ್ದ ಆಕೆಯನ್ನು ಅಲ್ಲಿಯೇ ಸ್ಟೀಪನ್ ರಾಜ್ ಪೊಲೀಸರ ಮುಂದೆ ಶರಣಾಗಿದ್ದಾರೆ.

ಈ ಸಂಬಂಧ ತನಿಖೆ ಮುಂದುವರಿದಿದೆ. ದಂಪತಿ ಸುಮಾರು ಹತ್ತು ವರ್ಷಗಳ ಹಿಂದೆ ಮದುವೆಯಾಗಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ. ಇಬ್ಬರೂ ವಿಸಿಕೆ ಪಕ್ಷದ ಸದಸ್ಯರಾಗಿದ್ದರು.

ಅಭಿನಂದನೆ



ಆಷಾಢ ಶುಕ್ರವಾರ ಹಿನ್ನೆಲೆಯಲ್ಲಿ ಮೈಸೂರಿನ ಶ್ರೀಜ್ವಾಲಮಾಲ ತ್ರಿಪುರ ಸುಂದರಿ ಅಮ್ಮನವರ ಸನ್ನಿಧಾನದಲ್ಲಿ ನಿರಂತರ ಅನ್ನಸಂತರ್ಪಣೆ ಮಾಡಿದ ಚಾಮುಂಡೇಶ್ವರಿ ಗೆಳೆಯರ ಬಳಗದ ಯುವಕರನ್ನು ಶ್ರೀಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಹಾಗೂ ದೇಗುಲದ ನೌಕರರು ಅಭಿನಂದಿಸಿದರು.

ಹೆಚ್.ಡಿ.ಕೋಟೆ ತಾಲೂಕಲ್ಲಿ ಭೂ ಮಾಫಿಯಾ ಅಟ್ಟಹಾಸ

ಅಧಿಕಾರಿಗಳ ಸಹಕಾರದಿಂದಲೇ ಕಂಡ ಕಂಡವರ ಆಸ್ತಿ ಕಬಳಿಕೆ; ನಕಲಿ ದಾಖಲೆ ನರ್ತನ!

ಮೈಸೂರಿನ ಜಿಲ್ಲಾ ಮಟ್ಟದ ಜನ ಸ್ಪಂದನಾ ಸಭೆಯಲ್ಲಿ ಡಾ. ಮಹದೇವಪ್ಪ ಬಳಿ ಹಲವರ ಅಳಲು; ಸಚಿವ ಹಾಸ್ಯ ಚಟಾಕಿ!

ಮೈಸೂರು, ಜು.4(ಬಿಎಲ್‌ಯು)– ವಾರಸುದಾರರಿಲ್ಲದ 100 ಕೋಟಿ ಆಸ್ತಿ ಇದೆಯಂತೆ ಅದನ್ನು ನನ್ನ ಹೆಸರಿಗೆ ಬರಿಯಪ್ಪಾ..., ನಾನು ಇನ್ನು ಅಜ್ಜ ಆಗಿಲ್ಲಪ್ಪಾ..., ಇಡೀ ರಾಜ್ಯದಲ್ಲೇ ಮೈಸೂರು ನಂಬರ್ ಒನ್ ಆಗಬೇಕು... ಈ ಕೆಲಸ ಆಗಲೇಬೇಕು... ಇದು ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಹಾಸ್ಯದಾಟಿಯ ಆಡಳಿತ ವೈಖರಿ.

ಮೈಸೂರಿನ ಜಿಲ್ಲಾ ಪಂಚಾಯತ್ ಅಬ್ದುಲ್ ನಜೀರ್ ಸಾಬ್ ಸಭಾಂಗಣದಲ್ಲಿ ಇಂದು ನಡೆದ ಜಿಲ್ಲಾ ಮಟ್ಟದ ಜನ ಸ್ಪಂದನಾ ಸಭೆಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರು ಆಡಿದ ನುಡಿ ಮುತ್ತುಗಳು.

ಮೈಸೂರಿನ ಹೆಚ್.ಡಿ.ಕೋಟೆ ತಾಲೂಕು ಎಗ್ಗಡಾಪುರದ ಸರ್ವೆ ನಂಬರ್ 80 ರಲ್ಲಿ 40 ಎಕರೆ ಭೂಮಿ ಇದ್ದು, ಇದರ ಮಾಲೀಕರು ವಿದೇಶಕ್ಕೆ ಹೋಗಿದ್ದು, ಮತ್ತೆ ವಾಪಾಸಾಗಿಲ್ಲ. ಅವರು ಬದುಕಿದ್ದಾರೋ, ಸತ್ತಿದ್ದಾರೋ ಅಂತ ಕೂಡ ಈ ತನಕ ತಿಳಿದಿಲ್ಲ. ಈ ಅವಕಾಶವನ್ನೇ ಬಳಸಿಕೊಂಡಿರುವ ಭೂ ಮಾಫಿಯಾದವರು 40 ಎಕರೆ ಭೂಮಿಯನ್ನು ಅತಿಕ್ರಮಿಸಿಕೊಂಡಿದ್ದಾರೆ. ಅಧಿಕಾರಿಗಳು ಭೂ ಮಾಫಿಯಾ ಜೊತೆ ಶಾಮೀಲಾಗಿ ನಕಲಿ ದಾಖಲಾತಿ ಸೃಷ್ಟಿಸಿ ಅವರ ಕೈಗೆ ನೀಡಿದ್ದಾರೆ. ವಾರಸುದಾರರಿಲ್ಲದ ಈ ಭೂಮಿ ಸರ್ಕಾರದ ಸುಪರ್ದಿಗೆ ಬರಬೇಕು ಎಂದು ಕೆಂಪಶೆಟ್ಟಿ ಎಂಬಾತ ಡಾ.ಮಹದೇವಪ್ಪ ಅವರಲ್ಲಿ ಮನವಿ ಮಾಡಿದರು.

ಹೆಚ್.ಡಿ.ಕೋಟೆ ತಹಶೀಲ್ದಾರ್ ಅವರನ್ನು ಕರೆದ ಡಾ.ಮಹದೇವಪ್ಪ ಅವರು, 100 ಕೋಟಿ ಮೌಲ್ಯದ ವಾರಸುದಾರರಿಲ್ಲದ 40 ಎಕರೆ ಭೂಮಿ ಇದೆಯಂತೆ, 'ನನ್ನ ಹೆಸರಿಗೆ ಅದನ್ನು ಬರೆದು ಬಿಡಪ್ಪಾ...' ಎಂದು ಹಾಸ್ಯ ಚಟಾಕಿ ಹಾರಿಸಿದರು.



ಮೈಸೂರಿನ ಜಿಲ್ಲಾ ಪಂಚಾಯತ್ ನಲ್ಲಿ ಶುಕ್ರವಾರ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರು ಜಿಲ್ಲಾ ಮಟ್ಟದ ಜನ ಸ್ಪಂದನಾ ಸಭೆಯ ವೇಳೆ ಜನರ ಅಹವಾಲುಗಳನ್ನು ಸ್ವೀಕರಿಸಿದರು.

ಬಳಿಕ ಅವರು, ತಮಾಷೆ ಮಾಡಿದೆ ಎಂದು ನಗುತ್ತಾ ವಾರಸುದಾರರಿಲ್ಲದ ಭೂಮಿಯ ಬಗ್ಗೆ ಪರಿಶೀಲನೆ ಮಾಡಿ ಜಿಲ್ಲಾಧಿಕಾರಿಗಳಿಗೆ ವರದಿ ನೀಡಿ ಎಂದು ತಹಶೀಲ್ದಾರ್ ಅವರಿಗೆ ಸೂಚನೆ ನೀಡಿದರು.

ಆಸ್ತಿ ಮಾರಿ ಸಿನಿಮಾ ತೆಗೀಬೇಡಿ: ಚಿದಾನಂದ್ ಎಂಬುವವರು ಸಾರ್ 'ಅಜ್ಜ' ಎಂದು ಹೇಳುತ್ತಿದ್ದಂತೆ ಅಯ್ಯೋ ನಾನು ಇನ್ನು ಅಜ್ಜ ಆಗಿಲ್ಲ ಕಣಪ್ಪ ಎಂದು ಡಾ.ಮಹದೇವಪ್ಪ ಮತ್ತೊಮ್ಮೆ ಹಾಸ್ಯ ಚಟಾಕಿ ಹಾರಿಸಿದರು.

ಅಲ್ಲ ಸಾರ್, ನಾನು 'ಅಜ್ಜ' ಸಿನಿಮಾ ನಿರ್ಮಾಣ ಮಾಡಿದೆ. ಆದರೆ ಅದರಿಂದ ನಷ್ಟವಾಗಿದೆ. ಆದ ಕಾರಣ ಈ ಸಿನಿಮಾಗೆ ಸರ್ಕಾರದಿಂದ ಸಬ್ಸಿಡಿ ಕೊಡಿಸಿ ಎಂದು ಮನವಿ ಮಾಡಿದರು.

ಅಲ್ಲಪ್ಪ ಇರೋ ಆಸ್ತಿಯನ್ನೆಲ್ಲಾ ಕಳೆದುಕೊಂಡು ಸಿನಿಮಾ ನಿರ್ಮಾಣ ಮಾಡುವ ಅಗತ್ಯ ವಿರಲಿಲ್ಲ ಅಲ್ವಾ ಎಂದು ಬುದ್ಧಿವಾದ ಹೇಳಿ ಚಿದಾನಂದ ಅವರಿಂದ ಮನವಿ ಪತ್ರ ಪಡೆದರು.

ಕಳೆದ ಬಾರಿ ನಡೆದ ಜನ ಸಂಪರ್ಕ ಸಭೆಯಲ್ಲಿ ಎಷ್ಟು ಅಹವಾಲು ಸಲ್ಲಿಕೆಯಾಗಿತ್ತು ಇದರಲ್ಲಿ ಎಷ್ಟು ಜನರ ಸಮಸ್ಯೆ ಪರಿಹಾರವಾಗಿದೆ. ಒಂದು ವೇಳೆ ಸಮಸ್ಯೆ ಪರಿಹಾರವಾಗದಿದ್ದರೆ ಕಾರಣ ತೊಡಕುಗಳೇನು ಎಂಬ ಬಗ್ಗೆ ಸ್ಪಷ್ಟ ಮಾಹಿತಿ ನೀಡಿ. ಪಾರದರ್ಶಕ ಆಡಳಿತ ನೀಡುತ್ತಿದ್ದೇವೆ ಎಂದು ಜನರಿಗೆ ಸಂದೇಶ ನೀಡಬೇಕು. ಈ ಮೂಲಕ ಅಭಿವೃದ್ಧಿಯಲ್ಲಿ ಮೈಸೂರು ರಾಜ್ಯದಲ್ಲಿ ನಂಬರ್ ಒನ್ ಆಗಬೇಕು ಎಂದು ಡಾ.ಮಹದೇವಪ್ಪ ಅಧಿಕಾರಿಗಳಿಗೆ ಟಾಸ್ಕ್ ನೀಡಿದರು.

ಮೈಸೂರು ದಸರಾ ಕೆಲಸವಿದೆ ಎಂಬ ನೆಪ ಹೇಳಿ ದಿನ ನಿತ್ಯದ ಕಾರ್ಯವನ್ನು ನಿರ್ಲಕ್ಷಿಸಬಾರದು. ದಸರಾ ಕೆಲಸದ ಜೊತೆಗೆ ನಿಮ್ಮ ದೈನಂದಿನ ಕೆಲಸ ಕೂಡ ಆಗಬೇಕು ಎಂದು ತಾಕೀತು ಮಾಡಿದರು.

ಈ ವೇಳೆ ವಿವರ ನೀಡಿದ ಅಪರ ಜಿಲ್ಲಾಧಿಕಾರಿ ಡಾ.ಶಿವರಾಜು ಅವರು, ಕಳೆದ ಬಾರಿ 113 ಅರ್ಜಿ ಬಂದಿತ್ತು. ಇದರಲ್ಲಿ ಬಹುತೇಕ ಸಮಸ್ಯೆಗಳಿಗೆ ಪರಿಹಾರ ನೀಡಲಾಗಿದೆ ಎಂದು ಮಾಹಿತಿ ನೀಡಿದರು.

ಗಾಂಧಿ ಪುರಸ್ಕಾರ ಹೇಗೆ ನೀಡಿದಿರಿ: ಮೈಸೂರಿನ ಹೆಚ್.ಡಿ.ಕೋಟೆಯ ಚಿಕ್ಕಳ್ಳಿ ಗ್ರಾಮದ ಸರ್ಕಾರಿ ಶಾಲೆಗೆ ಗೇಟ್ ಇಲ್ಲ ಒಳ ಚರಂಡಿ ನೀರಿನ ಜೊತೆ ಕುಡಿಯುವ ನೀರು ಸೇರಿದ್ದು, ಕಲುಷಿತ ನೀರನ್ನೆ ಜನರು ಕುಡಿಯುತ್ತಿದ್ದಾರೆ. ಗ್ರಾಮ ಪಂಚಾಯಿತಿ ಪಿಡಿಒ ಕೇಳಿದರೆ ಅನುದಾನವಿಲ್ಲ ಎನ್ನುತ್ತಾರೆ. ಇಷ್ಟೆಲ್ಲಾ ಅವಾಂತರ ಇರುವ ಈ ಗ್ರಾಮಕ್ಕೆ ಅದು ಹೇಗೆ ಗಾಂಧಿ ಪುರಸ್ಕಾರ ನೀಡಿದರು ಎಂದು ಗ್ರಾಮಸ್ಥ ಶಿವಣ್ಣ ಪ್ರಶ್ನಿಸಿದರು.

ಹೆಚ್.ಡಿ.ಕೋಟೆ ತಹಶೀಲ್ದಾರ್ ಅವರನ್ನು ಕರೆದ ಡಾ.ಮಹದೇವಪ್ಪ ಅವರು, ನಿಮ್ಮ ತಾಲೂಕು ಅತ್ಯಂತ ಹಿಂದುಳಿದಿದೆ. ಗ್ರಾಮದ ಅಭಿವೃದ್ಧಿ ಮಾಡಲು ಬೇರೆ ಬೇರೆ ಅನುದಾನಗಳನ್ನು ಬಳಸಿಕೊಳ್ಳಿ. ಬೇರೆ ಅನುದಾನ ಬಳಕೆಗೆ ಕೇಂದ್ರ ಸರ್ಕಾರದ ಅನುಮತಿ ಬೇಕೆ ಎಂದು ಪ್ರಶ್ನಿಸಿದ ಡಾ.ಮಹದೇವಪ್ಪ ಅವರು, ಜಿಲ್ಲಾ ಪಂಚಾಯತ್ ಸಿಇಒ ಅವರ ಅನುಮತಿ ಪಡೆದು, ಬೇರೆ ಅನುದಾನದಲ್ಲಿ ಅತ್ಯಗತ್ಯವಾಗಿ ಆಗಬೇಕಿರುವ ಕೆಲಸ ಮಾಡಿ ಮುಗಿಸಿ ಎಂದು ತಾಕೀತು ಮಾಡಿದರು.

ಸ್ವಯಂ ಪ್ರೇರಿತ ದೂರು ದಾಖಲು: ಹೆಚ್.ಡಿ.ಕೋಟೆಯಲ್ಲಿ ಸರ್ಕಾರಕ್ಕೆ ಸೇರಿದ ಬಹಳಷ್ಟು ಭೂಮಿಯನ್ನು ಭೂಮಾಫಿಯಾ ಅತಿಕ್ರಮಿಸಿಕೊಂಡಿದೆ. ಕಾಂಪ್ಲೆಕ್ಸ್, ಬಾರ್ ಸೇರಿದಂತೆ ಇತರೆ ಕಟ್ಟಡ ನಿರ್ಮಿಸಿದ್ದಾರೆ. ತಹಶೀಲ್ದಾರ್ ಅವರ ಸಹಿಯನ್ನು ಫೋರ್ಜರಿ ಮಾಡಿ ನಕಲಿ ದಾಖಲಾತಿ ಸೃಷ್ಟಿಸಿದ್ದಾರೆ. ಈ ಬಗ್ಗೆ ಪೊಲೀಸ್ ಠಾಣೆ, ತಹಶೀಲ್ದಾರ್, ಲೋಕಾಯುಕ್ತರಿಗೆ ದೂರು ನೀಡಿದರೂ ಯಾವುದೇ ಪ್ರಯೋಜನವಾಗಿಲ್ಲ ಎಂದು ಆನಂದ್ ಎಂಬ ಹೋರಾಟಗಾರ ಆರೋಪ ಮಾಡಿದರು.

ನೀವು ನೀಡಿರುವ ದೂರಿಗೆ ಸಂಬಂಧಿಸಿದಂತೆ ಈ ಕೂಡಲೇ ಪೊಲೀಸ್ ಠಾಣೆಯಲ್ಲಿ ಸ್ವಯಂ ಪ್ರೇರಿತ ದೂರು ದಾಖಲಿಸಿಕೊಳ್ಳಲಾಗುವುದು. ನಕಲಿ ಸಹಿ ಮಾಡಿ ಸರ್ಕಾರಿ ಭೂಮಿ ಅತಿಕ್ರಮಿಸಿಕೊಡಿದ್ದಾರೊ ಅವರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂದು ಡಾ.ಮಹದೇವಪ್ಪ ಭರವಸೆ ನೀಡಿದರು.

ಕಾನೂನು ನಿಯಮ ಸಡಿಲಿಸಿ: ನಾನು ಹೆಚ್.ಡಿ.ಕೋಟೆ ತಾಲೂಕು ಎನ್.ಬೆಳ್ತೂರು ಗ್ರಾಮದ ವಾಸಿ. ನಮ್ಮ ಬೆಳೆಯನ್ನು ಮಾರಾಟ ಮಾಡಲು 90 ಕಿಲೋ ಮೀಟರ್ ದೂರದ ಮೈಸೂರಿಗೆ ಬರಬೇಕು. ಕೇರಳ ನಮಗೆ ಕೇವಲ 9 ಕಿಲೋ ಮೀಟರ್ ಹತ್ತಿರದಲ್ಲಿದೆ. ಆದ ಕಾರಣ ಅರಣ್ಯದ ಮೂಲಕ ಕೇರಳಗೆ ಹೋಗಿ ನಮ್ಮ ಬೆಳೆ ಮಾರಾಟ ಮಾಡಲು ಅನುವು ಮಾಡಿಕೊಡಬೇಕು ಎಂದು ನರಸಿಂಹ ಮೂರ್ತಿ ಎಂಬುವರು ಮನವಿ ಮಾಡಿದರು.

ಅರಣ್ಯ ಇಲಾಖೆಯಲ್ಲಿ ಕಟ್ಟುನಿಟ್ಟಿನ ಕಾನೂನು ಇದೆ. ಇದನ್ನು ಸಡಿಲಗೊಳಿಸಲು ಸಾಧ್ಯವಿಲ್ಲ. ಆದರೂ ಈ ಬಗ್ಗೆ ಅರಣ್ಯ ಇಲಾಖೆ ಅಧಿಕಾರಿಗಳ ಜೊತೆ ಚರ್ಚೆ ಮಾಡುತ್ತೇನೆ ಎಂದು ಡಾ.ಮಹದೇವಪ್ಪ ಆಶ್ವಾಸನೆ ನೀಡಿದರು.

ನಮಗೆ ಸೂರು ಕೊಡಿ: ನಾವೆಲ್ಲಾ ಕೂಲಿ ಮಾಡಿ ಜೀವನ ಮಾಡುತ್ತಿದ್ದೇವೆ. ನಮ್ಮ ದುಡಿಮೆ ಮನೆ ಬಾಡಿಗೆ ಕಟ್ಟಲು ಆಗುತ್ತದೆ. ಆದ್ದರಿಂದ ಸರ್ಕಾರದಿಂದ ಮನೆ ಕೊಡಿಸಿ ಎಂದು ಬಹಳಷ್ಟು ಜನರು ಮನವಿ ಸಲ್ಲಿಸಿದರು.

ಬಟ್ಟೆ ವ್ಯಾಪಾರಿಗಳು, ಪೆಟ್ಟಿಗೆ ಅಂಗಡಿಯವರು, ಕೂಲಿ ಕೆಲಸಗಾರರು ಸೇರಿದಂತೆ ಇತರರು ವಾಸ ಮಾಡಲು ವಸತಿ ಸಮುಚ್ಚಯ ನಿರ್ಮಾಣ ಮಾಡುಲಾಗುವುದು. ಇದಕ್ಕಾಗಿ ಮೈಸೂರು ನಗರದ ಸುತ್ತಮುತ್ತ ಸರ್ಕಾರದ ಭೂಮಿಗಾಗಿ ಹುಡುಕಾಟ ನಡೆಯುತ್ತಿದೆ. ಆದಷ್ಟು ಬೇಗ ಬಡವರಿಗೆ ಮನೆ ನೀಡಲಾಗುವುದು ಎಂದು ಡಾ.ಮಹದೇವಪ್ಪ ಭರವಸೆ ನೀಡಿದರು. ಇದೇ ವೇಳೆ ಡಾ.ಮಹದೇವಪ್ಪ ಅವರು ಇ–ಪೌತಿ ಆಂದೋಲನವನ್ನು ಉದ್ಘಾಟನೆ ಮಾಡಿದರು.

ಶಾಸಕ ಸಿ.ಎನ್.ಮಂಜೇಗೌಡ, ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಹೆಚ್.ಎಂ.ರೇವಣ್ಣ, ಮೈಸೂರು ಜಿಲ್ಲಾಧ್ಯಕ್ಷ ಅರುಣ್, ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತರೆಡ್ಡಿ, ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್, ನಗರ ಪಾಲಿಕೆ ಆಯುಕ್ತ ಷೇಕ್ ಆಸೀಫ್ ತನ್ವೀರ್, ಜಿಲ್ಲಾ ಪಂಚಾಯತ್ ಸಿಇಒ ಯುಕೇಶ್ ಕುಮಾರ್, ವಸ್ತು ಪ್ರದರ್ಶನ ಪ್ರಾಧಿಕಾರಿದ ಅಧ್ಯಕ್ಷ ಅಯೂಬ್ ಖಾನ್ ಸಭೆಯಲ್ಲಿ ಹಾಜರಿದ್ದರು.

ರಾಜ್ಯದಲ್ಲಿ ಸಾವಯವ ಕೃಷಿಗೆ ಒತ್ತು ನೀಡಲಾಗುವುದು

ಕೃಷಿ ಸಚಿವ ಎನ್.ಚೆಲುವರಾಯಸ್ವಾಮಿ ಇಂಗಿತ



ಮೈಸೂರು, ಜು.4(ಆರ್‌ಕೆ)– ರಾಜ್ಯದಲ್ಲಿ ರಾಸಾಯನಿಕ ಗೊಬ್ಬರ ಬಳಕೆ ನಿಯಂತ್ರಿಸಿ ಸಾವಯವ ಕೃಷಿಗೆ ಒತ್ತು ನೀಡಲಾಗುವುದು ಎಂದು ಕೃಷಿ ಸಚಿವ ಎನ್.ಚೆಲುವರಾಯಸ್ವಾಮಿ ತಿಳಿಸಿದ್ದಾರೆ.

ಮೈಸೂರು ತಾಲೂಕು, ನಾಗನಹಳ್ಳಿ ಕೃಷಿ ತರಬೇತಿ ಕೇಂದ್ರದಲ್ಲಿ ವಿಭಾಗ ಮಟ್ಟದ ಕೃಷಿ ಅಧಿಕಾರಿಗಳೊಂದಿಗೆ ಪ್ರಗತಿ ಪರಿಶೀಲನಾ ಸಭೆ ನಡೆಸಿದ ಬಳಿಕ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡುತ್ತಿದ್ದ ಅವರು, ರಾಜ್ಯಾದ್ಯಂತ ಡಿಎಪಿ ಗೊಬ್ಬರ ಬಳಕೆ ಕಡಿಮೆ ಮಾಡಲು ಸಚಿವ ಸಂಪುಟ ಸಭೆಯಲ್ಲಿ ನಿರ್ಧರಿಸಲಾಗಿದೆ ಎಂದರು.

ಕೇಂದ್ರ ಸರ್ಕಾರವೂ ಮುಂದಿನ ವರ್ಷದಿಂದ ಶೇ.50ರಷ್ಟು ಡಿಎಪಿ ಗೊಬ್ಬರ ಪೂರೈಕೆ ಸ್ಥಗಿತಗೊಳಿಸಲು ಮುಂದಾಗಿರುವುದರಿಂದ ಈಗಿನಿಂದ ರೈತರಿಗೆ ಜಾಗೃತಿ ಮೂಡಿಸಲಾಗುತ್ತಿದ್ದು, ಉಡುಪಿ, ಮಂಗಳೂರಲ್ಲಿ ನಿಯಂತ್ರಣಕ್ಕೆ ಬಂದಿದೆ. ಮುಂದಿನ ವರ್ಷ ರಾಸಾಯನಿಕ ಗೊಬ್ಬರ ಬಳಕೆಯನ್ನು ಕಡಿಮೆ ಮಾಡಲು ಪ್ರಯತ್ನಿಸಲಾಗುವುದು ಎಂದು ಅವರು ತಿಳಿಸಿದರು.

ಡಿಎಪಿಗೆ ಬದಲಾಗಿ ಸಾವಯುವ, ಕಾಂಪೋಸ್ಟ್ ಹಾಗೂ ಹಸಿರು ಗಿಡಗಳಿಂದ ತಯಾರಿಸಿದ ಸಹಜ ಗೊಬ್ಬರ ಬಳಸಿ ಕೃಷಿ ಮಾಡುವಂತೆ ನೀಡಿದ ಸಲಹೆಗೆ ರೈತರಿಂದ ಉತ್ತಮ ಪ್ರತಿಕ್ರಿಯೆ ಬಂದಿದೆ. ರಾಜ್ಯದಲ್ಲಿ ಉತ್ತಮ ಮಳೆಯಾಗಿದ್ದು, ಜಲಾಶಯಗಳು ಭರ್ತಿಯಾಗುತ್ತಿರುವುದು ಸಂತಸ ಉಂಟು ಮಾಡಿದ್ದರೆ, ಮತ್ತೊಂದೆಡೆ ಪ್ರವಾಹದಿಂದ ಬೆಳೆ ನಾಶವಾಗುತ್ತಿರುವುದು ಬೇಸರ ತಂದಿದೆ ಎಂದು ಅವರು ತಿಳಿಸಿದರು.

ಬಿತ್ತನೆ ಬೀಜ ಕೀಟನಾಶಕ, ಗೊಬ್ಬರವನ್ನು ಪೂರೈಕೆ ಮಾಡುತ್ತಿದ್ದು, ರೈತರು ಇಳುವರಿ ಬರುವ ಬೆಳೆ ಬೆಳೆದು ಆಹಾರ ಉತ್ಪದನೆ ಮಾಡಿ ಆರ್ಥಿಕ ಸ್ವಾವಲಂಬಿಯಾಗಬೇಕು. ಕೃಷಿ ಹೊಂಡ, ಕಬ್ಬು ಕಟಾವು ಮಾಡುವ ಯಂತ್ರ ಖರೀದಿಗೆ ಆರ್ಥಿಕ ನೆರವು, ಕೃಷಿ ಯಂತ್ರೋಪಕರಣಗಳ ಪೂರೈಕೆ ಹಾಗೂ ಇತರ ಸರ್ಕಾರಿ ಸೌಲಭ್ಯಗಳನ್ನು ರೈತರು ಸದ್ಬಳಕೆ ಮಾಡಿಕೊಳ್ಳುವಂತೆಯೂ ಸಚಿವರು ಸಲಹೆ ನೀಡಿದರು.

ಕೃಷಿ ಆಯುಕ್ತ ವೈ.ಎಸ್.ಪಾಟೀಲ್, ನಿರ್ದೇಶಕ ಡಾ. ವಿಜಿ, ಜಲಾಯನ ಅಭಿವೃದ್ಧಿ ನಿರ್ದೇಶಕ ಮಹಮದ್ ಪರ್ವೇಜ್ ಬಂತನಾಳ್, ರಾಜ್ಯ ಬೀಜ ನಿಗಮದ ವ್ಯವಸ್ಥಾಪಕ ನಿರ್ದೇಶಕ ಅನುಪ್, ಬೀಜ ಪ್ರಮಾಣೀಕರಣ ಸಂಸ್ಥೆ ವ್ಯವಸ್ಥಾಪಕ ನಿರ್ದೇಶಕ ಡಾ. ಸದಾಶಿವ ಸೇರಿದಂತೆ ಮೈಸೂರು ವಿಭಾಗದ ಜಿಲ್ಲೆಗಳ ಕೃಷಿ ಅಧಿಕಾರಿಗಳು ಪ್ರಗತಿ ಪರಿಶೀಲನಾ ಸಭೆಯಲ್ಲಿ ಉಪಸ್ಥಿತರಿದ್ದರು.

ಜು.7 ರಂದು ನೇರ ಸಂದರ್ಶನ

ಮೈಸೂರು,ಜು.4– ಜಿಲ್ಲಾ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣಾಧಿಕಾರಿಗಳ ಕಚೇರಿಯ ವತಿಯಿಂದ ಗುತ್ತಿಗೆ ಆಧಾರದ ಮೇಲೆ ಕೀಟ ಸಂಗ್ರಹಕಾರರ ಹುದ್ದೆಗೆ ನೇಮಕ ಮಾಡಿ ಕೊಳ್ಳಲು ನೇರ ಸಂದರ್ಶನವನ್ನು ಜುಲೈ 7 ರಂದು ನಿಗದಿಪಡಿಸಲಾಗಿದೆ. ಒಂದು ವೇಳೆ ಜು.7 ರಂದು ಸರ್ಕಾರಿ ರಜೆ ಘೋಷಣೆಯಾ ದಲ್ಲಿ ಜು.8 ರಂದು ನೇರ ಸಂದರ್ಶನ ನಡೆಸಲಾಗುವುದೆಂದು ಮೈಸೂರು ಜಿಲ್ಲೆಯ ಜಿಲ್ಲಾ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಗಮನ ಸೆಳೆದ ವೈದ್ಯರಿಗೆ ನಮನ; ಸಂಗೀತ ನೃತ್ಯ ಸಮ್ಮಿಲನ ಕಾರ್ಯಕ್ರಮ

13 ಶಾಲಾ ಮಕ್ಕಳಿಗೆ ಬ್ಯಾಗ್, ಪುಸ್ತಕ; 11 ವಿದ್ಯಾರ್ಥಿಗಳಿಗೆ ಶುಲ್ಕ ವಿತರಣೆ

ಮೈಸೂರು, ಜು.4– ಸಾಫ್ಟ್‌ವೇರ್ ಉದ್ಯೋಗಿಗಳು, ವೈದ್ಯರು, ಸರ್ಕಾರಿ ನೌಕರರು ಸೇರಿದಂತೆ ವಿವಿಧ ವರ್ಗದವರು ಸೇರಿ ರಚಿಸಿಕೊಂಡಿರುವ ಮೈಸೂರು ರಿದಮ್ಸ್ ತಂಡವು ನಗರದ ಜೆ.ಎಲ್.ಬಿ ರಸ್ತೆ ಬಳಿಯ ನಾದಬ್ರಹ್ಮ ಸಂಗೀತ ಸಭಾದಲ್ಲಿ ವೈದ್ಯರ ದಿನಾಚರಣೆ ಅಂಗವಾಗಿ ವೈದ್ಯರಿಗೆ ನಮನ ಸಂಗೀತ ನೃತ್ಯಗಳ ಸಮ್ಮಿಲನ ಕಾರ್ಯಕ್ರಮವನ್ನು ಶುಕ್ರವಾರ ಏರ್ಪಡಿಸಿತ್ತು.



ಮೈಸೂರಿನ ನಾದಬ್ರಹ್ಮ ಸಭಾಂಗಣದಲ್ಲಿ ಶುಕ್ರವಾರ ನಡೆದ ವೈದ್ಯರಿಗೆ ನಮನ–ಸಂಗೀತ ನೃತ್ಯ ಸಮ್ಮಿಲನ ಕಾರ್ಯಕ್ರಮದಲ್ಲಿ ಗಣ್ಯರೊಂದಿಗೆ ಗಾಯಕರು.

ಕಾರ್ಯಕ್ರಮದಲ್ಲಿ ಗಾಯಕರಾದ ಎಸ್. ಅಮರ್, ಡಾ.ಎಲ್. ಸುಮಾ, ನಾಗೇಂದ್ರ, ಅಶ್ವಿನಿ ಅತ್ರಿ, ಸಂತೋಷ್ ನಾಯರ್, ಜೆ.ಪಿ. ಚೇತನ್, ಜಾಯ್ಸ್ ವೈಶಾಖ್ ಡಾ.ಪ್ರಕಾಶ್, ಡಾ. ಪೂರ್ಣಿಮಾ. ಸಹನಾ ಪೈ, ಉಪಾಸನಾ, ರಾಘು ಮೊದಲಾದವರು ಕನ್ನಡ, ತಮಿಳು, ತೆಲುಗು, ಮಲಯಾಳಂ ಮತ್ತು ಹಿಂದಿ ಭಾಷೆಯ 35 ಹಾಡುಗಳನ್ನು ಪ್ರಸ್ತುತಪಡಿಸಿದರು. ಅನಿತಾ ಸಾ.ರಾ. ಮಹೇಶ್ ಕೂಡ ಹಾಡಿದರು.

ಡಾ.ರಾಜ್‌ಕುಮಾರ್, ವಿಷ್ಣುವರ್ಧನ್, ಅಂಬರೀಶ್, ಅನಂತನಾಗ್, ಶಂಕರನಾಗ್, ವಿ.ರವಿಚಂದ್ರನ್, ಶಿವರಾಜ್ ಕುಮಾರ್, ಪುನೀತ್ ರಾಜ್‌ಕುಮಾರ್, ದರ್ಶನ್, ಸುದೀಪ್, ಉಪೇಂದ್ರ, ಯಶ್ ಅಭಿನಯದ ಚಿತ್ರಗಳ ಗೀತೆಗಳನ್ನು ಹಾಡಿದರು. ವಂದನ ಎಸ್.ಭಂಡಾರಿ, ಎನ್.ಪವಿತ್ರಾ, ಸಂಜನ ಡಿ.ಮಠ್, ಗೊಲ್ಲ ಸಂಧ್ಯಾ, ಜಿ.ಎ. ಶಿಲ್ಪಾ, ಕೆ.ವಿ.ಹರ್ಷಿತಾ, ಎಸ್.ಮಿಲನ ನೃತ್ಯ ಪ್ರದರ್ಶಿಸಿದರು.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್, ಕರ್ನಾಟಕ ಸುಗಮ ಸಂಗೀತ ಪರಿಷತ್ ಜಿಲ್ಲಾಧ್ಯಕ್ಷ ನಾಗರಾಜ ವಿ.ಬೈರಿ, ಗಾಯಕರಾದ ಸ್ಟ್ಯಾನ್ಲಿ ಪಾರ್ಕರ್, ಅನಿತಾ ಸಾ.ರಾ. ಮಹೇಶ್, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನ ಕುಮಾರ್ ಮುಖ್ಯಅತಿಥಿಗಳಾಗಿದ್ದರು.

ಪುಟ್ಟಸ್ವಾಮಿ, ವಿಜಯಲಕ್ಷ್ಮಿ, ಜೆ.ಪಿ. ಚೇತನ್, ಕಾರ್ಯಕ್ರಮದ ಸಂಚಾಲಕ ಪ್ರವೀಣ್ ಫಾಡ್ಕೆ ಇದ್ದರು. 13 ಸರ್ಕಾರಿ ಶಾಲಾ ಮಕ್ಕಳಿಗೆ ಬ್ಯಾಗ್ ಹಾಗೂ ಪುಸ್ತಕಗಳನ್ನು ವಿತರಿಸಲಾಯಿತು. ಸವಿನೆನಪು ಫೌಂಡೇಷನ್ ವತಿಯಿಂದ ಆರ್ಥಿಕವಾಗಿ ಹಿಂದುಳಿದ 11 ಮಕ್ಕಳಿಗೆ ಒಂದು ವರ್ಷದ ಶಾಲಾ ಶುಲ್ಕವನ್ನು ನೀಡಲಾಯಿತು.

ಶ್ರೀ ಚಾಮುಂಡೇಶ್ವರಿ ಪೂಜೆ



ಆಷಾಢ ಮಾಸದ ಎರಡನೇ ಶುಕ್ರವಾರದಂದು ಮೈಸೂರಿನ ಕುವೆಂಪುನಗರ ಕೆ–ಬ್ಲಾಕ್‌ನಲ್ಲಿ ಶ್ರೀ ಚಾಮುಂಡೇಶ್ವರಿ ಪೂಜಾ ಕಾರ್ಯಕ್ರಮದೊಂದಿಗೆ ಪ್ರಸಾದ ವಿತರಣೆ ಮಾಡಲಾಯಿತು. ವಿಕ್ರಾಂತ್ ಪಿ ದೇವೇಗೌಡ, ಬಸವರಾಜಣ್ಣ (ಜೋಗಪ್ಪ), ಕೆಂಪಣ್ಣ, ಬಿಜೆಪಿ ನಗರ ಯುವ ಮೋರ್ಚಾ ಅಧ್ಯಕ್ಷ ರಾಕೇಶ್ ಗೌಡ, ಗಡ್ಡ ರಾಜಣ್ಣ, ಸೊಸೈಟಿ ರಾಜು, ಮೋಹನ್ ಗೌಡ, ಮಣಿ ಬೆಳವಾಡಿ, ವೆಂಕಟೇಶ್ ದಾಸ್, ಸುರೇಶ, ಅನಿಲ್, ಪಂಪಾ, ದಿಲೀಪ್, ವಿನೋದ್, ವಾಸು, ರವಿ ಸಾತಗಳ್ಳಿ, ಮಹೇಶ್, ಕಿರಣ್, ಗಣಿ, ಪ್ರದೀಪ್(ದೇವು), ಮನೋಜ್, ಶ್ರೇಯಸ್, ಸಚಿನ್, ಗುರು, ದಯಾನಂದ್, ಪ್ರದೀಪ್ ಮತ್ತಿತರರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಮನೆ ಬೀಗ ಮುರಿದು ಚಿನ್ನಾಭರಣ, ನಗದು ದೋಚಿದ ಖದೀಮರು

ಮೈಸೂರು, ಜು.4– ಬೀಗ ಮುರಿದು ಮನೆಯಲ್ಲಿದ್ದ ಚಿನ್ನಾಭರಣ ಹಾಗೂ ನಗದು ದೋಚಿರುವ ಘಟನೆ ತಾಲೂಕಿನ ಕಾಮನಕೆರೆಹುಂಡಿ ಗ್ರಾಮದಲ್ಲಿ ನಡೆದಿದೆ.

ಇಲ್ಲಿನ ನಿವಾಸಿ ಜ್ಯೋತಿಷಿ ಎಸ್.ಅಭಿಷೇಕ್ ಅವರ ಮನೆಗೆ ನುಗ್ಗಿರುವ ಖದೀಮರು, 2 ಲಕ್ಷ ನಗದು ಹಾಗೂ 1.75 ಲಕ್ಷ ಮೌಲ್ಯದ ಚಿನ್ನಾಭರಣ ಹಾಗೂ ಬೆಳ್ಳಿ ಪದಾರ್ಥಗಳನ್ನು ದೋಚಿದ್ದಾರೆ. ಅಭಿಷೇಕ್ ಹಾಗೂ ಇವರ ತಾಯಿ ಬುಧವಾರ ಸಂಜೆ 5 ಗಂಟೆ ವೇಳೆಗೆ ಮನೆಗೆ ಬೀಗ ಹಾಕಿಕೊಂಡು ಶ್ರೀರಾಂಪುರದ ಶನಿದೇವರ ದೇವಸ್ಥಾನಕ್ಕೆ ಹೋಗಿದ್ದರು. ಅಂದು ರಾತ್ರಿ ಇಬ್ಬರೂ ಶ್ರೀರಾಂಪುರದಲ್ಲಿರುವ ಅಭಿಷೇಕ್ ಪತ್ನಿ ಮನೆಯಲ್ಲಿ ತಂಗಿದ್ದರು. ಮರುದಿನ ಬೆಳಗ್ಗೆ 7.30ಕ್ಕೆ ಕಾಮನಕೆರೆಹುಂಡಿ ಮನೆಗೆ ವಾಪಸ್ಸಾದಾಗ ಮುಂಬಾಗಿಲು ತೆರೆದಿತ್ತು. ಬೀಗವನ್ನು ಯಾವುದೋ ಆಯುಧದಿಂದ ಮೀಟಿದಂತೆ ಕಾಣಿಸಿತು. ಗಾಬರಿಯಿಂದ ಒಳಹೋಗಿ ನೋಡಿದಾಗ ಕೊಠಡಿಯಲ್ಲಿದ್ದ ಬೀರು ತೆರೆದಿತ್ತು. ಅದರಲ್ಲಿಟ್ಟಿದ್ದ 2 ಲಕ್ಷ ನಗದು, ಬೆಳ್ಳಿ ಪದಾರ್ಥಗಳು ಹಾಗೂ ಚಿನ್ನಾಭರಣ ಕಳುವಾಗಿದ್ದವು. ಈ ಸಂಬಂಧ ಮೈಸೂರು ದಕ್ಷಿಣ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು, ಕಳ್ಳರ ಪತ್ತೆಗೆ ಕ್ರಮ ಕೈಗೊಂಡಿದ್ದಾರೆ.

ಪ್ರೀತಿಸಲು ನಿರಾಕರಿಸಿದ ಮಹಿಳೆಗೆ ಇರಿದ ಯುವಕ

ಅವನೇ ಖಾಸಗಿ ಆಸ್ಪತ್ರೆಗೆ ಸೇರಿಸಿ ಪರಾರಿ

ಮೈಸೂರು, ಜು.4– ಪ್ರೀತಿಸಲು ನಿರಾಕರಿಸಿದ ಮಹಿಳೆಗೆ ಯುವಕನೊಬ್ಬ ಚಾಕುವಿನಿಂದ ಇರಿದು ಪರಾರಿಯಾಗಿರುವ ಘಟನೆ ಮೈಸೂರಿನಲ್ಲಿ ಶುಕ್ರವಾರ ಹಾಡಹಗಲೇ ನಡೆದಿದೆ.

ಯುವಕನಿಂದ ಹಲ್ಲೆಗೊಳಗಾಗಿರುವ ಮಹಿಳೆಯನ್ನು ಪಾಂಡವಪುರ ಮೂಲದ ಪೂರ್ಣಿಮಾ(36) ಎಂದು ಗುರುತಿಸಲಾಗಿದ್ದು, ಅಭಿಷೇಕ್ ಎಂಬ ಯುವಕ ಈ ಕೃತ್ಯವೆಸಗಿದ್ದಾನೆಂದು ಹೇಳಲಾಗಿದೆ.

ಕೃಷ್ಣಮೂರ್ತಿಪುರಂನಲ್ಲಿ ಅಂಬೇಡ್ಕರ್ ಪಾರ್ಕ್ ಮುಂಭಾಗ ಅಭಿಷೇಕ್ ಹಾಗೂ ಪೂರ್ಣಿಮಾ ಒಟ್ಟಿಗೆ ಕುಳಿತು ಮಾತನಾಡುತ್ತಿದ್ದರು. ಈ ವೇಳೆ ಅಭಿಷೇಕ್ ತನ್ನನ್ನು ಪ್ರೀತಿಸುವಂತೆ ಪೂರ್ಣಿಮಾಳನ್ನು ಒತ್ತಾಯಿಸಿದ್ದಾನೆ. ಇದಕ್ಕೆ ಪೂರ್ಣಿಮಾ ನಿರಾಕರಿಸಿದ್ದರಿಂದ ಸಿಟ್ಟಿಗೆದ್ದ ಅಭಿಷೇಕ್, ಚಾಕುವಿನಿಂದ ಇರಿದಿದ್ದಾನೆ. ಈ ವೇಳೆ ಆಕೆಯ ತಲೆ ಕುತ್ತಿಗೆ ಹಾಗೂ ಹೊಟ್ಟೆಗೆ ಗಂಭೀರ ಗಾಯಗಳಾಗಿವೆ. ನಂತರ ಆ ಯುವಕನೇ ಆಕೆಯನ್ನು ಆಟೋ ದಲ್ಲಿ ಕರೆದುಕೊಂಡು ಹೋಗಿ, ಖಾಸಗಿ ಆಸ್ಪತ್ರೆಗೆ ದಾಖಲಿಸಿ, ಪರಾರಿಯಾಗಿದ್ದಾನೆ ವೃತ್ತಿಯಲ್ಲಿ ಪೂರ್ಣಿಮಾ ಶಿಕ್ಷಕಿ ಎನ್ನಲಾಗಿದ್ದು, ಅವರು ಮೈಸೂರಿನಲ್ಲಿ ವಾಸವಿದ್ದರೋ ಅಥವಾ ಇಬ್ಬರೂ ಒಟ್ಟಿಗೆ ಇಲ್ಲಿಗೆ ಬಂದಿದ್ದರೋ ಎನ್ನುವುದು ತಿಳಿದಿಲ್ಲ. ಕೃತ್ಯ ನಡೆದ ಸ್ಥಳದಲ್ಲಿ ಚಾಕು ಜೊತೆಗೆ ಕುಡುಗೋಲು ಕೂಡ ಪತ್ತೆಯಾಗಿದೆ. ಲಕ್ಷ್ಮೀಪುರಂ ಠಾಣೆ ಪೊಲೀಸರು, ಸ್ಥಳ ಪರಿಶೀಲನೆ ನಡೆಸಿ ಪ್ರಕರಣ ದಾಖಲಿಸಿಕೊಂಡಿದ್ದಾರೆ. ತಲೆಮರೆಸಿಕೊಂಡಿರುವ ಯುವಕನ ಬಂಧಿಸಿ, ವಿಚಾರಣೆ ನಡೆಸಿದ ನಂತರ ಹೆಚ್ಚಿನ ಮಾಹಿತಿ ಲಭ್ಯವಾಗಲಿದೆ.

ಅಕ್ರಮ ಗಣಿಗಾರಿಕೆ: ಎಸ್‌ಐಟಿ ಅವಧಿ ವಿಸ್ತರಿಸಿ ಆದೇಶ


ಬೆಂಗಳೂರು, ಜು.4– ಅಕ್ರಮ ಗಣಿಗಾರಿಕೆಯ ತನಿಖೆಗೆ ರಚಿಸಲಾಗಿದ್ದ ಲೋಕಾಯುಕ್ತ ಪೊಲೀಸ್‌ನ ವಿಶೇಷ ತನಿಖಾ ತಂಡದ (ಎಸ್‌ಐಟಿ) ಅವಧಿಯನ್ನು 2026ರ ಜುಲೈ 2ರವರೆಗೆ ವಿಸ್ತರಿಸಿ ರಾಜ್ಯ ಸರ್ಕಾರ ಆದೇಶಿಸಿದೆ. ಗಣಿಗಾರಿಕೆಯಲ್ಲಿನ ಅಕ್ರಮಗಳ ತನಿಖೆಗೆ 2013ರಲ್ಲಿ ಎಸ್‌ಐಟಿ ರಚಿಸಲಾಗಿತ್ತು. ತನಿಖೆಗೆ ಹೆಚ್ಚಿನ ಕಾಲಾವಕಾಶ ಅಗತ್ಯ ಇದ್ದುದ್ದರಿಂದ ಎಸ್‌ಐಟಿಯ ಅವಧಿಯನ್ನು ಹಲವು ಬಾರಿ ವಿಸ್ತರಿಸಲಾಗಿತ್ತು.

ಇದೇ ಜುಲೈ 1ಕ್ಕೆ ಎಸ್‌ಐಟಿಯ ಅವಧಿ ಪೂರ್ಣಗೊಳ್ಳಬೇಕಿತ್ತು. ಆದರೆ ತನಿಖೆಗೆ ಮತ್ತಷ್ಟು ಕಾಲಾವಕಾಶ ಬೇಕಿದ್ದು, ಇನ್ನೂ ಒಂದು ವರ್ಷ ವಿಸ್ತರಿಸಬೇಕು ಎಂದು ಲೋಕಾಯುಕ್ತ ಸಂಸ್ಥೆಯು ರಾಜ್ಯ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಿತ್ತು.

ದೇಶ - ವಿದೇಶ

ಅಮರನಾಥ ಯಾತ್ರೆಗೆ ಜಮ್ಮುವಿನಿಂದ ಹೊರಟ 6,400 ಯಾತ್ರಿಕರು

ಜಮ್ಮು: ವಾರ್ಷಿಕ ಅಮರನಾಥ ಯಾತ್ರೆ ಹಿನ್ನೆಲೆಯಲ್ಲಿ 6,400ಕ್ಕೂ ಹೆಚ್ಚು ಯಾತ್ರಾರ್ಥಿಗಳನ್ನೊಳಗೊಂಡ ಮೂರನೇ ಬ್ಯಾಚ್ ಶುಕ್ರವಾರ ಎರಡು ಪ್ರತ್ಯೇಕ ಬೆಂಗಾವಲುಗಳಲ್ಲಿ ಜಮ್ಮುವಿನ ಭಗವತಿ ನಗರ ಬೇಸ್ ಕ್ಯಾಂಪ್‌ನಿಂದ ಹೊರಟಿತು ಎಂದು ಅಧಿಕಾರಿಗಳು ತಿಳಿಸಿದ್ದಾರೆ.



38 ದಿನಗಳ ವಾರ್ಷಿಕ ಯಾತ್ರೆಯು ಗುರುವಾರ ಆರಂಭವಾದಾಗಿನಿಂದ ಅನಂತ್‌ನಾಗ್ ಜಿಲ್ಲೆಯ ಪಹಲ್ಗಾಮ್ ಮತ್ತು ಗಂಡರ್‌ಬಾಲ್ ಜಿಲ್ಲೆಯ ಬಾಲ್ಟಾಲ್‌ನಿಂದ ಎರಡು ಸಾಂಪ್ರದಾಯಿಕ ಮಾರ್ಗಗಳಲ್ಲಿ ತೆರಳಿದ ಸುಮಾರು 14,000 ಯಾತ್ರಿಕರು, 3,880 ಮೀಟರ್ ಎತ್ತರದ ಗುಹಾ ದೇಗುಲದಲ್ಲಿ ದೇವರ ದರ್ಶನ ಮಾಡಿದ್ದಾರೆ ಎಂದು ಅವರು ಮಾಹಿತಿ ನೀಡಿದ್ದಾರೆ.

4,723 ಪುರುಷರು, 1,071 ಮಹಿಳೆಯರು, 37 ಮಕ್ಕಳು ಮತ್ತು 580 ಸಾಧುಗಳು ಸೇರಿದಂತೆ 6,411 ಯಾತ್ರಿಕರನ್ನೊಳಗೊಂಡ ಮೂರನೇ ಬ್ಯಾಚ್ 291 ವಾಹನಗಳಲ್ಲಿ ಹೊರಟಿದ್ದಾರೆ. ಈ ತಂಡವು ಭಗವತಿ ನಗರ ಯಾತ್ರಿ ನಿವಾಸದಿಂದ ಎರಡು ಗುಂಪುಗಳಾಗಿ ಬಲ್ಟಾಲ್ ಮತ್ತು ಪಹಲ್ಗಾಮ್‌ಗೆ ಬೆಳಿಗ್ಗೆ 3.15 ಮತ್ತು 4 ಗಂಟೆಗೆ ಸಿಆರ್‌ ಪಿಎಫ್ ಬೆಂಗಾವಲು ಪಡೆಯೊಂದಿಗೆ ತೆರಳಿತು.

ಲಂಡನ್‌ನ ಪಾರ್ಟಿಯಲ್ಲಿ ಹಾಡಿ ಸಂಭ್ರಮಿಸಿದ ಲಲಿತ್ ಮೋದಿ, ವಿಜಯ್ ಮಲ್ಯ

ಲಂಡನ್: ಲಲಿತ್ ಮೋದಿ ಮತ್ತು ಅವರ ಆತ್ಮೀಯ ಸ್ನೇಹಿತ ವಿಜಯ್ ಮಲ್ಯ ಲಂಡನ್‌ನಲ್ಲಿ ನಡೆದ ಅದ್ಧೂರಿ ಪಾರ್ಟಿಯಲ್ಲಿ ಮೋಜು ಮಾಡುತ್ತಿರುವ ವಿಡಿಯೋ ವೈರಲ್ ಆಗಿದೆ. ಇಬ್ಬರೂ ಪಾರ್ಟಿಯನ್ನು ಆನಂದಿಸುತ್ತಿದ್ದು ಹಾಡಿ ಸಂಭ್ರಮಿಸಿದ್ದಾರೆ. ಇಬ್ಬರೂ ಮೈಕ್ ಹಿಡಿದು ಹಾಡುಗಳನ್ನು ಹಾಡುತ್ತಿದ್ದಾರೆ. ಲಲಿತ್ ಮೋದಿ ಇನ್‌ಸ್ಟಾಗ್ರಾಮ್‌ನಲ್ಲಿ ಪೋಸ್ಟ್ ಮಾಡಿದ ವಿಡಿಯೋದಲ್ಲಿ, ಇಬ್ಬರೂ ಫ್ರಾಂಕ್ ಸಿನಾತ್ರಾ ಅವರ ಪ್ರಸಿದ್ಧ ಹಾಡು 'ಮೈ ವೇ' ಅನ್ನು ಹಾಡುತ್ತಿರುವುದು ಕಂಡುಬರುತ್ತದೆ. ಸುತ್ತಲೂ ಅತಿಥಿಗಳ ಕೂಟವೇ ಸೇರಿತ್ತು. ಲಲಿತ್ ಮೋದಿ ಪ್ರಕಾರ ಅದು ಅವರ ವಾರ್ಷಿಕ ಬೇಸಿಗೆ ಪಾರ್ಟಿಯಾಗಿತ್ತು.

ಲಲಿತ್ ಮೋದಿ ವಿಡಿಯೋ ಪೋಸ್ಟ್ ಮಾಡಿ, 310 ಸ್ನೇಹಿತರು ಮತ್ತು ಕುಟುಂಬದೊಂದಿಗೆ ಅದ್ಭುತ ರಾತ್ರಿ ಕಳೆದೆ. ಈ ಕಾರ್ಯಕ್ರಮಕ್ಕಾಗಿ ಅನೇಕ ಜನರು ವಿಶೇಷವಾಗಿ ಪ್ರಯಾಣಿಸಿದರು. ಈ ಸಂಜೆ ಭಾಗವಹಿಸಿದ ಎಲ್ಲರಿಗೂ ಧನ್ಯವಾದಗಳು ಮತ್ತು ಇದನ್ನು ನನಗೆ ಅತ್ಯಂತ ವಿಶೇಷ ರಾತ್ರಿಗಳಲ್ಲಿ ಒಂದನ್ನಾಗಿ ಮಾಡಿದೆ. ಈ ವೀಡಿಯೊ ವೈರಲ್ ಆಗುವುದಿಲ್ಲ ಎಂದು ಭಾವಿಸುತ್ತೇನೆ ಎಂದು ಬರೆದುಕೊಂಡಿದ್ದಾರೆ.

ಇನ್‌ಸ್ಟಾಗ್ರಾಮ್ ಪೋಸ್ಟ್‌ನಲ್ಲಿ ಕರೋಕೆ ಸೆಟಪ್‌ಗಾಗಿ ಸಂಗೀತಗಾರ ಕಾರ್ಲ್ಟನ್ ಬ್ರಗಾಂಜಾ ಅವರಿಗೆ ಧನ್ಯವಾದ ಹೇಳಲಾಗಿದ್ದು, ಯೂನಿವರ್ಸ್ ಬಾಸ್ ಎಂದು ಖ್ಯಾತರಾಗಿರುವ ಕ್ರಿಸ್ ಗೇಯ್ಲ್ ಸಹ ಪಾರ್ಟಿಯಲ್ಲಿ ಭಾಗವಹಿಸಿದ್ದರು.

ಒನ್ ಬಿಗ್ ಬ್ಯೂಟಿಫುಲ್ ಬಿಲ್ ಮಸೂದೆಗೆ ಅಮೆರಿಕಾ ಕಾಂಗ್ರೆಸ್ ಅಸ್ತು

ವಾಷಿಂಗ್ಟನ್: ಅಮೆರಿಕಾ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಮಹತ್ವಾಕಾಂಕ್ಷಿ ಪ್ರಮುಖ ತೆರಿಗೆ ಮಸೂದೆ (ಒನ್ ಬಿಗ್ ಬ್ಯೂಟಿಫುಲ್ ಬಿಲ್) ಯುಎಸ್ ಕಾಂಗ್ರೆಸ್‌ನಲ್ಲಿ ಅಂಗೀಕಾರಗೊಂಡಿದೆ. ಈ ಮೂಲಕ ಟ್ರಂಪ್ ಅವರು ಗೆಲುವಿನ ನಗೆ ಬೀರಿದ್ದಾರೆ. ಕಾಂಗ್ರೆಸ್ ಅತ್ಯಲ್ಪ ಅಂತರದಿಂದ ಪ್ರಮುಖ ತೆರಿಗೆ ಮಸೂದೆಯನ್ನು ಪಾಸ್ ಮಾಡಿದೆಯಾದರೂ, ಈ ಬೆಳವಣಿಗೆ ಡೊನಾಲ್ಡ್ ಟ್ರಂಪ್ ಅವರಿಗೆ ಪ್ರಮುಖ ರಾಜಕೀಯ ಗೆಲವು ಸಿಕ್ಕಂತಾಗಿದೆ.

ಈ ಬೆಳವಣಿಗೆ ಡೊನಾಲ್ಡ್ ಟ್ರಂಪ್ ಅವರ 2ನೇ ಅವಧಿಯ ಆಮೂಲಾಗ್ರ ಕಾರ್ಯಸೂಚಿಯನ್ನು ಬಲಪಡಿಸಿದೆ. ಅಲ್ಲದೆ, ಟ್ರಂಪ್ ಆಡಳಿತದ ವಲಸೆ ವಿರೋಧಿ ಅಭಿಯಾನಕ್ಕೆ ಹೆಚ್ಚಿನ ಹಣದ ಖಾತರಿ ಒದಗಿಸಿದೆ. ಒನ್ ಬಿಗ್ ಬ್ಯೂಟಿಫುಲ್ ಬಿಲ್‌ಗೆ ಅಮೆರಿಕಾ ಕಾಂಗ್ರೆಸ್ ಅನುಮೋದನೆ ನೀಡಿರುವ ಕುರಿತು ಪ್ರತಿಕ್ರಿಯೆ ನೀಡಿರುವ ಟ್ರಂಪ್ ಅವರು, ಇದೂವರೆಗೆ ಸಹಿ ಮಾಡಲಾದ ಮಸೂದೆಗಳ ಪೈಕಿ ಇದು ಅತಿದೊಡ್ಡ ಮಸೂದೆಯಾಗಿದೆ ಎಂದು ಹೇಳಿದ್ದಾರೆ.

ಈ ಮಸೂದೆ ಅಮೆರಿಕ ದೇಶದ ಇತಿಹಾಸದಲ್ಲೇ ಅತ್ಯಂತ ಪರಿಣಾಮಕಾರಿ ಮಸೂದೆಗಳಲ್ಲಿ ಒಂದಾಗಿದೆ. ಅಮೆರಿಕವು ವಿಶ್ವದ ಅತ್ಯಂತ ಶಕ್ತಿಶಾಲಿ ರಾಷ್ಟ್ರವಾಗಿದ್ದು, ನಾವು ಇದನ್ನು ಮತ್ತಷ್ಟು ಶಕ್ತಿಶಾಲಿಯನ್ನಾಗಿ ಮಾಡುತ್ತೇವೆ ಎಂದು ಸಂತಸ ವ್ಯಕ್ತಪಡಿಸಿದ್ದಾರೆ.

ಬಾಂಗ್ಲಾದಲ್ಲಿ ಶಸ್ತ್ರಾಸ್ತ್ರ ಕಾರ್ಖಾನೆ ತೆರೆಯಲು ಟರ್ಕಿ ಸಿದ್ಧತೆ

ಢಾಕಾ: ಭಾರತದ ಹೊಸ ಶತ್ರು ಬಾಂಗ್ಲಾದೇಶದೊಂದಿಗೆ ಕಾರ್ಯತಂತ್ರದ ರಕ್ಷಣಾ ಪಾಲುದಾರಿಕೆಗೆ ಪ್ರವೇಶಿಸಲು ಟರ್ಕಿ ಸಿದ್ಧತೆ ನಡೆಸುತ್ತಿದೆ. ಇತ್ತೀಚಿನ ವರದಿಗಳ ಪ್ರಕಾರ, ಟರ್ಕಿಯ ಉನ್ನತ ರಕ್ಷಣಾ ಉದ್ಯಮ ಅಧಿಕಾರಿಯೊಬ್ಬರು ಮುಂದಿನ ವಾರ ಬಾಂಗ್ಲಾದೇಶಕ್ಕೆ ಭೇಟಿ ನೀಡಲಿದ್ದಾರೆ. ಈ ಸಮಯದಲ್ಲಿ ಎರಡೂ ದೇಶಗಳು ರಕ್ಷಣಾ–ಉದ್ಯಮ ಪಾಲುದಾರಿಕೆಯನ್ನು ವಿಸ್ತರಿಸುವ ಕುರಿತು ಪ್ರಮುಖ ಮಾತುಕತೆಗಳನ್ನು ನಡೆಸಬಹುದು. ಟರ್ಕಿಯ ರಕ್ಷಣಾ ಕೈಗಾರಿಕಾ ಸಂಸ್ಥೆ (ಎಸ್‌ಎಸ್‌ಬಿ) ಮುಖ್ಯಸ್ಥ ಹಲುಕ್ ಗೋರ್ಗುನ್ ಜುಲೈ 8ರಂದು ಒಂದು ದಿನದ ಭೇಟಿಗಾಗಿ ಢಾಕಾಗೆ ಬರಲಿದ್ದಾರೆ ಎಂದು ಹೇಳಿದ್ದಾರೆ. ಈ ಸಮಯದಲ್ಲಿ, ಅವರು ಮಧ್ಯಂತರ ಸರ್ಕಾರದ ಮುಖ್ಯ ಸಲಹೆಗಾರ ಮುಹಮ್ಮದ್ ಯೂನಸ್ ಅವರನ್ನು ಭೇಟಿಯಾಗಲಿದ್ದಾರೆ. ಇದೇ ವೇಳೆ ಗೋರ್ಗುನ್ ಬಾಂಗ್ಲಾದೇಶ ಸೇನಾ ಮುಖ್ಯಸ್ಥ ಜನರಲ್ ವಕಾರ್–ಉಜ್–ಜಮಾನ್, ನೌಕಾಪಡೆಯ ಮುಖ್ಯಸ್ಥ ಅಡ್ಮಿರಲ್ ಎಂ. ನಜ್ಮುಲ್ ಹಸನ್ ಮತ್ತು ವಾಯುಪಡೆಯ ಮುಖ್ಯಸ್ಥ ಮಾರ್ಷಲ್ ಹಸನ್ ಮಹಮೂದ್ ಖಾನ್ ಅವರನ್ನು ಭೇಟಿ ಮಾಡಲಿದ್ದಾರೆ.



ಹಿರಿಯ ಪೊಲೀಸ್ ಅಧಿಕಾರಿಯ ಸಿಬ್ಬಂದಿಗೆ ಲಂಚ ನೀಡಿದ ಪಂಜಾಬ್ ಡಿಎಸ್ಪಿ ಬಂಧನ

ಚಂಡೀಗಢ: ತನ್ನ ವಿರುದ್ಧ ದಾಖಲಾಗಿದ್ದ ದೂರನ್ನು ಮುಚ್ಚಿಹಾಕಲು ಹಿರಿಯ ಪೊಲೀಸ್ ಅಧಿಕಾರಿಯ ಸಿಬ್ಬಂದಿಗೆ ಲಂಚ ನೀಡಲು ಯತ್ನಿಸಿದ ಆರೋಪದ ಮೇಲೆ ಪಂಜಾಬ್ ಪೊಲೀಸರು ತಮ್ಮದೇ ಇಲಾಖೆಯ ಉಪ ಪೊಲೀಸ್ ವರಿಷ್ಠಾಧಿಕಾರಿ(ಡಿಎಸ್‌ಪಿ) ಒಬ್ಬರನ್ನು ಬಂಧಿಸಿದ್ದಾರೆ.

ಬಂಧಿತ ಫರೀದ್‌ಕೋಟ್‌ನ ಮಹಿಳೆಯರ ವಿರುದ್ಧದ ಅಪರಾಧ ವಿಭಾಗದ ಡಿಎಸ್‌ಪಿ ರಾಜನ್‌ಪಾಲ್ ಅವರು ಫರೀದ್ ಕೋಟ್‌ನ ಹಿರಿಯ ಪೊಲೀಸ್ ವರಿಷ್ಠಾಧಿಕಾರಿ(ಎಸ್‌ಎಸ್‌ಪಿ) ಡಾ. ಪ್ರಜ್ಞಾ ಜೈನ್ ಅವರ ರೀಡರ್ ಆದ ಸಹಾಯಕ ಸಬ್– ಇನ್ಸ್‌ಪೆಕ್ಟರ್ ಜಸ್ವಿಂದರ್ ಸಿಂಗ್ ಅವರಿಗೆ 1 ಲಕ್ಷ ರೂ. ಲಂಚ ನೀಡುತ್ತಿದ್ದಾಗ ಸಿಕ್ಕಿಬಿದ್ದಿದ್ದು, ಅವರ ವಿರುದ್ಧ ಭ್ರಷ್ಟಾಚಾರ ತಡೆ ಕಾಯ್ದೆಯಡಿ ಪ್ರಕರಣ ದಾಖಲಿಸಲಾಗಿದೆ ಎಂದು ಮೂಲಗಳು ತಿಳಿಸಿವೆ ರಾಜನ್ ಪಾಲ್ ವಿರುದ್ಧ ಪಕ್ಕಾ ಗ್ರಾಮದ ಕಿರಣ್‌ಜಿತ್ ಕೌರ್ ಎಂಬುವವರು ದೂರು ನೀಡಿದ್ದು, ವೈವಾಹಿಕ ವಿವಾದಕ್ಕೆ ಸಂಬಂಧಿಸಿದ ತಮ್ಮ ಪ್ರಕರಣದ ಬಗ್ಗೆ ಕ್ರಮ ಕೈಗೊಳ್ಳಲು ಡಿಎಸ್‌ಪಿ 1 ಲಕ್ಷ ರೂ.ಗೆ ಬೇಡಿಕೆ ಇಟ್ಟಿದ್ದು ಎಂದು ಆಕೆಯ ಸಹೋದರ ಕರ್ಮತೇಜ್ ಸಿಂಗ್ ಆರೋಪಿಸಿದ್ದಾರೆ. ಹಣ ಪಡೆದಿದ್ದರೂ ಅಧಿಕಾರಿ ಯಾವುದೇ ಕ್ರಮ ಕೈಗೊಳ್ಳಲು ವಿಫಲರಾಗಿದ್ದಾರೆ ಎಂದು ಆರೋಪಿಸಿ ಕುಟುಂಬವು ಎಸ್‌ಎಸ್‌ಪಿ ಡಾ. ಪ್ರಜ್ಞಾ ಜೈನ್ ಅವರಿಗೆ ದೂರು ನೀಡಿತ್ತು. ಆರೋಪಿ ಅಧಿಕಾರಿ ತನ್ನ ದುಷ್ಕೃತ್ಯವನ್ನು ಮುಚ್ಚಿಹಾಕಲು ಮೇಲಾಧಿಕಾರಿ ಸಿಬ್ಬಂದಿಗೆ ಲಂಚ ನೀಡಲು ಪ್ರಯತ್ನಿಸಿದ್ದಾರೆ ಎಂದು ಆರೋಪಿಸಲಾಗಿದೆ

ತಾತ್ಕಾಲಿಕ ಶೆಡ್‌ಗಳ ತೆರವು ವಿರೋಧಿಸಿ ಪ್ರತಿಭಟನೆ

ವಿರಾಜಪೇಟೆ, ಜು.4–ತಾಲೂಕಿನ ಕೆ. ಬೈಗೋಡು ಗ್ರಾಮದ ಪೈಸಾರಿ ಜಾಗದಲ್ಲಿ ತಾತ್ಕಾಲಿಕ ಶೆಡ್ ನಿರ್ಮಿಸಿಕೊಂಡು ನೆಲೆಸಿದ್ದ ಪರಿಶಿಷ್ಟ ಪಂಗಡದವರನ್ನು ತೆರವುಗೊಳಿಸಿದ್ದನ್ನು ಖಂಡಿಸಿ ಪ್ರತಿಭಟನೆ ನಡೆಸಿದರು.

ಗ್ರಾಮದ ಪೈಸಾರಿ ಸರ್ವೆ ನಂ.328/1ಪಿ1ರಲ್ಲಿ ತಾತ್ಕಾಲಿಕ ಶೆಡ್ ನಿರ್ಮಿಸಿಕೊಂಡು ವಾಸವಿದ್ದ ಪರಿಶಿಷ್ಟ ಪಂಗಡದ ನೂರು ಕುಟುಂಬದವರನ್ನು ತೆರವುಗೊಳಿಸಿದ ತಾಲೂಕು ಆಡಳಿತ ಕ್ರಮವನ್ನು ಖಂಡಿಸಿ ಜಿಲ್ಲಾ ದಲಿತ ಸಂಘರ್ಷ ಸಮಿತಿಯ ಸಂಚಾಲಕ ಹೆಚ್.ಆರ್. ಪರಶುರಾಮ್ ನೇತೃತ್ವದಲ್ಲಿ ದೊಡ್ಡಟ್ಟಿ ಚೌಕಿಯಿಂದ ತಹಶೀಲ್ದಾರ್ ಕಚೇರಿವರೆಗೆ ಮೆರವಣಿಗೆಯಲ್ಲಿ ಬಂದು ತಾಲೂಕು ಕಚೇರಿ ಮುಂದೆ ಆಡಳಿತದ ವಿರುದ್ಧ ಧಿಕ್ಕಾರ ಕೂಗಿ ಜಿಲ್ಲಾಧಿಕಾರಿಗಳಿಗೆ ತಹಶೀಲ್ದಾರ್ ಅನಂತ ಶಂಕರ್ ಮೂಲಕ ಮನವಿ ಸಲ್ಲಿಸಿದರು.

ಪ್ರತಿ ಕುಟುಂಬ ಐದು ಸೆಂಟು ನಿವೇಶನ ಒದಗಿಸುವಂತೆ ಸಿವಿಲ್ ನ್ಯಾಯಾಲಯದಲ್ಲಿ ದಾವೆ ಹೂಡಿದ್ದು ವಿಚಾರಣೆ ಇದೇ ಜು.19 ವಿಚಾರಣೆಗೆ ಬರಲಿದೆ. ಜೊತೆಗೆ ಕೇವಿಯೇಟ್ ಸಹ ಇದೆ. ಹೀಗಿರುವಾಗ ನಿನ್ನೆ ಸಂಜೆ ತಹಶೀಲ್ದಾರ್ ನೇತೃತ್ವದ ತಂಡ ಸ್ಥಳಕ್ಕೆ ಬಂದು ಏಕಾಏಕಿ ಶೆಡ್‌ಗಳನ್ನು ತೆರವು ಮಾಡಿ ಜನರನ್ನು ಬೀದಿಪಾಲು ಮಾಡಿದ್ದನ್ನು ಖಂಡನಿಯ 15 ದಿನದೊಳಗೆ ಇದೇ ಜಾಗದಲ್ಲಿ ನೂರು ಕುಟುಂಬಗಳಿಗೆ ನಿವೇಶನ ಮಂಜೂರು ಮಾಡುವಂತೆ ಜಿಲ್ಲಾಧಿಕಾರಿಗಳನ್ನು ಕೋರಲಾಗಿದೆ.

ಆರ್‌ಟಿಸಿಯಲ್ಲಿ ಹಕ್ಕಿ ಬಿಕ್ಕಿ ಮಾಡು ಪೈಸಾರಿ ಎಂದು ನಮೂದಾಗಿದೆ ಮತ್ತು ಪರಿಶಿಷ್ಟ ಜಾತಿ ಮತ್ತು ಪಂಗಡದ ಅಭಿವೃದ್ದಿಗೆ ಮೀಸಲಾಗಿದೆ ಎಂದು ತೋರಿಸಲಾಗಿದೆ. ಇಲ್ಲಿ 23 ಎಕರೆ ಜಾಗವಿದ್ದು ಈ ಜಾಗ ಗೋಮಾಳವೆಂದು ತಹಶೀಲ್ದಾರ್‌ರ ಅಭಿಮತವಾಗಿದೆ. ಆದರೆ ಇಲ್ಲಿ ಕಾಫಿ ತೋಟದ ಮಾಲಿಕರು ಒತ್ತುವರಿ ಮಾಡಿದ್ದಾರೆ. 21 ಮನೆಗೆ ಹಕ್ಕು ಪತ್ರ ನೀಡುವಾಗ. ಗೋಮಾಳ ಜಾಗ ಎಂಬುದು ಇವರ ಗಮನಕ್ಕೆ ಬಂದಿಲ್ಲವೆ. ಪರಿಶಿಷ್ಟ ಪಂಗಡದ ನೂರು ಜನ ತಾತ್ಕಾಲಿಕ ಶೆಡ್ ನಿರ್ಮಿಸಿರುವಾಗ ಬಲವಂತವಾಗಿ ತೆರವುಗೊಳಿಸುವ ಔಚಿತ್ಯವೇನಿತ್ತು ಎಂದು ಪ್ರತಿಭಟನಾಕಾರರು ಮನವಿಯಲ್ಲಿ ಪ್ರಶ್ನಿಸಿ ದಲಿತ ವಿರೋಧಿ ತಹಶೀಲ್ದಾರ್ ಅವರನ್ನು ಕೂಡಲೇ ವರ್ಗಾಯಿಸುವಂತೆ ಆಗ್ರಹಿಸಿದ್ದಾರೆ

ಪೊನ್ನಂಪೇಟೆ ತಾಲೂಕಿನ ಬಾಳೆಲೆಯ ನಿಟ್ಟೂರು ಗ್ರಾಮದ ಸರ್ವೆ ಸಂ.62/17ರಲ್ಲಿ ಪೌತಿ ಪಂಜರಿಯರವರ ಕುರುಮ ಎಂಬುವರ ಹೆಸರಿನಲ್ಲಿ 2.60 ಸೆಂಟ್ ಜಾಗವಿದ್ದು ಅದನ್ನು ಒತ್ತುವರಿ ಮಾಡಿ ಮನೆಯನ್ನು ನಿರ್ಮಿಸಿದ್ದಾರೆ. ಈ ಬಗ್ಗೆ ಕುರುಮರ ಮೊಮ್ಮಗಳಾದ ಬೇಬಿ ಮತ್ತಿತರರು ಪೊನ್ನಂಪೇಟೆ ತಹಶೀಲ್ದಾರ್ ಅವರಿಗೆ ಹದ್ದು ಬಸ್ತು ಸರ್ವೆ ನಡೆಸಿಕೊಡುವಂತೆ ಅರ್ಜಿ ಸಲ್ಲಿಸಿದ್ದರೂ ತಹಶೀಲ್ದಾರ್ ಸ್ಪಂದಿಸುತ್ತಿಲ್ಲ. ಎಂದರು.

ಜಿಲ್ಲಾಧಿಕಾರಿ ನಮ್ಮ ಬೇಡಿಕೆಗಳ ಬಗ್ಗೆ ಕ್ರಮ ಕೈಗೊಳ್ಳದಿದ್ದರೆ ಅರೆ ಬೆತ್ತಲೆಯಾಗಿ ಅವರ ಕಚೇರಿ ಮುಂದೆ ಅನಿರ್ದಿಷ್ಟಾವಧಿ ಆಮರಣಾಂತ ಉಪವಾಸ ರಸ್ತೆ ತಡೆ ಮೊದಲಾದ ಚಳವಳಿ ಹಮ್ಮಿಕೊಳ್ಳುವುದಾಗಿ ಜಿಲ್ಲಾ ಸಂಚಾಲಕ ಪರಶುರಾಮ್ ಎಚ್ಚರಿಕೆ ನೀಡಿದ್ದಾರೆ. ತಾಲೂಕು ಸಂಘಟನಾ ಸಂಚಾಲಕರಾದ ರಾಮು ಕರಿಯ, ವೊಡ್ಡ ಅಪ್ಪಣ್ಣ ಮತ್ತಿತರ ಪ್ರಮುಖರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.



ಪೈಸಾರಿ ಜಾಗದಲ್ಲಿ ತಾತ್ಕಾಲಿಕ ಶೆಡ್‌ಗಳನ್ನು ತೆರವುಗೊಳಿಸಿದನ್ನು ಖಂಡಿಸಿ ಜಿಲ್ಲಾ ದಲಿತ ಸಂಘರ್ಷ ಸಮಿತಿ ಪ್ರತಿಭಟನೆ ನಡೆಸಿತು.

ನಾಪತ್ತೆಯಾಗಿದ್ದ ಗಾರ್ಡ್ ಶವ ಪತ್ತೆ


ಶರತ್

ಮಡಿಕೇರಿ: ಚಿಕ್ಕಮಗಳೂರು ಜಿಲ್ಲೆ ಕಡೂರು ತಾಲೂಕಿನ ಅರಣ್ಯ ಇಲಾಖೆಯಲ್ಲಿ ಗಾರ್ಡ್ ಆಗಿದ್ದು, ನಿಗೂಢವಾಗಿ ನಾಪತ್ತೆಯಾಗಿದ್ದ ಕೊಡಗಿನ ಕಾಲೂರು ಮೂಲದ ಅರಣ್ಯ ಸಿಬ್ಬಂದಿ ಶರತ್(33) ಎಂಬವರ ಮೃತ ದೇಹ ಕೊಳೆತ ಸ್ಥಿತಿಯಲ್ಲಿ ಕಡೂರು ಸಖರಾಯ ಪಟ್ಟಣ ಬಳಿ ಗಿರಿ ಪ್ಲಾಂಟೇಷನ್‌ನಲ್ಲಿ ಇಂದು ಪತ್ತೆಯಾಗಿದೆ.

ಶರತ್ ಕರ್ತವ್ಯದಲ್ಲಿದ್ದಾಗಲೇ ಜೂ.24ರಂದು ನಾಪತ್ತೆಯಾಗಿದ್ದ ದಿನವೇ ಕಡೂರು ಸಖರಾಯ ಪಟ್ಟಣ ಪೊಲೀಸ್ ಠಾಣೆಯಲ್ಲಿ ವ್ಯಕ್ತಿ ನಾಪತ್ತೆ ಪ್ರಕರಣ ದಾಖಲಾಗಿತ್ತು. ಅವರ ತಂದೆ ಚಿಕ್ಕಮಗಳೂರು ಅರಣ್ಯ ಇಲಾಖೆಯಲ್ಲಿ ಫಾರೆಸ್ಟ್ ಗಾರ್ಡ್ ಆಗಿದ್ದಾಗಲೇ ನಿಧನರಾಗಿದ್ದರಿಂದ ಅನುಕಂಪದ ಆಧಾರದ ಮೇಲೆ ಶರತ್ ಕೆಲಸ ಪಡೆದಿದ್ದರು. ಸುಳ್ಯದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಇವರು 6 ತಿಂಗಳ ಹಿಂದೆ ಚಿಕ್ಕಮಗಳೂರು ಅರಣ್ಯ ಇಲಾಖೆಗೆ ವರ್ಗಾವಣೆಯಾಗಿದ್ದರು. ನಾಪತ್ತೆಯಾಗಿದ್ದ ಇವರ ಹುಡುಕಾಟ ನಡೆಸುತ್ತಿದ್ದಾಗ ಶರತ್ ಅವರ ಬೈಕ್ ಸಮೀಪದ ಅರಣ್ಯದ ಬಳಿ ಪತ್ತೆಯಾಗಿದ್ದರೆ, ಅವರ ಬಟ್ಟೆಗಳು 2ಕಿ.ಮೀ ದೂರದಲ್ಲಿ ಕಂಡು ಬಂದಿತ್ತು. ಅರಣ್ಯ ಇಲಾಖೆ, ಪೊಲೀಸ್ ಇಲಾಖೆ ಸಿಬ್ಬಂದಿ, ಡ್ರೋಣ್ ಕ್ಯಾಮರಾ, ಶ್ವಾನದಳ ಸಹಿತ 550 ಹೆಕ್ಟೇರ್ ಅರಣ್ಯ ಪ್ರದೇಶದಲ್ಲಿ ಶೋಧ ಕಾರ್ಯ ಕೈಗೊಂಡಿದ್ದರು. ನಿರಂತರ ಶೋಧ ಕಾರ್ಯಾಚರಣೆಯಿಂದ ಫಾರೆಸ್ಟ್ ಗಾರ್ಡ್ ಶರತ್ ಮೃತದೇಹ ಕೊಳೆತ ಸ್ಥಿತಿಯಲ್ಲಿ ಅರಣ್ಯ ಪ್ರದೇಶದಲ್ಲಿ ಪತ್ತೆಯಾಗಿದೆ. ಶರತ್ ಸಖರಾಯಪಟ್ಟಣದಲ್ಲಿ ಏಕಾಂಗಿಯಾಗಿ ರೂಂ ಮಾಡಿಕೊಂಡಿದ್ದರೆ, ಅವರ ತಾಯಿ ಕಡೂರು ಎನ್.ಆರ್ ಮರದಲ್ಲಿ ಬಾಡಿಗೆ ಮನೆಯಲ್ಲಿ ನೆಲೆಸಿದ್ದರು ಎಂದು ತಿಳಿದು ಬಂದಿದೆ. ಮೃತದೇಹದ ಮರಣೋತ್ತರ ಪರೀಕ್ಷೆಯ ವರದಿ ಬಂದ ಬಳಿಕ ಸಾವಿಗೆ ನಿಖರ ಕಾರಣ ತಿಳಿದು ಬರಬೇಕಿದೆ.

ಕೋಕೇರಿಯಲ್ಲಿ ಕಾಡಾನೆಗಳ ದಾಂಧಲೆ; ಗ್ರಾಮಸ್ಥರ ಆತಂಕ



ಮಡಿಕೇರಿ, ಜು.4–ಕೆಲ ದಿನಗಳಿಂದ ಕಾಡಾನೆಗಳ ಹಿಂಡು ಬೆಳೆಗಾರರ ತೋಟಗಳಿಗೆ ಲಗ್ಗೆ ಇಟ್ಟು ದಾಂಧಲೆ ನಡೆಸಿ ಕೃಷಿ ಗಿಡಗಳನ್ನು ನಾಶಪಡಿಸಿ ಅಪಾರ ನಷ್ಟ ಉಂಟು ಮಾಡಿದ್ದು ಗ್ರಾಮಸ್ಥರಲ್ಲಿ ಆತಂಕ ಮೂಡಿಸಿದೆ. ಈ ವ್ಯಾಪ್ತಿಯ ಸ್ಥಳೀಯ ಕಾಫಿ ತೋಟಗಳೇ ಕಾಡಾನೆ ಆವಾಸ ಸ್ಥಾನವಾಗಿ ಮಾರ್ಪಟ್ಟಿವೆ.

ಕೋಕೇರಿ ಗ್ರಾಮದ ನೆಲ್ಲಮಕ್ಕಡ ವಿವೇಕ್ ಹಾಗೂ ಬೆಳಿಯಂಡ್ರ ಲಕ್ಕಿ ಅವರ ಕಾಫಿ ತೋಟಗಳಿಗೆ ಲಗ್ಗೆ ಇಟ್ಟ ಕಾಡಾನೆಗಳ ಹಿಂಡು ತೋಟದಲ್ಲಿ ಬೆಳೆದ ಕಾಫಿ, ಅಡಿಕೆ, ಕರಿಮೆಣಸು, ಬಾಳೆ ಇನ್ನಿತರ ಫಸಲು ಭರಿತ ಕೃಷಿ ಗಿಡಗಳನ್ನು ತಿಂದು ತುಳಿದು ನಷ್ಟಪಡಿಸಿವೆ. ನರಿಯಂದಡ ಗ್ರಾಮದ ಸುಮಂತ್ ಎಂಬುವರ ಕಾಫಿ ತೋಟದಲ್ಲಿ ಕಾಡಾನೆಗಳ ಹಿಂಡು ಸಂಚರಿಸುವ ವಿಡಿಯೋ ಮೊಬೈಲ್‌ನಲ್ಲಿ ಸೆರೆ ಹಿಡಿದಿದ್ದು, ಸಾಮಾಜಿಕ ಜಾಲ ತಾಣದಲ್ಲಿ ವೈರಲ್ ಆಗಿದೆ. ಬೆಳಿಯಂಡ್ರ ಲಕ್ಕಿ ಅವರ ಮನೆಯ ಸಮೀಪಕ್ಕೆ ಮಧ್ಯ ರಾತ್ರಿ ಒಂಟಿ ಸಲಗ ಬಂದಿರುವುದು ಕೂಡ ಮೊಬೈಲ್ ನಲ್ಲಿ ಸೆರೆ ಹಿಡಿದಿದ್ದಾರೆ.

ಕಾಡಾನೆಗಳ ಹಾವಳಿಯಿಂದಾಗಿ ಗ್ರಾಮದ ಬೆಳೆಗಾರರು ಸಂಕಷ್ಟಕ್ಕೆ ಸಿಲುಕಿದ್ದು, ಗ್ರಾಮದಲ್ಲಿ ಸಂಚರಿಸಲು ಜನರು ಭಯಪಡುವ ಪರಿಸ್ಥಿತಿ ಉದ್ಭವವಾಗಿದೆ. ಕಾರ್ಮಿಕರು ತೋಟ ಕೆಲಸಕ್ಕೆ ತೆರಳಲು ಹಿಂದೇಟು ಹಾಕುತ್ತಿದ್ದಾರೆ. ಕಾಫಿ ತೋಟದಲ್ಲೇ ಕಾಡಾನೆಗಳು ಬೀಡು ಬಿಟ್ಟು ಅಪಾರ ಪ್ರಮಾಣದ ಕೃಷಿ ಫಸಲು ಧ್ವಂಸಗೊಳಿಸುತ್ತಿದ್ದರೂ ಅರಣ್ಯ ಇಲಾಖೆ ಯಾವುದೇ ಕ್ರಮ ಕೈಗೊಳ್ಳುತ್ತಿಲ್ಲ ಎಂದು ಗ್ರಾಮಸ್ಥರು ಆರೋಪಿಸಿದ್ದಾರೆ. ಕೂಡಲೇ ಅರಣ್ಯ ಇಲಾಖೆ ಹಾಗೂ ಸರಕಾರ ನಷ್ಟಕ್ಕೊಳಗಾದ ಬೆಳೆಗಾರರಿಗೆ ಸೂಕ್ತ ಪರಿಹಾರ ನೀಡಬೇಕು ಹಾಗೂ ಕಾಡಾನೆಗಳನ್ನು ಸೆರೆ ಹಿಡಿದು ಬೇರೆಡೆಗೆ ಸ್ಥಳಾಂತರಿಸಬೇಕೆಂದು ಗ್ರಾಮಸ್ಥರು ಒತ್ತಾಯಿಸಿದ್ದಾರೆ.

ರೈತ ಮೋರ್ಚಾದಿಂದ ವಿಶ್ವ ಪರಿಸರ ದಿವಸ್ ದಿನಾಚರಣೆ



ಬಾಲಂಬಿಯಲ್ಲಿ ಚೆಂಬು ಬಿಜೆಪಿ ಶಕ್ತಿಕೇಂದ್ರ ಮತ್ತು ಚೆಂಬು ಬಿಜೆಪಿ ರೈತ ಮೋರ್ಚಾ ಸಹಯೋಗದೊಂದಿಗೆ ವಿಶ್ವ ಪರಿಸರ ದಿವಸ್ ಆಚರಿಸಲಾಯಿತು.

ನಾಪೋಕ್ಲು: ವಿಶ್ವ ಪರಿಸರ ದಿನಾಚರಣೆಯ ಅಂಗವಾಗಿ ಚೆಂಬು ಬಿಜೆಪಿ ಶಕ್ತಿ ಕೇಂದ್ರದಿಂದ ಚೆಂಬು ಬಿಜೆಪಿ ರೈತಮೋರ್ಚಾ ಸಹಯೋಗದೊಂದಿಗೆ ಬಾಲಂಬಿಯಲ್ಲಿ ವಿವಿಧ ಜಾತಿಯ ಗಿಡಗಳನ್ನು ನೆಡುವ ಮೂಲಕ ಗುರುವಾರ ಪರಿಸರ ದಿವಸ್ ಆಚರಿಸಲಾಯಿತು.

ಈ ಸಂದರ್ಭದಲ್ಲಿ ಶಕ್ತಿ ಕೇಂದ್ರ ಅಧ್ಯಕ್ಷ ಸುಬ್ರಹ್ಮಣ್ಯ ಉಪಾಧ್ಯಾಯ, ಗ್ರಾಪಂ ಅಧ್ಯಕ್ಷ ತೀರ್ಥಾರಾಮ ಪೂಜಾರಿಗದ್ದೆ, ರೈತಮೋರ್ಚಾ ಅಧ್ಯಕ್ಷ ಶ್ರೀನಿವಾಸ್ ನಿಡಿಂಜಿ, ಗ್ರಾಪಂ ಸದಸ್ಯರಾದ ರಮೇಶ್ ಹುಲ್ಲುಬೆಂಕಿ, ವಸಂತ ಊರುಬೈಲು, ಸೊಸೈಟಿ ನಿರ್ದೇಶಕರಾದ ದಿನೇಶ್ ಸಣ್ಣಮನೆ, ರಾಮಮೂರ್ತಿ ಉಂಬಳೆ, ವಸಂತ ಕುದ್ರೆಪಾಯ, ಮಾಜಿ ಉಪಾಧ್ಯಕ್ಷ ವಾಸುದೇವ ನಿಡಿಂಜಿ ಕಾರ್ಯಕ್ರಮದ ಉಸ್ತುವಾರಿ ಅನಂತ್ ಊರುಬೈಲು ಸೇರಿದಂತೆ ಪಕ್ಷದ ಕಾರ್ಯಕರ್ತರು ಭಾಗವಹಿಸಿದ್ದರು.

ಬಾಲ್ಯದಿಂದಲೇ ಉತ್ತಮ ಸಂಸ್ಕಾರವನ್ನು ಕಲಿಸಿ


ಸೇಕ್ರೆಡ್ ಹಾರ್ಟ್ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಮಕ್ಕಳಿಗೆ ಅಕ್ಷರಾಭ್ಯಾಸ.

ಕುಶಾಲನಗರ: ಮಕ್ಕಳಿಗೆ ಬಾಲ್ಯದಿಂದಲೇ ಉತ್ತಮ ಸಂಸ್ಕಾರವನ್ನು ಕಲಿಸುವಂತೆ ನಿವೃತ್ತ ಮುಖ್ಯಶಿಕ್ಷಕಿ ಸೀತಾಲಕ್ಷ್ಮಿ ಪೋಷಕರಿಗೆ ಕಿವಿಮಾತು ಹೇಳಿದ್ದಾರೆ

ತಾಲೂಕಿನ ಹೆಬ್ಬಾಲೆ ಗ್ರಾಮದ ಸೇಕ್ರೆಡ್ ಹಾರ್ಟ್ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಏರ್ಪಡಿಸಿದ್ದ ಮಕ್ಕಳಿಗೆ ಅಕ್ಷರಾಭ್ಯಾಸ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಬಾಲ್ಯದಿಂದಲೆ ಮಕ್ಕಳಿಗೆ ಉತ್ತಮ ಮೌಲ್ಯ ಹಾಗೂ ಸಂಸ್ಕಾರಗಳನ್ನು ಕಲಿಸಲು ಪೋಷಕರು ಒತ್ತು ನೀಡಬೇಕು ಹಿಂದೂ ಸಂಪ್ರದಾಯದಲ್ಲಿ ಅಕ್ಷರ ಅಭ್ಯಾಸ ತುಂಬ ಮಹತ್ವ ಪಡೆದು ಕೊಂಡಿದೆ. ಶಾಲೆಗೆ ಮಕ್ಕಳನ್ನು ಸೇರಿಸಿದ ನಂತರ ಪೋಷಕರ ಜವಾಬ್ದಾರಿ ಪ್ರಾರಂಭವಾಗುತ್ತದೆ. ಮಕ್ಕಳನ್ನು ಮನೆಯಲ್ಲಿಯೇ ತಯಾರು ಮಾಡಬೇಕು. ಮನೆಯೇ ಮೊದಲ ಪಾಠಶಾಲೆ, ತಾಯಿಯೇ ಮೊದಲ ಗುರು ಇದ್ದಂತೆ. ಆದ್ದರಿಂದ ಮಕ್ಕಳಿಗೆ ಉತ್ತಮ ಹವ್ಯಾಸ, ಶಿಕ್ಷಣ ಕೊಡಿಸಿದರೆ ಅವರೇ ಸಮಾಜದ ಆಸ್ತಿಯಾಗುತ್ತಾರೆ ಎಂದರು.

ನಂಜುಂಡ ಆಚಾರ್ಯ, ರವಿಕಿರಣ್ ಅವರು ಮಕ್ಕಳಿಗೆ ಅಕ್ಷರಾಭ್ಯಾಸ ಮಾಡಿಸಿದರು. ಪೋಷಕ ಶಿಕ್ಷಕ ಪರಿಷತ್ತು ಅಧ್ಯಕ್ಷ ಮಂಜುನಾಥ್ ಅಧ್ಯಕ್ಷತೆ ವಹಿಸಿದ್ದರು. ಶಿವಾನಂದ, ಆಶಾ ಕಣಿವೆ, ವರಲಕ್ಷ್ಮಿ, ಎಚ್.ಎಸ್. ಲೋಕೇಶ್, ಮುಖ್ಯಶಿಕ್ಷಕಿ ಲೇಖಾ ಪಾಲ್ಗೊಂಡಿದ್ದರು.

ಅಹವಾಲು ಸ್ವೀಕಾರ


ವಿರಾಜಪೇಟೆ ತಾಲೂಕಿನ ಬಲ್ಯಮುಂಡೂರು ಗ್ರಾಮದಲ್ಲಿರುವ ಶಕ್ತಿ ಕೇಂದ್ರದಲ್ಲಿ ನಡೆದ ಸಾರ್ವಜನಿಕ ಸಭೆಯಲ್ಲಿ ಸಂಸದ ಒಡೆಯರ್ ಜನರ ಕುಂದು ಕೊರತೆಗಳನ್ನು ಆಲಿಸಿ ಅಹವಾಲುಗಳನ್ನು ಸ್ವೀಕರಿಸಲಾಯಿತು. ಗ್ರಾಮಸ್ಥರ ಮನವಿಗಳಿಗೆ ಸೂಕ್ತವಾಗಿ ಸ್ಪಂದಿಸಿ ಶೀಘ್ರದಲ್ಲೇ ಪರಿಹಾರ ಒದಗಿಸುವ ಭರವಸೆ ನೀಡಲಾಯಿತು.

ಗಾಯಾಳು ವೈದ್ಯ ಚಿಕಿತ್ಸೆ ಫಲಿಸದೆ ಸಾವು

ಮಡಿಕೇರಿ: ಇತ್ತೀಚೆಗೆ ಅಪಘಾತದಲ್ಲಿ ತೀವ್ರವಾಗಿ ಗಾಯಗೊಂಡಿದ್ದ ಕಲ್ಲುಗುಂಡಿಯ ಯುವ



ವೈದ್ಯ ಡಾ. ಶಮಂತ್ ಭಟ್(25) ಚಿಕಿತ್ಸೆ ಫಲಿಸದೆ ನಿಧನರಾಗಿದ್ದಾರೆ. ವೈದ್ಯ ವೃತ್ತಿ ನಡೆಸುತ್ತಿದ್ದ ಭಟ್ ಕೆಲ ದಿನಗಳ ಹಿಂದೆ ದ್ವಿಚಕ್ರ ವಾಹನದಲ್ಲಿ ತೆರಳುತ್ತಿದ್ದಾಗ ಸುಳ್ಯ–ಬೆಳ್ಳಾರೆ ನಡುವಿನ ಸೋಣಂಗೇರಿ ಎಂಬಲ್ಲಿ ಬಸ್ ಅಪಘಾತ ಸಂಭವಿಸಿತ್ತು. ಗಂಭೀರವಾಗಿ ಗಾಯಗೊಂಡಿದ್ದ ಇವರನ್ನು ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿತ್ತಾದರೂ ಚೇತರಿಸಿಕೊಳ್ಳದೆ ನಿಧನರಾಗಿದ್ದಾರೆ.

ವೈದ್ಯ ವೃತ್ತಿಯಲ್ಲಿ ತೊಡಗಿರುವ ಡಾ.ಶಮಂತ್ ಭಟ್ ಅವರು ಕಲ್ಲುಗುಂಡಿಯ ವೈದ್ಯ ಡಾ.ಶ್ಯಾಂ ಪ್ರಸಾದ್ ಭಟ್ ಅವರ ಪುತ್ರರಾಗಿದ್ದಾರೆ. ಯುವ ವೈದ್ಯನ ನಿಧನಕ್ಕೆ ಕಲ್ಲುಗುಂಡಿ, ಸಂಪಾಜೆ ಹಾಗೂ ಸುಳ್ಯ ಭಾಗದ ಜನರು ಸಂತಾಪ ಸೂಚಿಸಿದ್ದಾರೆ. ಮೃತರು ತಂದೆ, ತಾಯಿ ಹಾಗೂ ಸಹೋದರಿಯನ್ನು ಅಗಲಿದ್ದಾರೆ.

ಮಣ್ಣಿನ ವಾಸದ ಮನೆ ಪೂರ್ಣ ಹಾನಿ


ಯವಕಪಾಡಿ ಗ್ರಾಮದ ಪಾಲೆ ಪಮ್ಮು ಅವರ ಮಣ್ಣಿನ ವಾಸದ ಮನೆ ಪೂರ್ಣ ಕುಸಿದು ಹಾನಿಯಾಗಿ ನಷ್ಟ ಸಂಭವಿಸಿರುವುದು.

ನಾಪೋಕ್ಲು: ಇಲ್ಲಿಗೆ ಸಮೀಪದ ಯವಕ ಪಾಡಿ ಗ್ರಾಮದಲ್ಲಿ ಮಣ್ಣಿನ ಮನೆಯೊಂದು ಪೂರ್ಣ ಕುಸಿದು ಹಾನಿಯಾಗಿದೆ.

ಕಕ್ಕಬೆ ಗ್ರಾಮ ಪಂಚಾಯಿತಿಯ ಯವಕಪಾಡಿ ಗ್ರಾಮದ ನಿವಾಸಿ ಪಾಲೆ ಪಮ್ಮು ಅವರ ಮಣ್ಣಿನ ವಾಸದ ಮನೆ ಇಂದು ಸುರಿದ ಭಾರಿ ಮಳೆಯಿಂದಾಗಿ ಕುಸಿದು ಹಾನಿಯಾಗಿ ನಷ್ಟ ಸಂಭವಿಸಿದೆ. ಮನೆಯ ಮರ ಮುಟ್ಟುಗಲು ಹಾಗೂ ಹೆಂಚು ಮನೆಯಲ್ಲಿದ್ದ ಸಾಮಗ್ರಿಗಳು ನಷ್ಟವಾಗಿದ್ದರೂ ಮನೆಯಲ್ಲಿದ್ದವರು ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಸ್ಥಳಕ್ಕೆ ಕಂದಾಯ ಪರಿವೀಕ್ಷಕ ರವಿಕುಮಾರ್ ಹಾಗೂ ಸಿಬ್ಬಂದಿ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ವಿಜೃಂಭಣೆಯ ಚಾಮುಂಡೇಶ್ವರಿ ಅಮ್ಮನವರ ಜಯಂತ್ಯುತ್ಸವ


ಕ್ಷತ್ರಿಯ ಮರಾಠ ಗೊಂದಲಿ ಸಮಾಜದಿಂದ 47ನೇ ವರ್ಷದ ಶ್ರೀ ಚಾಮುಂಡೇಶ್ವರಿ ಅಮ್ಮನವರ ಜಯಂತ್ಯುತ್ಸವವನ್ನು ಸಂಭ್ರಮದಿಂದ ಆಚರಿಸಲಾಯಿತು.

ಚಾಮರಾಜನಗರ: ನಗರದಲ್ಲಿ ಕ್ಷತ್ರಿಯ ಮರಾಠ ಗೊಂದಲಿ ಸಮಾಜದಿಂದ 47ನೇ ವರ್ಷದ ಶ್ರೀ ಚಾಮುಂಡೇಶ್ವರಿ ಅಮ್ಮನವರ ಜಯಂತ್ಯುತ್ಸವವನ್ನು ಸಂಭ್ರಮದಿಂದ ಆಚರಿಸಲಾಯಿತು.

ಶ್ರೀಚಾಮುಂಡೇಶ್ವರಿ ದೇವಿಯ ವಿಗ್ರಹವನ್ನು ಬೆಳ್ಳಿ ರಥದಲ್ಲಿ ಇರಿಸಿ ವಾಲ್ಮೀಕಿ ಭವನದಿಂದ ಆದಿಶಕ್ತಿ ದೇವಸ್ಥಾನದ ರಸ್ತೆ, ಚಿಕ್ಕ ಅಂಗಡಿ ಬೀದಿ, ದೊಡ್ಡ ಅಂಗಡಿ ಬೀದಿ ಮೂಲಕ ಕೊಳದ ಬೀದಿವರೆಗೆ ನಡೆಸಲಾಯಿತು. ಬಳಿಕ ಸಮೀಪದ ಸುವರ್ಣಾವತಿ ನದಿಯಲ್ಲಿ ದೇವಿಯ ವಿಗ್ರಹವನ್ನು ವಿಸರ್ಜನೆ ಮಾಡಲಾಯಿತು.

ಎರಡು ದಿನಗಳ ಕಾಲ ದೇವಿಯನ್ನು ಪ್ರತಿಷ್ಠಾಪಿಸಿದ ಗೊಂದಲಿ ಸಮಾಜದ ಕುಲಬಾಂಧವರು, ಹೋಮ, ಹವನ ಸೇರಿದಂತೆ ವಿಶೇಷ ಪೂಜಾ ಕಾರ್ಯಕ್ರಮ ಕೈಗೊಂಡರು. ಬುಧವಾರ ನಡೆದ ವಿಸರ್ಜನಾ ಮೆರವಣಿಗೆಯಲ್ಲಿ ಬ್ಯಾಂಡ್‌ಸೆಟ್, ಮಂಗಳವಾದ್ಯ, ಗೊರವರ ಕುಣಿತ, ಸೇರಿದಂತೆ ಹಲವು ಕಲಾತಂಡಗಳು ಭಾಗವಹಿಸಿ ಗಮನ ಸೆಳೆದವು. ಮೆರವಣಿಗೆ ಯುದ್ದಕ್ಕೂ ಯುವಕರು, ಯುವತಿಯರು, ಮಹಿಳೆಯರು ಕುಣಿದು ಸಂಭ್ರಮಿಸಿದರು.

ಮೆರವಣಿಗೆಯಲ್ಲಿ ಕ್ಷತ್ರಿಯ ಮರಾಠ ಗೊಂದಲಿ ಸಮಾಜದ ಪಟೇಲರಾದ ಭವಾನಿ ಶಂಕರ್ ರಾವ್, ಸಂಘದ ಅಧ್ಯಕ್ಷರಾದ ಶಿವಕುಮಾರ್ ರಾವ್, ಯಜಮಾನರಾದ ಶ್ರೀನಿವಾಸ್, ಸಮಾಜದ ಮುಖಂಡರಾದ ಗೋಪಾಲ್ ರಾವ್, ದೇವ್ರು, ವಿಶ್ವ ಸುರೇಶ್ ಬೆಂಗಳೂರು, ಉದಯ್ ಮೈಸೂರು, ಚಂದ್ರು, ರವಿ, ರವಿ ಚೌಹಾಣ್, ವಿಠಲ್ ರಾವ್, ತ್ರಿವೇಣಿ, ಲಕ್ಷ್ಮೀ, ಕಲಾವತಿ, ಆಶಾ, ಸುನಿತಾ ಸೇರಿದಂತೆ ನೂರಾರು ಸಂಖ್ಯೆಯಲ್ಲಿ ಸಮುದಾಯದ ಜನರು ಭಾಗವಹಿಸಿದ್ದರು.

ನಗರಸಭೆಯಲ್ಲಿ ಮಧ್ಯವರ್ತಿಗಳಾಗಿ ಸದಸ್ಯರುಗಳಿಂದಲೇ ಖಾತೆ ಪ್ರತಿಧ್ವನಿ

ಸದಸ್ಯರ ವರ್ತನೆಗೆ ಗರಂಮ್ಮಾದ ಶಾಸಕರು


ನಗರ ಸಭೆಯಲ್ಲಿ ನಡೆದ ಸಭೆಯಲ್ಲಿ ಸದಸ್ಯರೇ ಆರೋಪ–ಪ್ರತ್ಯಾರೋಪದಲ್ಲಿ ತೊಡಗಿರುವುದನ್ನು ನೋಡಿ ಶಾಸಕರು ಆಕ್ರೋಶಗೊಂಡು ತರಾಟೆಗೆ ತೆಗೆದುಕೊಂಡರು.

ಕೊಳ್ಳೇಗಾಲ, ಜು.4–ನಗರಸಭೆಯಲ್ಲಿ ಸದಸ್ಯರ ನಡುವೆಯೇ ಪರಸ್ಪರ ಆರೋಪ, ಪ್ರತ್ಯಾರೋಪ ಗದ್ದಲದಲ್ಲಿ ಮುಳುಗಿದ ಸಭೆ, ಮೌನವಾಗಿ ವೀಕ್ಷಿಸಿದ ಅಧಿಕಾರಿಗಳು, ಪತ್ರಕರ್ತರು, ಶಾಸಕರಿಂದ ನೀತಿಪಾಠ ಇದು ಇಂದಿನ ಸಭೆಯಲ್ಲಿ ಕಂಡು ಬಂದ ಸ್ವಾರಸ್ಯದ ತುಣುಕುಗಳು.

ನಗರಸಭಾಧ್ಯಕ್ಷೆ ರೇಖಾ ರಮೇಶ್‌ರವರ ಅಧ್ಯಕ್ಷತೆಯಲ್ಲಿ ಸಭೆ ಆರಂಭವಾಗುತ್ತಿದ್ದಂತೆ ಕೆಲವು ಸದಸ್ಯರುಗಳೆ ಮಧ್ಯವರ್ತಿಗಳಾಗಿ ಖಾತೆ ಮಾಡಿಸುತ್ತಿರುವ ವಿಚಾರ ಚರ್ಚೆಗೆ ಬಂದು ಗದ್ದಲ ಕೂಗಾಟವಾಗಿ ಸಭೆಯ ಹಾದಿ ತಪ್ಪಿಸಿತು. ಸಭೆಯಲ್ಲಿ ಹಾಜರಿದ್ದ ಶಾಸಕ ಎ.ಆರ್.ಕೃಷ್ಣಮೂರ್ತಿ ಕೆಲವು ಸದಸ್ಯರ ವರ್ತನೆಗೆ ಗರಂಮ್ಮಾಗಿ ಜಿಲ್ಲಾಧಿಕಾರಿಗಳು, ಪತ್ರಕರ್ತರ ಸಮ್ಮುಖದಲ್ಲಿಯೇ ಬಹಿರಂಗವಾಗಿ ತರಾಟೆ ತೆಗೆದುಕೊಂಡರು.

ಮೊದಲು ನಿಮ್ಮ ಗೌರವ ಉಳಿಸಿಕೊಳ್ಳಿ, ನಾನೇ ಬೈದರೆ ಬೇರೆ ಅರ್ಥ ಕಲ್ಪಿಸುವವರಿದ್ದಾರೆ. ನನ್ನ ಬಗ್ಗೆ ಅಪಪ್ರಚಾರ ಮಾಡುವವರು ಇದ್ದಾರೆ, ಹಾಗಾಗಿ 2 ವರುಷದಿಂದ ತಾಳ್ಮೆಯಿಂದ ಇದ್ದೆ ಆದರೆ ನೀವೆಲ್ಲರೂ ಮಾಡಿದ್ದೇನು, ಜಿಲ್ಲಾಧಿಕಾರಿಗಳು, ಪತ್ರಕರ್ತರ ಸಮ್ಮುಖದಲ್ಲಿ ಖಾತೆ ವಿಚಾರದಲ್ಲಿ ನಡೆದುಕೊಂಡ ರೀತಿ ಸರಿನಾ, ಪ್ರೀತಿಯಿಂದ ಅಧಿಕಾರಿಗಳ ಬಳಿ ನಿಮ್ಮ ನಿಮ್ಮ ಕೆಲಸ ಮಾಡಿಸಿಕೊಳ್ಳಿ, ಆದರೆ ದಬ್ಬಾಳಿಕೆ ಸರಿಯಲ್ಲ, ಅದು ನಡೆಯೋದು ಇಲ್ಲ; ಇದನ್ನ ಮೊದಲ ಬಾರಿ ಹಾಗೂ 3ಬಾರಿ ಗೆದ್ದವರು ಅರ್ಥ ಮಾಡಿಕೊಳ್ಳಬೇಕು, ಎಂದು ಬೇಸರದಿಂದಲೇ ಹೇಳಿದರು

ಗದ್ದಲಕ್ಕೆ ನಾಂದಿ: ಮೊದಲಿಗೆ ಉಪಾಧ್ಯಕ್ಷ ಎ.ಪಿ.ಶಂಕರ್ ಮಾತನಾಡಿ ಎ ಖಾತೆಗಳಿಗೂ ಇಲ್ಲಿ ಪುನಃ ಬಿ ಖಾತೆ ಎಂದು ನೀಡಲಾಗುತ್ತಿದೆ ಎಂದು ದೂರಿದ ಕೂಡಲೇ ಮಧ್ಯೆ ಪ್ರವೇಶಿಸಿದ ಸದಸ್ಯ ಜಿಪಿ ಶಿವಕುಮಾರ್ ನೀವು ನಗರಸಭೆ ಮಾನ ತೆಗೆಯುತ್ತಿದ್ದಿರಿ, ಅನಧಿಕೃತ ಬಡಾವಣೆಯನ್ನು ಅಧಿಕೃತ ಎಂದು ಮಾಡಿಸಿದ ಭೂಪ ನೀನು, ಅಕ್ರಮದಲ್ಲಿ ಎತ್ತಿದ ಕೈ ಎಂದು ಪ್ರಶ್ನಿಸಿ ಉಪಾಧ್ಯಕ್ಷ ವಿರುದ್ಧ ಏಕವಚನದಲ್ಲೇ ಕಿಡಿಕಾರಿದರು.

ನೀನು ವಾರ್ಡ್‌ನಲ್ಲಿ ಜನರ ಕೆಲಸ ಮಾಡು, ಅದನ್ನ ಬಿಟ್ಟು ಖಾತೆ ಮಾಡಿಸಲು ಬರಬೇಡಿ, ಜನರ ಕಷ್ಟ ಕೇಳಲ್ಲ, ನಾನು ಹಲವರಿಗೆ ಹಲವು ಬಾರಿ ಹೇಳಿದ್ದೇನೆ ಖಾತೆಗಾಗಿ ನಾವು ಬರುವುದು ಬೇಡ ಎಂದು ಖಾತೆಗಾಗಿ ಬರುವವರು ದಯಮಾಡಿ ನಗರಸಭೆಯಿಂದ ಆಚೆ ಹೋಗಿ ಎನ್ನುತ್ತಿದ್ದಂತೆ ಸದಸ್ಯೆ, ಸುಮ ಅವರು ನಾವು ಖಾತೆ ಮಾಡಿಸಲೇ ಬಂದಿದ್ದೆವೆ, ನಾವೇಕೆ ಆಚೆ ಹೋಗಬೇಕು ಎಂದು ಪ್ರಶ್ನಿಸುತ್ತಿದ್ದಂತೆ ಗದ್ದಲ, ಅರಚಾಟ, ಕಿರುಚಾಟದಿಂದ ಸಭೆಯಲ್ಲಿ ಗದ್ದಲದ ವಾತಾವರಣ ಮೂಡಿಬಂದಿತು

ಮಧ್ಯವರ್ತಿಗಳು ಖಾತೆ ವಿಚಾರವಾಗಿ ನಗರಸಭೆ ಹತ್ತಿರ ಸುಳಿಯದಂತೆ ನೋಡಿಕೊಳ್ಳಿ, ಇದರಿಂದಲೇ ಸಾಕಷ್ಟು ಆರೋಪಗಳಿವೆ, ಸಿಸಿಟಿವಿ ಹಾಕಿ, ಮೂಲ ಮಾಲೀಕರಿಗೆ ಇ ಸ್ವತ್ತು ನೀಡಿ, ಸಾರ್ವಜನಿಕರಿಗೆ ಸ್ಪಂದಿಸುವಂತ ರೀತಿಯಲ್ಲಿ ಅಧಿಕಾರಿಗಳು ಕೆಲಸ ಮಾಡಬೇಕೆಂದರು.

ಸಭೆಯಲ್ಲಿ ಮಾತನಾಡಿದ ಜಿಲ್ಲಾಧಿಕಾರಿ ಶಿಲ್ಪಾನಾಗ್ ಬೇಡದ ಕಾಮಗಾರಿಗಳನ್ನು ಮಾಡಿ ಸರ್ಕಾರಿ ಹಣ ವ್ಯರ್ಥ ಮಾಡುವ ಕೆಲಸ ಮಾಡದಿರಿ, ಸರ್ಕಾರಕ್ಕೆ ಹಣ ವಾಪಸ್ ಹೋದರೂ ಪರವಾಗಿಲ್ಲ, ಆದರೆ ಅನಗತ್ಯ ಕಾಮಗಾರಿ ನಡೆಸಬೇಡಿ ಎಂದರು.

ಅಧಿಕಾರಿಗಳ ನಡುವೆ ಸ್ವಾಮ್ಯತೆ ಇಲ್ಲವಾಗಿ ನಗರಸಭೆಯಲ್ಲಿ ನಿಧಾನಗತಿಯಲ್ಲಿ ಕಾಮಗಾರಿಗಳು ನಡೆಯುತ್ತಿವೆ, ಸ್ಥಳೀಯ ಸಂಸ್ಥೆ ಹಾಗೂ ಜಿಲ್ಲಾ ಹಂತದ 24ಗಂಟೆ ಕುಡಿಯುವ ನೀರಿನ ಕಾಮಗಾರಿ ಲೋಪ 1ತಿಂಗಳಲ್ಲಿ ಸರಿಯಾಗಬೇಕು, ನಿಗಧಿತ ಅವಧಿಯಲ್ಲಿ ಕಾಮಗಾರಿ ಮುಗಿಸದೆ ಸತಾಯಿಸುವ ಗುತ್ತಿಗೆದಾರರನ್ನು ಕಪ್ಪು ಪಟ್ಟಿ ಸೇರಿಸಲು ಅಧಿಕಾರಿಗಳು ಶಿಫಾರಸ್ಸು ಮಾಡಿ, ಕಾಮಗಾರಿ ನಿರ್ವಹಣೆ ಅತೀ ಮುಖ್ಯ, ಇದನ್ನ ಅಧಿಕಾರಿಗಳು ಅರ್ಥ ಮಾಡಿಕೊಳ್ಳಬೇಕೆಂದು ಜಿಲ್ಲಾಧಿಕಾರಿಗಳು ಅಧಿಕಾರಿಗಳಿಗೆ ಕರ್ತವ್ಯ ಬೋಧನೆ ಮಾಡಿದರು.

ಡೇರಿ ಸಿಬ್ಬಂದಿಗೆ ನಿವೃತ್ತಿ ಪರಿಹಾರ ವಿತರಣೆ


ಚಾಮುಲ್ ಉಪಕಚೇರಿಯಲ್ಲಿ ನಿವೃತ್ತ ಸಿಬ್ಬಂದಿಗಳಿಗೆ ಪರಿಹಾರದ ಚೆಕ್ ವಿತರಿಸಿದರು.

ಗುಂಡ್ಲುಪೇಟೆ, ಜು.4 (ಸೋಮ್.ಜಿ)– ನಿವೃತ್ತಿ ಹೊಂದಿದ ಹಾಲು ಉತ್ಪಾದಕರ ಸಹಕಾರ ಸಂಘದ ಸಿಬ್ಬಂದಿಗಳಿಗೆ ಇಲ್ಲಿನ ಚಾಮುಲ್ ಉಪಕಚೇರಿಯಲ್ಲಿ ಚಾಮರಾಜನಗರ ಹಾಲು ಒಕ್ಕೂಟ ಹಾಗೂ ಚಾಮುಲ್ ರೈತ ಕಲ್ಯಾಣ ಟ್ರಸ್ಟ್‌ವತಿಯಿಂದ ನಿವೃತ್ತಿ ಪರಿಹಾರವನ್ನು ವಿತರಣೆ ಮಾಡಲಾಯಿತು.

ಹಾಲು ಉತ್ಪಾದಕರ ಸಹಕಾರ ಸಂಘದ 8 ಫಲಾನುಭವಿಗಳಿಗೆ ಒಟ್ಟು 23.20 ಲಕ್ಷ ರೂ.ಗಳ ಚೆಕ್ಕನ್ನು ಸಹಕಾರ ಒಕ್ಕೂಟದ ಅಧ್ಯಕ್ಷ ಹಾಗೂ ಚಾಮುಲ್ ನಿರ್ದೇಶಕ ಹೆಚ್.ಎಸ್.ನಂಜುಂಡಪ್ರಸಾದ್ ಮತ್ತು ಚಾಮುಲ್ ನಿರ್ದೇಶಕ ಎಂ.ಪಿ.ಸುನಿಲ್ ವಿತರಿಸಿದರು. ಹೆಚ್. ಎಸ್.ನಂಜುಂಡಪ್ರಸಾದ್ ಮಾತನಾಡಿ, ಒಕ್ಕೂಟದಿಂದ ನೀಡುತ್ತಿರುವ ನಿವೃತ್ತಿ ಪರಿಹಾರ ಸದುಪಯೋಗಪಡಿಸಿಕೊಳ್ಳುವಂತೆ ಸಲಹೆ ನೀಡಿದರು. ಸಹಕಾರ ಸಂಘಗಳಲ್ಲಿ ಸಿಬ್ಬಂದಿ ಹೆಚ್ಚಿನ ಆಸಕ್ತಿಯಿಂದ ಕೆಲಸ ನಿರ್ವಹಿಸಿ ಲಾಭದತ್ತ ಸಂಘಗಳನ್ನು ಕೊಂಡೊಯ್ಯುವಂತೆ ಕಿವಿಮಾತು ಹೇಳಿದರು.

ಚಾಮುಲ್ ನಿರ್ದೇಶಕ ಎಂ.ಪಿ.ಸುನಿಲ್ ಮಾತನಾಡಿ, ಸಂಘಗಳಲ್ಲಿ ಹಾಲಿನ ಗುಣಮಟ್ಟ ಹಾಗೂ ಸಂಘವನ್ನು ಉತ್ತಮ ಸ್ಥಿತಿಗೆ ಕೊಂಡೊಯ್ಯವಲ್ಲಿ ಸಿಬ್ಬಂದಿ ಪಾತ್ರ ಬಹುಮುಖ್ಯವಾಗಿದ್ದು, ಸಿಬ್ಬಂದಿಗಳಿಗೆ ಆತ್ಮಸ್ಥೈರ್ಯ ತುಂಬುವ ಉದ್ದೇಶದಿಂದ ಈ ಯೋಜನೆ ಜಾರಿಯಲ್ಲಿದ್ದು, ಸಂಘಗಳಲ್ಲಿ ಉತ್ತಮ ಸೇವೆ ಸಲ್ಲಿಸಿ ಸೌಲಭ್ಯಗಳನ್ನು ಪಡೆಯುವಂತೆ ತಿಳಿಸಿದ್ದರು.

ಚಾಮುಲ್ ವ್ಯವಸ್ಥಾಪಕ ಶರತ್ ಕುಮಾರ್, ವಿಸ್ತರಣಾಧಿಕಾರಿಗಳಾದ ಹೆಚ್. ಪ್ರಕಾಶ್, ಸಿದ್ದಲಿಂಗೇಶ್, ರಂಜಿತಾ, ಮುದ್ದಪ್ಪ, ಉದಯ್, ಮಂಜೇಶ್ ಹಾಗೂ ಹಾಲು ಉತ್ಪಾದಕರ ಸಹಕಾರ ಸಂಘಗಳ ಕಾರ್ಯದರ್ಶಿಗಳು ಮತ್ತು ಫಲಾನುಭವಿಗಳಿದ್ದರು.

ಚಳವಳಿಯಲ್ಲಿ ಪಾಲ್ಗೊಳ್ಳಲು ಹೋಗಿದ್ದ ರೈತ ಮಸಣಕ್ಕೆ

ಬೇಗೂರು: ಸಮೀಪದ ಕುರುಬರ



ಹುಂಡಿ ಗ್ರಾಮದ ರೈತ ಈಶ್ವರ್(55) ಹೃದಯಾಘಾತದಿಂದ ಸಾವನ್ನಪ್ಪಿದ್ದಾರೆ. ಇಂದು ಬೆಂಗಳೂರಿನಲ್ಲಿ ನಡೆದ ರೈತಪರ ಹೋರಾಟದಲ್ಲಿ ಭಾಗವಹಿಸಲು ಮೈಸೂರಿನಿಂದ ರೈಲಿನಲ್ಲಿ ತೆರಳಿದ್ದ ಅವರು, ಫ್ರೀಡಂ ಪಾರ್ಕ್‌ಗೆ ನಡೆದುಕೊಂಡು ಹೋಗುವಾಗ ಎದೆನೋವು ಕಾಣಿಸಿಕೊಂಡು ಕುಸಿದು ಬಿದ್ದಿದ್ದು, ಕೂಡಲೇ ಅವರನ್ನು ಶೇಷಾದ್ರಿಪುರಂನ ಅಪೋಲೋ ಆಸ್ಪತ್ರೆಗೆ ಕರೆದೊಯ್ಯುವಷ್ಟರಲ್ಲಿ ಮಾರ್ಗಮಧ್ಯೆ ಸಾವನ್ನಪ್ಪಿದ್ದಾರೆ.

ಕುರುಬರಹುಂಡಿ ಗ್ರಾಮದಲ್ಲಿ ನಡೆಯುವ ಯಾವುದೇ ಕಾರ್ಯಕ್ರಮದಲ್ಲೂ ತಮ್ಮನ್ನು ತಾವು ತೊಡಗಿಸಿಕೊಳ್ಳುತ್ತಿದ್ದರು. ಅವರ ಅಕಾಲಿಕ ನಿಧನಕ್ಕೆ ಗ್ರಾಮಸ್ಥರು ಹಾಗೂ ಅಕ್ಕಪಕ್ಕ ಗ್ರಾಮದ ಮುಖಂಡರು ತೀವ್ರ ಸಂತಾಪ ಸೂಚಿಸಿದ್ದಾರೆ.

ವಕ್ಫ್ ವಿಧೇಯಕ: ಮಾನವ ಸರಪಳಿ ಪ್ರತಿಭಟನೆ



ವಕ್ಫ್ ಮಸೂದೆಯನ್ನು ವಿರೋಧಿಸಿ ಪಟ್ಟಣದ ಜಾಮೀಯ ಮಸೀದಿ ರಸ್ತೆಯಲ್ಲಿ ಮಾನವ ಸರಪಳಿ ನಿರ್ಮಿಸಿ ಪ್ರತಿಭಟಿಸಿದರು.

ಯಳಂದೂರು, ಜು.4 (ವಿ.ನಾಗರಾಜು)–ಕೇಂದ್ರ ಸರ್ಕಾರದ ವಕ್ಫ್ ತಿದ್ದುಪಡಿ ಮಸೂದೆಯನ್ನು ವಿರೋಧಿಸಿ ಪಟ್ಟಣದ ಜಾಮೀಯ ಮಸೀದಿ ಮುಂಭಾಗದ ರಸ್ತೆಯಲ್ಲಿ ಮಾನವ ಸರಪಳಿಯನ್ನು ನಿರ್ಮಿಸಿ ಪ್ರತಿಭಟಿಸಿದರು.

ಜನಾಂಗದ ಮುಖಂಡ ನಯಾಜ್ ಖಾನ್ ಮಾತನಾಡಿ, ವಕ್ಫ್ ಕಾಯ್ದೆಗೆ ತಿದ್ದುಪಡಿ ತರಲು ಹೊರಟಿರುವ ಕೇಂದ್ರದ ಕ್ರಮವನ್ನು ಇಡೀ ರಾಷ್ಟ್ರವೇ ಖಂಡಿಸುತ್ತಿದೆ. ಇದೊಂದು ಅವೈಜ್ಞಾನಿಕ ಕಾಯ್ದೆಯಾಗಿದೆ. ಅಲ್ಪಸಂಖ್ಯಾತರಾಗಿರುವ ಮುಸ್ಲಿಮರನ್ನು ಹತ್ತಿಕ್ಕುವ ಕೆಲಸವನ್ನು ರಾಷ್ಟ್ರದಲ್ಲಿ ಮಾಡಲಾಗುತ್ತಿದೆ ಎಂದು ಆರೋಪಿಸಿದರು.

ವಕ್ಫ್ ಕಾಯ್ದೆಯ ವಿರುದ್ಧ ರಾಷ್ಟ್ರಾದ್ಯಂತ ವ್ಯಾಪಕ ವಿರೋಧ ವ್ಯಕ್ತವಾಗುತ್ತಿದೆ. ನಮ್ಮ ರಾಜ್ಯದಲ್ಲೂ ಪ್ರತಿ ಜಿಲ್ಲಾ, ತಾಲೂಕು, ಗ್ರಾಮೀಣ ಭಾಗದಲ್ಲಿ ಈ ಕಾಯ್ದೆಯ ವಿರೋಧಿ ಪ್ರತಿಭಟನೆಗಳು ನಿರಂತರವಾಗಿ ನಡೆಯುತ್ತಿದೆ. ಅಖಿಲ ಭಾರತ ಮುಸ್ಲಿಂ ವೈಯಕ್ತಿಕ ಕಾನೂನು ಮಂಡಳಿಯ ನಿರ್ದೇಶನದಂತೆ ವಿಶೇಷ ನಮಾಜ್ ನಂತರ 15 ನಿಮಿಷಗಳ ಮಾನವ ಸರಪಳಿಯನ್ನು ನಿರ್ಮಿಸಿ ಪ್ರತಿಭಟನೆಯನ್ನು ಹಮ್ಮಿಕೊಂಡಿದ್ದೇವೆ ಎಂದು ಹೇಳಿದರು. ಧರ್ಮಗುರುಗಳಾದ ಅಬ್ರಾರ್ ಅಹಮ್ಮದ್, ಪಪಂ ನಾಮ ನಿರ್ದೇಶಿತ ಸದಸ್ಯ ಮುನವ್ವರ್ ಬೇಗ್, ಇರ್ಫಾನ್, ಜಮೀರ್, ಮುನವ್ವರ್ ಸೇರಿದಂತೆ ನೂರಾರು ಮುಸ್ಲಿಮರು ಈ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ವಕ್ಫ್ ತಿದ್ದುಪಡಿ ಕಾಯ್ದೆ ವಿರೋಧಿಸಿ ಮಾನವ ಸರಪಳಿ


ವಕ್ಫ್ ಉಳಿಸಿ, ಸಂವಿಧಾನ ರಕ್ಷಿಸಿ ಹೋರಾಟ ಸಮಿತಿಯಿಂದ ನಗರದಲ್ಲಿ ಮಾನವ ಸರಪಳಿ ರಚಿಸುವ ಮೂಲಕ ಪ್ರತಿಭಟನೆ ನಡೆಸಿದರು.

ಚಾಮರಾಜನಗರ: ವಕ್ಫ್ ತಿದ್ದುಪಡಿ ಕಾಯ್ದೆಯನ್ನು ವಿರೋಧಿಸಿ ವಕ್ಫ್ ಉಳಿಸಿ, ಸಂವಿಧಾನ ರಕ್ಷಿಸಿ ಹೋರಾಟ ಸಮಿತಿಯಿಂದ ನಗರದಲ್ಲಿ ಮಾನವ ಸರಪಳಿ ರಚಿಸುವ ಮೂಲಕ ಪ್ರತಿಭಟನೆ ನಡೆಸಿದರು.

ನಗರದ ರಹಮತ್ ನಗರ ಮೊಹಲ್ಲಾದಲ್ಲಿರುವ ಮಸ್ಜಿದ್ ಎ ರಹಮತ್‌ನಲ್ಲಿ ನಮಾಜ್ ಸಲ್ಲಿಸಿ ಮಸ್ಜಿದ್ ಮುಂಭಾಗದ ಭಿತ್ತಿಪತ್ರ ಹಿಡಿದು ಮಾನವ ಸರಪಳಿ ರಚಿಸಿ ವಕ್ಫ್ ತಿದ್ದುಪಡಿ ಕಾಯ್ದೆಯನ್ನು ತೀವ್ರವಾಗಿ ವಿರೋಧಿಸಿದರು. ವಕ್ಫ್ ತಿದ್ದುಪಡಿ ಕಾಯ್ದೆ 2025 ಅಸಂವಿಧಾನಿಕವಾಗಿದ್ದು, ಅದು ಮುಸ್ಲಿಂ ಸಮುದಾಯದ ಧಾರ್ಮಿಕ ಹಕ್ಕಿನ ಉಲ್ಲಂಘನೆಯಾಗಿದೆ. ಈ ತಿದ್ದುಪಡಿ ಕಾಯಿದೆಯನ್ನು ವಾಪಸ್ ಪಡೆಯಬೇಕು ಭಿತ್ತಿಪತ್ರ ಹಿಡಿದ ಪ್ರತಿಭಟನಾನಿರತರು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಸಮೀವುಲ್ಲಾ, ಮೌಲಾನಾ ಹಿದಾಯತ್ ಉಲ್ಲಾ, ಮಸೀದಿ ಅಧ್ಯಕ್ಷರಾದ ಸೈಸೀದ್ ಸಾಬ್, ಉಪಾಧ್ಯಕ್ಷ ಸೈಯದ್ ರಫೀ, ಸೈಯದ್ ಮುಸಾಹಿಬ್ ಇತರರು ಭಾಗವಹಿಸಿದ್ದರು.

ಸರ್ಕಾರಗಳು ಮಾಡುವ ಕೆಲಸವನ್ನು ಸಂಸ್ಥೆಗಳು ಮಾಡುತ್ತಿವೆ



ಮೈಸೂರು: ಸಂಸ್ಥೆಗಳು ಕೂಡಾ ಸರ್ಕಾರಗಳು ಮಾಡುವ ಕೆಲಸವನ್ನು ಮಾಡುತ್ತಿವೆ ಎಂದು ಯೋಗ ನರಸಿಂಹಸ್ವಾಮಿ ದೇವಸ್ಥಾನದ ಆಡಳಿತಾಧಿಕಾರಿ ಶ್ರೀ ಶ್ರೀನಿವಾಸ್ ಮೆಚ್ಚುಗೆ ವ್ಯಕ್ತಪಡಿಸಿದರು.

ಮೈಸೂರಿನ ಹೂಟಗಳ್ಳಿಯಲ್ಲಿರುವ ಪಿಜಿಆರ್‌ಎಸ್‌ಎಸ್ ಸಂಸ್ಥೆ ವತಿಯಿಂದ ಹಮ್ಮಿಕೊಂಡಿದ್ದ ಎರಡನೇ ಆಷಾಢ ಶುಕ್ರವಾರದ ಚಾಮುಂಡೇಶ್ವರಿ ದೇವಿಯ ಪೂಜಾ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಪಿಜಿಆರ್‌ಎಸ್‌ಎಸ್ ಸಂಸ್ಥೆಯು ತನ್ನದೇ ಆದ ರೀತಿಯಲ್ಲಿ ಕಾರ್ಯವನ್ನು ನಿರ್ವಹಿಸುತ್ತಿದೆ. ಸಮಾಜಕ್ಕೆ ಒಂದು ಒಳ್ಳೆಯ ಸಂದೇಶವನ್ನು ನೀಡುತ್ತಿರುವುದು ಸ್ತುತ್ಯರ್ಹ ಎಂದು ತಿಳಿಸಿದರು.

ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷ ಹರೀಶ ಯಾದವ್ ಮಾತನಾಡಿ, ಪಿ.ಜಿ.ಆರ್.ಎಸ್.ಎಸ್. ಸಂಸ್ಥೆಯು ಕಳೆದ ನಾಲ್ಕು ವರ್ಷಗಳಿಂದ ಮೈಸೂರು ಜಿಲ್ಲೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದು ಸಮಾಜ ಮುಖಿಯಾಗಿ ಕಾರ್ಯವನ್ನು ನಿರ್ವಹಿಸುತ್ತಲ್ಲಿದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಪ್ರಧಾನ ಕಾರ್ಯದರ್ಶಿ ವಿ. ರವೀಂದ್ರ, ಉಪಾಧ್ಯಕ್ಷ ಸತೀಶ್, ಗೌರವಾಧ್ಯಕ್ಷೆ ಎ.ಸವಿತ, ಪಲ್ಲವಿ, ಸಹ ಕಾರ್ಯದರ್ಶಿ, ರಾಜ್ಯ ಸಂಚಾಲಕರು ರಕ್ತದಾನಿ ಮಂಜು, ಝುನ್ಸಿರಾಣಿ, ಸಂಘಟನಾ ಕಾರ್ಯದರ್ಶಿ ಮತ್ತು ಮಂಜುಳಾ ಖಜಾಂಜಿ ಹಾಗೂ ಪತ್ರಕರ್ತ ಮನೋಹರ್ ಮತ್ತು ಸಾರ್ವಜನಿಕರು ಭಾಗವಹಿಸಿದ್ದರು.

ಎನ್‌ಐಇಯಿಂದ ನ್ಯಾಯಾಲಯದ ಆದೇಶ ಉಲ್ಲಂಘನೆ

ಸಂಸ್ಥೆಯಿಂದ ವಜಾಗೊಂಡಿರುವ ಸಿಬ್ಬಂದಿ ಆರೋಪ

ಮೈಸೂರು, ಜು.4(ಜಿವಿ)–ಮೈಸೂರಿನ ಎನ್‌ಐಇ ಹಾಗೂ ಎನ್‌ಐಇಐಟಿ ಆಡಳಿತ ಮಂಡಳಿ ವಜಾಗೊಳಿಸಿರುವ ಸಿಬ್ಬಂದಿಯನ್ನು ಮರು ನಿಯೋಜನೆಗೆ ನ್ಯಾಯಾಲಯ ಹಾಗೂ ಸರ್ಕಾರದ ಆದೇಶ ನೀಡಿದೆ. ಆದರೆ ಆಡಳಿತ ಮಂಡಳಿಯೂ ಅದನ್ನು ಧಿಕ್ಕರಿಸುತ್ತಿದೆ. ಈ ಹಿನ್ನಲೆಯಲ್ಲಿ ನ್ಯಾಯಾಂಗ ನಿಂದನೆ ಅರ್ಜಿ ಸಲ್ಲಿಸಲು ಚಿಂತನೆ ನಡೆಸಿರುವುದಾಗಿ ವಜಾಗೊಂಡಿರುವ ಉದ್ಯೋಗಿಗಳು ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ವಜಾಗೊಂಡಿರುವ ಪ್ರೊ.ವೇದ ಮೋಹನ್ ಈ ವಿಷಯ ತಿಳಿಸಿ, ಎನ್‌ಐಇ ಹಾಗೂ ಎನ್‌ಐಇ ಐಟಿಯನ್ನು ವಿಲೀನಗೊಳಿಸಿ, ಈ ಸಂದರ್ಭದಲ್ಲಿ ತಮಗೆಲ್ಲ ಸೂಕ್ತ ನಿಯೋಜನೆ ಭರವಸೆ ನೀಡಲಾಗಿತ್ತು. ಆದರೆ ಈಗ ಶಿಕ್ಷಣ ಸಂಸ್ಥೆ ಮಾತಿಗೆ ತಪ್ಪಿದೆ. ಈ ಸಂಬಂಧ ವಜಾಗೊಂಡಿರುವ ಎಲ್ಲಾ ಸಿಬ್ಬಂದಿಗಳು ಉನ್ನತ ಮತ್ತು ತಾಂತ್ರೀಕ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿ ಅವರ ಗಮನಕ್ಕೆ ತಂದ ನಂತರ ಅವರು ಸಹ ವಜಾಗೊಂಡಿರುವ ಸಿಬ್ಬಂದಿಗಳ ವಜಾ ರದ್ದುಗೊಳಿಸುವಂತೆ ಆದೇಶ ನೀಡಿದ್ದಾರೆ. ಆದರೆ, ಕಾಲೇಜಿನ ಆಡಳಿತ ಮಂಡಳಿ ಅದನ್ನು ಪಾಲಿಸುತ್ತಿಲ್ಲ. ಬದಲಾಗಿ ತಾವು ಸಂಸ್ಥೆ ಪ್ರವೇಶಿಸದಂತೆ ತಡೆದಿದ್ದಾರೆ ಎಂದರು.

ಕಾನೂನು ಬಾಹಿರ ವಜಾವನ್ನು ತೆರವುಗೊಳಿಸಲು ಕಾನೂನಿನ ಮೂಲಕ ಹೋರಾಟ ಮಾಡಲು ಆರಂಭಿಸಿ ಕರ್ನಾಟಕ ಹೈಕೋರ್ಟ್‌ನಲ್ಲಿ ಈ ಸಂಬಂಧ ದಾವೆ ಹೂಡಲಾಯಿತು. ಅಲ್ಲಿಯೂ ಬಂದಿರುವ ಮಧ್ಯಂತರ ಆದೇಶವೂ ತಮ್ಮ ಮರು ನಿಯೋಜನೆಗೆ ತಿಳಿಸಿದೆ. ನ್ಯಾಯಾಲಯದ ಆದೇಶ ಪಾಲಿಸುತ್ತಿಲ್ಲ. ಹೀಗಾಗಿ ಅನಿವಾರ್ಯವಾಗಿ ತಾವೆಲ್ಲ ನ್ಯಾಯಾಂಗ ನಿಂದನೆ ಅರ್ಜಿ ಸಲ್ಲಿಸಲು ಚಿಂತನೆ ನಡೆಸಲಾಗಿದೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಡಾ.ಎನ್.ವಿ. ಅರ್ಚನಾ, ಡಾ.ರಾಜು, ಡಾ.ರವಿಶಂಕರ್, ಪ್ರೊ.ನಿತಿನ್ ಮತ್ತಿತರರು ಉಪಸ್ಥಿತರಿದ್ದರು.

ನ್ಯಾಯಾಲಯದಲ್ಲಿ ಪ್ರಕರಣ ವಿರುವುದರಿಂದ ಯಾವುದೇ ರೀತಿ ಪ್ರತಿಕ್ರಿಯೆ ನೀಡಲು ಸಾಧ್ಯವಿಲ್ಲ ಎಂದು ಸಂಸ್ಥೆಯ ಮೂಲಗಳು ತಿಳಿಸಿವೆ.

8 ವರ್ಷದ ಬಾಲಕಿ ಮೇಲೆ ಲೈಂಗಿಕ ದೌರ್ಜನ್ಯ: ಆರೋಪಿ ಬಂಧನ

ಬೆಂಗಳೂರು, ಜು.4– ಚಿಪ್ಸ್ ಪ್ಯಾಕೆಟ್ ಖರೀದಿಸಲು ಹೋದಾಗ ಎಂಟು ವರ್ಷದ ಬಾಲಕಿ ಮೇಲೆ ಅಂಗಡಿ ಮಾಲೀಕ ಲೈಂಗಿಕ ದೌರ್ಜನ್ಯ ಎಸಗಿದ್ದಾನೆ ಎಂದು ಪೊಲೀಸರು ಶುಕ್ರವಾರ ತಿಳಿಸಿದ್ದಾರೆ. ಬಾಗಲಕುಂಟೆ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಗುರುವಾರ ರಾತ್ರಿ 8 ಗಂಟೆ ಸುಮಾರಿಗೆ ಈ ಘಟನೆ ನಡೆದಿದೆ. ಘಟನೆ ನಂತರ ಆರೋಪಿಯನ್ನು ಬಂಧಿಸಲಾಯಿತು ಎಂದಿದ್ದಾರೆ. ಪೊಲೀಸರ ಪ್ರಕಾರ ಹುಡುಗಿ ಚಿಪ್ಸ್ ಪ್ಯಾಕೆಟ್ ಖರೀದಿಸಲು ತನ್ನ ಮನೆಯ ಹತ್ತಿರದ ಅಂಗಡಿಗೆ ಹೋಗಿದ್ದಳು. ಆಗ ಅಂಗಡಿಯಲ್ಲಿದ್ದ 25 ವರ್ಷದ ವ್ಯಕ್ತಿ, ಚಿಪ್ಸ್ ಪ್ಯಾಕೆಟ್ ಅನ್ನು ಪಕ್ಕದಲ್ಲಿರುವ ಗೋಡೌನ್‌ನಿಂದ ತರಬೇಕೆಂದು ಹೇಳಿದ್ದಾನೆ. ಚಿಪ್ಸ್ ನೀಡುವ ನೆಪದಲ್ಲಿ ಗೋಡೌನ್‌ಗೆ ಕರೆದೊಯ್ದು ತನ್ನ ಖಾಸಗಿ ಭಾಗಗಳನ್ನು ಮುಟ್ಟಿಸಿದ್ದಾನೆ ಎಂದು ಸಂತ್ರಸ್ತೆ ದೂರಿನಲ್ಲಿ ಆರೋಪಿಸಿದ್ದಾರೆ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ

ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್ ಅನ್ಯೋನ್ಯವಾಗಿದ್ದಾರೆ

- ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ಪ್ರತಿಕ್ರಿಯೆ
- ಸರ್ಕಾರದ ಬಗ್ಗೆ ಜನರ ಅಭಿಪ್ರಾಯ ಅರಿಯಲು ಸುರ್ಜೇವಾಲ ರಾಜ್ಯಕ್ಕೆ ಬಂದಿದ್ದರು

ಮೈಸೂರು, ಜು.4(ಎಂಟಿವೈ)– ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅನ್ಯೋನ್ಯವಾಗಿದ್ದು, ಬಿಜೆಪಿಗರು ಏನೇ ಪ್ರಯತ್ನ ಮಾಡಿದರೂ, ಇಬ್ಬರು ನಾಯಕರ ನಡುವೆ ಒಡಕುಂಟಾಗುವುದು ಸಾಧ್ಯವೇ ಇಲ್ಲ ಎಂದು ಕೃಷಿ ಸಚಿವ ಚಲುವರಾಯಸ್ವಾಮಿ ಸ್ಪಷ್ಟಪಡಿಸಿದರು.



ಚಾಮುಂಡಿಬೆಟ್ಟಕ್ಕೆ ಶುಕ್ರವಾರ ಆಗಮಿಸಿ, ದೇವಿಯ ದರ್ಶನ ಪಡೆದ ಬಳಿಕ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ವಿರೋಧ ಪಕ್ಷದ ನಾಯಕರು ಸಿಎಂ ಹಾಗೂ ಡಿಸಿಎಂ ವಿರುದ್ಧ ಮಾಡುತ್ತಿರುವ ಆರೋಪ ನಿರಾಧಾರದ್ದಾಗಿದೆ. ಮುಖ್ಯಮಂತ್ರಿ ಮತ್ತು ಉಪ ಮುಖ್ಯಮಂತ್ರಿ ಇಬ್ಬರು ಚೆನ್ನಾಗಿಯೇ ಇದ್ದಾರೆ. ಬಿಜೆಪಿಗರು ಏನೇ ಷಡ್ಯಂತರ ಮಾಡಿದರೂ ಭಿನ್ನಾಭಿಪ್ರಾಯ ಮೂಡುವುದಿಲ್ಲ ಎಂದರು.

ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಅವರು ಶಾಸಕರ ಅಭಿಪ್ರಾಯ ಸಂಗ್ರಹಿಸಿರುವ ಬಗ್ಗೆ ಕೇಳಿದ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ನಮ್ಮ ಸರ್ಕಾರ ಅಧಿಕಾರಕ್ಕೆ ಬಂದು ಎರಡು ವರ್ಷ ಆಗಿದೆ. ಜನಪರವಾಗಿ ನಮ್ಮ ಸರ್ಕಾರ ಕೆಲಸ ಮಾಡುತ್ತಿದೆ. ಹೆಚ್ಚಿನ ಕೆಲಸ ಮಾಡಲು ಜನರ ಅಭಿಪ್ರಾಯ ಹೇಗಿದೆ ಎಂದು ಶಾಸಕರನ್ನು ಕೇಳಲು ಬಂದಿದ್ದರು ಎಂದು ತಿಳಿಸಿದರು.

5 ವರ್ಷ ಸಿಎಂ ಆಗಿ ಮುಂದುವರೆಯುವುದಾಗಿ ಸಿಎಂ ಸಿದ್ದರಾಮಯ್ಯ ನೀಡಿರುವ ಹೇಳಿಕೆ ಸಂಬಂಧ ಪತ್ರ ಕರ್ತರು ಕೇಳಿದ ಪ್ರಶ್ನೆಗೆ ಉತ್ತರಿಸಿದ ಅವರು, ಈ ಬಗ್ಗೆ ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್ ಹಾಗೂ ಎಐಸಿಸಿ ನಡುವೆ ಮಾತುಕತೆ ನಡೆದಿರುವುದು ನಮಗೆ ಗೊತ್ತಿಲ್ಲ. ನಮ್ಮ ಸರ್ಕಾರ 5 ವರ್ಷ ಇರುತ್ತದೆ. ಪೂರ್ಣಾವಧಿ ಸಿಎಂ ಆಗಿ ಸಿದ್ದರಾಮಯ್ಯ ಅವರೇ ಮುಂದುವರಿಯಬೇಕಾ ಬೇಡವಾ ಎನ್ನುವುದನ್ನು ಹೈಕಮಾಂಡ್ ನಿರ್ಧಾರ ಮಾಡುತ್ತದೆ ಎಂದರು.

ಅನುದಾನ ತರಲಿ: ಮೈಸೂರಲ್ಲಿ ಇಲಾಖೆಯ ಕಾರ್ಯಕ್ರಮ ನಿಗಧಿಯಾಗಿರುವುದರಿಂದ ಮಂಡ್ಯದಲ್ಲಿ ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಅವರ ದಿಶಾ ಸಭೆಗೆ ಹೋಗಲು ಸಾಧ್ಯವಾಗುತ್ತಿಲ್ಲ. ಕೇಂದ್ರ ಸಚಿವರಾಗಿರುವ ಅವರು ಹೆಚ್ಚಿನ ಅನುದಾನ ತರಲಿ ಎಂದು ಆಶಿಸುತ್ತೇನೆ. ಕೇವಲ ಸಂಸದರ ಅನುದಾನವನ್ನು ಕ್ಷೇತ್ರದ ಅಭಿವೃದ್ಧಿಗೆ ನೀಡಿದರೆ ಸಾಕಾ?. ಸಂಸದರ ಅನುದಾನದಿಂದ ಆಟೋ ನಿಲ್ದಾಣಕ್ಕೆ 30ಲಕ್ಷ ಅನುದಾನ ಕೊಟ್ಟಿದ್ದಾರೆ. ಈ ಕೆಲಸವನ್ನು ಈ ಹಿಂದೆ ಸುಮಲತಾ ಅವರು ಮಾಡಿದ್ದರು. ನಮಗೂ, ಅವರಿಗೂ, ಶಾಸಕ, ಸಂಸದರಿಗೂ ಫಂಡ್ ಬರುತ್ತದೆ. ಅದನ್ನು ಎಲ್ಲರೂ ಖರ್ಚು ಮಾಡುತ್ತಾರೆ. ಆದರೆ ಕುಮಾರಸ್ವಾಮಿ ಜಿಲ್ಲೆಗೆ, ರಾಜ್ಯಕ್ಕೆ ದೊಡ್ಡ ಮಂತ್ರಿ ಇದ್ದಾರೆ. ಹಾಗಾಗಿ ಹೆಚ್ಚಿನ ಅನುದಾನ ತರಬೇಕು ಎಂದರು.

ಕೇಂದ್ರ ಸಚಿವರಾದ ಪ್ರಹ್ಲಾದ ಜೋಷಿ, ಹೆಚ್.ಡಿ.ಕುಮಾರಸ್ವಾಮಿ ಇಬ್ಬರು ಸೇರಿ ರಾಜ್ಯಕ್ಕೆ ಕೇಂದ್ರದಿಂದ ಬರಬೇಕಾದ ತೆರಿಗೆ ಪಾಲಿನ ಹಣ ಕೊಡಿಸಲು ಮುಂದಾಗಬೇಕು. ಅದನ್ನು ಬಿಟ್ಟು ಬರುವ ಎಂಪಿ ಫಂಡ್ ಬಳಕೆಗೆ ಮಾತ್ರ ಸೀಮಿತವಾಗುವುದರಲ್ಲಿ ವಿಶೇಷವೇನಿದೆ. ಏನಾದರೂ ವಿಶೇಷ ಅನುದಾನ ತಂದು ಅಭಿವೃದ್ಧಿ ಮಾಡಲಿ. ಅವರು ಏನೇ ಯೋಜನೆ ತಂದರೂ ನಮ್ಮ ಬೆಂಬಲ ಇರುತ್ತದೆ. ಅವರು ಕೇಂದ್ರ ಸಚಿವರಾಗಿ ಒಂದು ವರ್ಷ ಆಗಿದೆ. ಇನ್ನೂ ಸಮಯ ಇದೆ. ಜಿಲ್ಲೆಗೆ 25 ಸಾವಿರ ಕೋಟಿ ಅನುದಾನ ಕೊಡಿಸಲಿ. ಅವರು ಜಿಲ್ಲೆಗೆ ಯಾವುದೇ ಪ್ರಮುಖ ಯೋಜನೆ ತಂದರೆ ಅಭಿನಂದಿಸುತ್ತೇನೆ ಎಂದರು.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600+30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ಪ್ರವಾಸ
4 ದಿನಗಳ ಕಾಶಿ ಪ್ರವಾಸ 26/7/25,
5 ದಿನಗಳ ದೆಹಲಿ ಪ್ರವಾಸ 26/7/25,
8 ದಿನಗಳ ಗುಜರಾತ್ ಪ್ರವಾಸ 11/8/25
ಸುವರ್ಣ ಯಾತ್ರ
6360146483 / 9008381022

RERA APPROVED — RAI ESTATES — MUDA APPROVED
ಮೈಸೂರಿನ ಸುತ್ತ ರೈ ಎಸ್ಟೇಟ್ ನಿರ್ಮಿಸಿರುವ ಲೇಔಟ್‌ಗಳಲ್ಲಿ ಸೈಟ್ ಕೊಳ್ಳಲು ಸಂಪರ್ಕಿಸಿ
9448181488, 9945061604
#10, 1st Floor, New Sayyaji Rao Road, Bamboo Bazar, Mysuru - 570 001

ತಕ್ಷಣ ಬೇಕಾಗಿದ್ದಾರೆ
ಸೆಕ್ಯೂರಿಟಿ ಸೂಪರ್‌ವೈಸರ್
12 ಘಂಟೆ 15,000
ESI/PF ನೊಂದಿಗೆ
ಹೆಬ್ಬಾಳ್ ಮತ್ತು ಮೇಟಗಳ್ಳಿ ಇಂಡಸ್ಟ್ರಿಯಲ್ ಏರಿಯ. ಸಂಪರ್ಕಿಸಿ:
9035367083

ಸೈಟು ಬೇಕಾಗಿದೆ
40x60 Vidya Shankar Layout, JSS Layout 1st Stage. Corner site, middle site ಬೇಕಾಗಿದೆ. ಸಂಪರ್ಕಿಸಿ:
9844545718 / 9964675558

ಪ್ರವಾಸ
12-7-2025 ಗುಜರಾತ್, ಮಧ್ಯಪ್ರದೇಶ ನಾಲ್ಕು ಜ್ಯೋತಿರ್ಲಿಂಗ: 29-7-25
ದೆಹಲಿ, ಕಾಶಿ, ಅಯೋಧ್ಯೆ: –
ಮಲ್ಲಿಕಾರ್ಜುನ ಪ್ಯಾಕೇಜ್ ತುಮಕೂರು
ಮೊ: 8496044942

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 7204494854

GODOWN FOR RENT
1200 square feet, opposite to APMC, attached to Ring Road, Mysore. Contact:
Mob: 9886386698

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 8618373596

ವೃದ್ಧಾಶ್ರಮ
ಹಿರಿಯ ಜೀವಗಳಿಗೆ, ಹಾಸಿಗೆ ಹಿಡಿದ ವೃದ್ಧರನ್ನು, ಪಾರ್ಶ್ವವಾಯು ಪೀಡಿತರು, ಹಾಗೂ ಕೈಲಾಗದ ವಯೋ ವೃದ್ಧರನ್ನು ಮನೆಯಂತೆಯೇ ನೋಡಿಕೊಳ್ಳುತ್ತಿರುವ ಸಂಸ್ಥೆ ನಮ್ಮ ಮೈಸೂರಿನಲ್ಲಿ ಊಟ, ವಸತಿ, ವೈದ್ಯಕೀಯ ಸೌಲಭ್ಯದೊಂದಿಗೆ ಇಚ್ಛೆವುಳ್ಳವರು ಸಂಪರ್ಕಿಸಿ
9110455297 | 9591557126

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 6360485921

WANTED
Sales Manager - 5 members. Salary: Rs. 30,000 + ins. Mir. 2 years experience.
Sales Executive - 10 members. Salary: Rs. 20,000 + ins. Experience minimum 1 year.
Bogadi, Mysore. Contact:
Mob: 7348911669

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್ ಸೋಲಾರ್ ಸರ್ವೀಸ್
8197383645, 9632560588

ಸೋಲಾರ್ ಸರ್ವೀಸ್ ಅನ್ನು ಕಂಪನಿ ಕಡೆಯಿಂದ ರೂ. 700 ಗೆ 1–7–2025 ರಿಂದ 1–08–2025 ರವರೆಗೆ ಮಾಡಿಕೊಡಲಾಗುತ್ತದೆ.
Mob: 9008711654

SITES FOR SALE
30x40, 30x50
Near Srirampura Ring Road
MUDA Approved
Mob: 8296832513

ಸುವರ್ಣಾವಕಾಶ
ಪ್ರಸಿದ್ಧ ಶೋರೂಂ ಮತ್ತು ಕಂಪನಿ & ವರ್ಕ್ ಫ್ರಮ್ ಹೋಂ ಕೆಲಸಕ್ಕೆ, ಯುವಕರು ಮತ್ತು ಯುವತಿಯರು ಬೇಕಾಗಿದ್ದಾರೆ. 22,000 ಸಂಬಳ. 100% ಗ್ಯಾರಂಟಿ ಕೆಲಸ. ಸಂಪರ್ಕಿಸಿ:
9482369816 / 9482360136

WANTED
Moneyfiest royal Pvt. Ltd., Bogadi, Mysore.
•Team Leader: 5 members. Salary 25,000. Exp. in Loans field
•Telecaller: 10 members. Salary: 18,000. Exp: more than 1 year.
Mob: 7348911669

FOR SALE
1. 20x30 Houses @ Kuvempunagar, Aravind Ngr
2. 30x40 MUDA Approved Sites attached to KHB Kenchalgud, HD Kote Road
3. 30x40 Site Near Nypunya School, RT Nagar
4. 30x40 Sites Near RT Nagar BSNL Layout @ Just 20 Lakhs
5. 30x40 G+2 House @ Hebbal
PRAKRUTHI PROPERTIES
95386 90359, 90359 90359

WANTED
ಮೈಸೂರಿನ ಪ್ರಸಿದ್ಧ ಎಂಎನ್‌ಸಿ ಕಂಪನಿಗಳಿಗೆ 7th, 9th, 10th, PUC, Any Degree, M.Com., BE, MBA ಆದವರಿಗೆ Data Entry, HR, Admin, Cashier, Billing, Receptionist, Telecalling & Packing, Helper, Drivers, Quality Checking ಇತ್ಯಾದಿ ಕೆಲಸಗಳಿಗೆ ಯುವಕ, ಯುವತಿಯರು ಬೇಕಾಗಿದ್ದಾರೆ. ಸಂಬಳ: 18000 ರಿಂದ 45,000 + ESI, PF, OT ನೊಂದಿಗೆ. ಸಂಪರ್ಕಿಸಿ:
9916641959 / 9964977103

ಮೈಸೂರು ತಾಲ್ಲೂಕು ಜೈಪುರ ಹೋಬಳಿ ಹಾಗೂ ಹಂಪಾಪುರ ಹೋಬಳಿಗಳಲ್ಲಿ 1 ಎಕರೆ 9 ಗುಂಟೆ 32 ಗುಂಟೆ, 35 ಗುಂಟೆ ಮತ್ತು ತೆಂಗಿನ ತೋಟ ಹಾಗೂ ಮಾವಿನ ತೋಟಗಳು ಮಾರಾಟಕ್ಕಿದೆ.
ಸಂಪರ್ಕಿಸಿ:
Mob: 9945661696

WANTED
Helper and Sales Boys and Girls to work in a Sports Store (full time / part time) in Mysuru.
Full time: 10 am to 8 pm.
Part time: 5 pm to 9.30 pm.
7760109047 or 8105368325

ಬೇಕಾಗಿದ್ದಾರೆ
ಮನೆ ಕೆಲಸ ಮಾಡಲು ಮಹಿಳೆಯರು ಬೇಕಾಗಿದ್ದಾರೆ. ಸಮಯ ಬೆಳಿಗ್ಗೆ. ಸ್ಥಳ: ವಿಜಯನಗರ 2ನೇ ಹಂತ, ಮೈಸೂರು.
Mob: 9448055467

ಸೈಟು ಬೇಕಾಗಿದೆ
ಚಿಕ್ಕಹಳ್ಳಿ, ವಾಜಮಂಗಲ, ವರುಣ ಜೆಎಸ್‌ಎಸ್ 3ನೇ ಹಂತ, ವರುಣ ಬಸವೇಶ್ವರ, ನಿರ್ಮಾಣ್, ಲಲಿತಾದ್ರಿ ನಗರ ಹಾಗೂ ಪೊಲೀಸ್ ಲೇಔಟ್ ಅಕ್ಕಪಕ್ಕದ ಬಡಾವಣೆಗಳಲ್ಲಿ. ಟಿ.ನರಸೀಪುರ ರಸ್ತೆ, ಬನ್ನೂರು ರಸ್ತೆ. ಸಂಪರ್ಕಿಸಿ:
Mob: 9686071750

10,000 ಅಡಿ ಖಾಲಿ ಜಾಗ ಬಾಡಿಗೆಗೆ ದೊರೆಯುತ್ತದೆ. ವಿಜಯನಗರ 2ನೇ ಹಂತ, ವಾಟರ್ ಟ್ಯಾಂಕ್ ಪಕ್ಕ. ಬ್ರೋಕರ್ ಕ್ಷಮಿಸಿ.
Mob: 9448978383

LAND FOR SALE & FOR PURCHASE
Lands for Sale & purchase at Jayapura Hobli, Hampapura Hobli, Hullahalli Hobli & Gaddige Main Road, Mysore Taluk. Contact:
9945661696 / 9663793666

SITE FOR SALE
ನಮೂನೆ '3' 82x33 ಉಳ್ಳ ಸೈಟು ಮಾರಾಟಕ್ಕಿದೆ. BEML ಸರ್ಕಲ್‌ನಿಂದ 1 ಕಿ.ಮೀ. ಕೂರ್ಗಳ್ಳಿ, ಮೈಸೂರು. ಸಂಪರ್ಕಿಸಿ
Mob: 9902634441

AFFIDAVIT
My name has seen mentioned as 'Swarupini L.' in my all documents including Aadhar Card, Pan Card & Educational Records. But my name has been mentioned as "Swarupa" in the documents which are issued by Mysore Urban Development Authority, pertains to Site No. 8951, Vijayanagar 4th Stage, 2nd Phase, Mysuru. I further swear that, 'Swarupini. L' & "Swarupa" belongs to one and the same person i.e., myself.
Sd/- Swarupini. L

CHANGE OF NAME
I, Pon. Nivedhitha G., D/o Giri. P, resident at Door No. #159, 'A' Block, 19th Cross, Near Sapthamathrika Temple, Vijayanagar 3rd Stage, Mysuru-570 030, hence I declared that I have changed my name from Pon. Niveditha G. to Pon. Nivedhitha G. vide affidavit sworn in front of Notary C. Mangala on 30-6-2025.
Sd/- Pon. Nivedhitha. G

ಹೆಸರು ಬದಲಾವಣೆ
ಮೈಸೂರು ಜಿಲ್ಲೆ ಟಿ.ನರಸೀಪುರ ತಾಲ್ಲೂಕು, ಬನ್ನೂರು ಹೋಬಳಿ, ತ್ಯಾಗರಾಜ ಮೊಹಲ್ಲಾ, ಎಸ್.ಆರ್.ಪಿ. ರಸ್ತೆ, ವಾರ್ಡ್ ನಂಬರ್ 5ರಲ್ಲಿ ವಾಸವಾಗಿರುವ ಸೈಯದ್ ಷಫೀರ್ ಅಹಮದ್‌ರವರ ಮಗನಾದ ಸೈಯದ್ ಸಯೀದ್ ಅಹಮದ್ ಆದ ನಾನು ತಿಳಿಸುವುದೇನೆಂದರೆ ನನ್ನ ಹೆಸರನ್ನು ಸೈಯದ್ ಸಯೀದ್ ಅಹಮದ್ ಇಂದ ಸಮೀರ್ ರೈ ಎಂಬ ಹೆಸರಿಗೆ ಬದಲಾಯಿಸಿ ನೋಟರಿ ಸಿ.ಆರ್. ಸೀತಾರಾಮ್ ರವರ ಸಮ್ಮುಖದಲ್ಲಿ ಪ್ರಮಾಣೀಕರಿಸುತ್ತೇನೆ. ದಿನಾಂಕ: 4–7–25. ಸ್ಥಳ: ಮೈಸೂರು.

SITES FOR SALE
30x50, 40x60
Near Srirampura Ring Road, Mysuru
Mob: 8050345574

WANTED - ಬೇಕಾಗಿದ್ದಾರೆ
ಮೈಸೂರು ಮೇಟಗಳ್ಳಿ ಇಂಡಸ್ಟ್ರಿಯಲ್ ಏರಿಯದಲ್ಲಿರುವ ಕಂಪನಿಗೆ ಕೆಲಸ ಮಾಡಲು ಹುಡುಗ ಮತ್ತು ಹುಡುಗಿಯರು ಬೇಕಾಗಿದ್ದಾರೆ ವಯಸ್ಸು 18 ರಿಂದ 30. ಸಂಬಳ:
SSLC and PUC 13773+ Allowance
ITI - 16500+ Allownace
ಸಂಪರ್ಕಿಸಿ KOMAL ENTERPRISES
ಸುಷ್ಮಾ 7892725603, 8971460235

ವಧು–ವರಾನ್ವೇಷಣೆ
ಒಕ್ಕಲಿಗ / ಕುರುಬ / ಲಿಂಗಾಯತ / ನಾಯಕ / SC & ಎಲ್ಲಾ ಜಾತಿಯ ವಧು–ವರರಿಗಾಗಿ ಕೂಡಲೇ ಸಂಪರ್ಕಿಸಿ:
(2nd Marriages also)
Mob: 9343175000

ಮಾರುತಿ ವ್ಯಾನ್ (ಓಮ್ನಿ) ಮಾರಾಟ ಮಾಡುವವರು ಇದ್ದರೆ ಇಂದೇ ಸಂಪರ್ಕಿಸಿ:
Mob: 9482062226

WANTED
EXPERIENCED LECTURER For PU and Degree College Computer Science: MCA/MSc CS and BE CS.
Contact:
8310481554 / 8453572238
Job Location -HD Kote/MYSURU

ಕಳೆದಿದೆ
ಪಿ.ಆರ್. ಮೋಹನ್ ಆದ ನನ್ನ ಕೆಹೆಚ್‌ಬಿ ನಿವೇಶನ ಸಂಖ್ಯೆ 1501 ಬ್ಲಾಕ್ 2ರ ನೊಂದಾಯಿಸಬೇಕಾಗಿದ್ದ ಪತ್ರ ಕಳೆದುಹೋಗಿದೆ. ಸಿಕ್ಕದಲ್ಲಿ ಕೆಳಕಂಡ ದೂರವಾಣಿ ಕರೆ ಮಾಡತಕ್ಕದ್ದು. Mob: 9591582993



ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

ಫಾಸ್ಟ್ ಫುಡ್ ಆಟೋ ಮಾರಾಟಕ್ಕಿದೆ ಹಾಗೂ ನಂಜನಗೂಡು ಮತ್ತು ಚಾಮರಾಜನಗರ ಹೈವೇ ರೋಡಲ್ಲಿ ಭೂ ಪರಿವರ್ತನೆ ಭೂಮಿ ಲೀಸ್ + ಬಾಡಿಗೆಗೆ ದೊರೆಯುತ್ತದೆ. ಸಂಪರ್ಕಿಸಿ:
ಆರಾಧ್ಯರು, 9164314560

SITES FOR SALE
30x40,30x50,40x60
MUDA Approved Sites,
1 Kms from Adithya Circle,
Dattagalli, Kergalli, Mysore,
Ready For Registration
8660105902

SITE FOR SALE IN MYSORE
MUDA Site
Devanur 3rd Stage,
Site No. 3139
20x30 West Face
Mob: 9535556496

ಸೈಟುಗಳನ್ನು ಕೊಳ್ಳಲು / ಮಾರಲು
ಸೈಟುಗಳು ಮಾರಾಟಕ್ಕಿದೆ.
ಸಂಪರ್ಕಿಸಿ:
Mob: 9538412881

WANTED
Lodge / PG
Minimum 8 to 10 rooms in Mysore City.
(Agents excuse)
Mob: 9243053999

ಬೇಕಾಗಿದ್ದಾರೆ
ಆಫೀಸ್ ಅಸಿಸ್ಟೆಂಟ್ (ಮಹಿಳೆ)
(part time/ full time job)
(MS OFFICE / WORD / EXCEL / TALLY / (2-5 YEARS EXP)
ಸೆಕ್ಯೂರಿಟಿಗಾರ್ಡ್ – 5 ನಂ. ಹೌಸ್ ಕೀಪಿಂಗ್ – 5 ನಂ. ಸಂಬಳ – 15,000/– (ವಯಸ್ಸು 25 – 35)
ಸಂಪರ್ಕಿಸಿ - (10AM TO 6PM)
CALL - 99007 49104
WhatsApp - 90367 45292

ಶೇಖರ್ ಗೋಲ್ಡ್ ಕಂಪನಿ ನಂಬಿಕೆಗೆ ಮತ್ತೊಂದು ಹೆಸರು
ನೀವು ಗಿರವಿ ಇಟ್ಟಿರುವ ಚಿನ್ನವನ್ನು, ಇಂದಿನ ಆನ್ ಲೈನ್ ದರಕ್ಕೆ ನಿಮ್ಮ ಸ್ಥಳದಲ್ಲಿ ಮಾರಾಟ ಮಾಡಬೇಕೇ ? ಸಂಪರ್ಕಿಸಿ:
Mob: 9964068899

ನಿವೇಶನ ಮಾರಾಟಕ್ಕೆ ಇದೆ
ಮೈಸೂರು ತಾಲ್ಲೂಕು ವರುಣಾ ಹೋಬಳಿ ಯಾಂದಳ್ಳಿ ಗ್ರಾಮದ ಕೆ.ಬಿ.ಎಲ್ ಗ್ರೀನ್‌ವುಡ್ ಬಡಾವಣೆಯಲ್ಲಿರುವ ಪಶ್ಚಿಮಾಭಿಮುಖವಾಗಿರುವ 30x50 ಅಡಿ ಅಳತೆಯ ನಿವೇಶನವು ಮಾರಾಟಕ್ಕೆ ಲಭ್ಯವಿದೆ. ಸಂಪರ್ಕಿಸಿ:
Mob: 9480231701

JOB OPENING
ANNOUNCEMENT
*Exciting opportunity for FEMALE CANDIDATES
We're Hiring RECEPTIONISTS.
Contact Us for more details:
SUKSHEMA SERVICE HUB
Call: 70907 01234

ಬೇಕಾಗಿದ್ದಾರೆ
ಪೆಟ್ರೋಲ್ ಬಂಕ್‌ನಲ್ಲಿ ಕೆಲಸ ಮಾಡಲು ಫುಲ್ ಟೈಮ್ ಹೌಸ್‌ಕೀಪಿಂಗ್ ಬೇಕಾಗಿದ್ದಾರೆ. ಸಂಬಳ: 10,000. ಸಂಪರ್ಕಿಸಿ:
Mob: 8892258814

ಕೆಲಸಕ್ಕೆ ಬೇಕಾಗಿದ್ದಾರೆ
Omini Car ಗೆ ಡ್ರೈವರ್ ಬೇಕಾಗಿದ್ದಾರೆ.
ಆಕರ್ಷಕ ಸಂಬಳ ನೀಡಲಾಗುವುದು.
ಸ್ಥಳ: ತ್ರಿವೇಣಿ ಸರ್ಕಲ್, ಡಾ॥ ರಾಜ್‌ಕುಮಾರ್ ರಸ್ತೆ. ಸಂಪರ್ಕಿಸಿ:
Mob: 8861221755

ಮನೆಯಿಂದಲೇ ಕೆಲಸ
ಗೃಹಿಣಿಯರು, ವಿದ್ಯಾರ್ಥಿಗಳು, ವಯಸ್ಕರು ನಿಮ್ಮ ಬಿಡುವಿನ ವೇಳೆಯಲ್ಲಿ ಕುಳಿತು ಬುಕ್ ರೈಟಿಂಗ್, ಫಾರಂ ಫಿಲ್ಲಿಂಗ್, ಡಾಟ ಎಂಟ್ರಿ, ವಾಟ್ಸಪ್ ಟೈಪಿಂಗ್, ಫ್ಲವರ್ ಪ್ಯಾಕಿಂಗ್, ಜ್ಯುವೆಲರಿ ಪ್ಯಾಕಿಂಗ್ ಹಾಗೂ ಕರಕುಶಲ ವಸ್ತುಗಳ ಪ್ಯಾಕಿಂಗ್. ಕೆಲಸಗಳು ಲಭ್ಯ–ಬಿಡುವಿನ ವೇಳೆಯಲ್ಲಿ ಕೆಲಸ ಮಾಡಿ ಗಳಿಸಿ ತಿಂಗಳಿಗೆ 20000 ದಿಂದ 35000ದವರೆಗೆ
8095078968 (Divya)

NORTH EAST CONSTRUCTIONS
"Turn your Dream into Address"
We undertake all types of Civil Works, including:-
- Residential Construction
- Commercial Construction
- Industrial Construction
- Repair Works
- Renovation
- Architecture
- Structural Design
- Interior Design
- Material Supply

Call: 76193 99919

ಕೆಲಸಕ್ಕೆ ಬೇಕಾಗಿದ್ದಾರೆ
ಶ್ರೀರಂಗಪಟ್ಟಣದ ಪಾಲಹಳ್ಳಿ ಬಳಿಯ ಎಚ್.ಎಂ.ರೆಸಾರ್ಟ್‌ಗೆ ಸೆಕ್ಯೂರಿಟಿಗಾರ್ಡ್ ಹಾಗೂ ಮಹಿಳಾ ರಿಸೆಪ್ಷನಿಸ್ಟ್ ಬೇಕಾಗಿದ್ದಾರೆ. ಆಸಕ್ತರು ಸಂಪರ್ಕಿಸಿ
ಮೊ: 8861135155 /9606035310

SITE FOR SALE
30x40 E/F, 32 Lakhs
30x50 E/F, 40 Lakhs
Bhoomika P R Valley, Ilvala
30x40 S/F, 23 Lakhs
Rajeev Township
Contact: 8861220989

HOUSE FOR LEASE
40x60 N/F
Independent House
For Lease at Gokulam
1st stage, 6th Cross.
Contact: 9481940921

ಜಮೀನು ಮಾರಾಟ ಮಾಡಲು / ಕೊಳ್ಳಲು
ಪಾಂಡವಪುರ, ಶ್ರೀರಂಗಪಟ್ಟಣದಲ್ಲಿ ಜಮೀನು ಮಾರಾಟ ಮಾಡಲು ಅಥವಾ ಕೊಂಡುಕೊಳ್ಳಲು ಕರೆ ಮಾಡಿ
9901396297, 8496000727
To Sell or buy farm land in Pandavapura or Srirangapatna.
9901396297, 8496000727

ಮೈಸೂರು ಮಿತ್ರ 46
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತು ಗಳು ವಿಶ್ವಾಸಪೂರ್ಣವೇ ಆದರೂ ಅವು ಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಗ್ರಾಮೀಣ ಕೆರೆ-ಕಟ್ಟೆ, ಸ್ಮಶಾನದ ಅಭಿವೃದ್ಧಿಗೆ ಒತ್ತು ನೀಡಿ

ಕೆಡಿಪಿ ಸಭೆಯಲ್ಲಿ ಅಧಿಕಾರಿಗಳಿಗೆ ಶಾಸಕ ದರ್ಶನ್ ಸೂಚನೆ



ಶುಕ್ರವಾರ ನಡೆದ ಕೆಡಿಪಿ ಸಭೆಯನ್ನುದ್ದೇಶಿಸಿ ಶಾಸಕ ದರ್ಶನ್ ಮಾತನಾಡಿದರು.

ನಂಜನಗೂಡು, ಜು.4– ಗ್ರಾಮೀಣ ಪ್ರದೇಶಗಳಲ್ಲಿರುವ ಸಾರ್ವಜನಿಕ ಸ್ಮಶಾನ, ಕೆರೆ-ಕಟ್ಟೆ ಮತ್ತು ರೈತರು ತಿರುಗಾಡುವ ಜಮೀನಿನ ರಸ್ತೆಗಳ ಅಭಿವೃದ್ಧಿಗೆ ಒತ್ತು ನೀಡಬೇಕು ಎಂದು ಕಂದಾಯ ಇಲಾಖೆ ಅಧಿಕಾರಿಗಳಿಗೆ ಶಾಸಕ ದರ್ಶನ್ ಸೂಚಿಸಿದರು.

ಶುಕ್ರವಾರ ನಗರದ ತಾಪಂ ಸಭಾಂಗಣದಲ್ಲಿ ನಡೆದ ತ್ರೈಮಾಸಿಕ ಕೆಡಿಪಿ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿದ ಅವರು, ಕಂದಾಯ ಇಲಾಖೆಯ ಕೆಲಸ ಕಾರ್ಯಗಳಿಗೆ ಸಾರ್ವಜನಿಕರು ಆಗಮಿಸಿದಾಗ ವಿಳಂಬ ಮಾಡಬಾರದು. ಅಧಿಕಾರಿಗಳು ಜಾಗೃತಿಯಿಂದ ಕಾರ್ಯ ನಿರ್ವಹಿಸಿ ಪ್ರಾಮಾಣಿಕವಾಗಿ ಜನರ ಸೇವೆ ಮಾಡಬೇಕು. ಅಲ್ಲದೇ ರಾಜ್ಯ ಸರ್ಕಾರದಿಂದ ತಾಲೂಕಿನ ಅಭಿವೃದ್ಧಿಗೆ ನೂರಾರು ಕೋಟಿ ಹಣ ಬಿಡುಗಡೆಯಾಗುತ್ತಿದೆ. ಅದನ್ನು ಸದ್ಬಳಕೆ ಮಾಡಿಕೊಂಡು ಕ್ಷೇತ್ರದ ಅಭಿವೃದ್ಧಿ ಕಾರ್ಯ ನಡೆಸಬೇಕು ಎಂದರು.

ನೀರಾವರಿ ಇಲಾಖೆ ಅಧಿಕಾರಿಗಳ ಬೇಜವಾಬ್ದಾರಿಯಿಂದಾಗಿ ನಾಲಾ ಏರಿಗೆ ಸೇರಿದ ಮಣ್ಣನ್ನು ಅಕ್ರಮವಾಗಿ ಸಾಗಿಸುತ್ತಿರುವ ಆರೋಪ ಕೇಳಿ ಬಂದಿದೆ. ಆದರೆ ಈವರೆಗೂ ಪೊಲೀಸರು ದೂರು ದಾಖಲಿಸದಿರುವ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿದ ಶಾಸಕರು, ತಕ್ಷಣ ಎಚ್ಚೆತ್ತುಕೊಂಡು ತಪ್ಪಿತಸ್ಥರ ವಿರುದ್ಧ ಕ್ರಮಕ್ಕೆ ಮುಂದಾಗಬೇಕು. ಇಲ್ಲವಾದಲ್ಲಿ ನೀರಾವರಿ ಇಲಾಖೆ ಅಧಿಕಾರಿಗಳ ವಿರುದ್ಧ ಕ್ರಮಕ್ಕೆ ಶಿಫಾರಸ್ಸು ಮಾಡುವುದಾಗಿ ಸಭೆಯಲ್ಲಿ ಹಾಜರಿದ್ದ ನೀರಾವರಿ ಇಲಾಖೆ ಇಂಜಿನಿಯರ್ ದರ್ಶನ್ ಅವರಿಗೆ ಎಚ್ಚರಿಸಿದರು.

ಹುರ ವ್ಯಾಪ್ತಿಯ ಕೆರೆಗಳಿಗೆ ನೀರು ತುಂಬಿಸುವ ಹುರ ಏತ ನೀರಾವರಿ ಯೋಜನೆ ಕಾಮಗಾರಿ 2017ರಲ್ಲಿ ಪ್ರಾರಂಭವಾಗಿದ್ದು, ಈವರೆಗೂ ಮುಗಿಯದಿರುವ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದ ಅವರು ತ್ವರಿತವಾಗಿ ಕಾಮಗಾರಿ ಪೂರ್ಣಗೊಳಿಸಲು ಕ್ರಮ ಕೈಗೊಳ್ಳುವಂತೆ ಸಣ್ಣ ನೀರಾವರಿ ಇಲಾಖೆ ಅಧಿಕಾರಿಗಳಿಗೆ ಸೂಚಿಸಿದರು.

ಉಳಿದಂತೆ ಶ್ರೀಕಂಠೇಶ್ವರಸ್ವಾಮಿ ದೇವಾಲಯದಲ್ಲಿ ಬೆಳ್ಳಿ ರಥ ನಿರ್ಮಾಣ ಕಾಮಗಾರಿ ತ್ವರಿತವಾಗಿ ಪೂರ್ಣಗೊಳಿಸುವುದು. ಗ್ರಾಮೀಣ ಪ್ರದೇಶದಲ್ಲಿ ಅಕ್ರಮ ಮದ್ಯ ಮಾರಾಟ ತಡೆಗಟ್ಟಲು ಕ್ರಮ ಕೈಗೊಳ್ಳುವಂತೆ ಅಬಕಾರಿ ಇಲಾಖೆ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಕೆಡಿಪಿ ಸಭೆಯಲ್ಲಿ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ತಾಲೂಕು ಅಧ್ಯಕ್ಷ ಕೆ.ಮಾರುತಿ, ನಗರಸಭಾಧ್ಯಕ್ಷ ಶ್ರೀಕಂಠಸ್ವಾಮಿ, ತಹಸೀಲ್ದಾರ್ ಶಿವಕುಮಾರ್ ಕಾಸ್ನೂರು, ತಾಪಂ ಇಓ ಜೆರಾಲ್ಡ್ ರಾಜೇಶ್, ಟಿಎಪಿಸಿಎಂಎಸ್ ಅಧ್ಯಕ್ಷ ಕುರಹಟ್ಟಿ ಮಹೇಶ್, ಹಗಿನವಾಳು ಚೆನ್ನಪ್ಪ, ತಾಲೂಕು ಮಟ್ಟದ ಎಲ್ಲಾ ಇಲಾಖೆ ಅಧಿಕಾರಿಗಳು ಭಾಗವಹಿಸಿದ್ದರು.

ಉದ್ದೂರ್ ಕಾವಲ್ ಗ್ರಾಪಂಗೆ ಮೀನಾ ಅಧ್ಯಕ್ಷೆ

ಉದ್ದೂರ್ ಕಾವಲ್ ಗ್ರಾಪಂ ನೂತನ ಅಧ್ಯಕ್ಷೆ ಮೀನಾ ಅವರನ್ನು ಮುಖಂಡರು ಅಭಿನಂದಿಸಿದರು.



ಹುಣಸೂರು, ಜು.4– ತಾಲೂಕಿನ ರತ್ನಪುರಿ ಗ್ರಾಮದ ಉದ್ದೂರ್ ಕಾವಲ್ ಗ್ರಾಪಂ ನೂತನ ಅಧ್ಯಕ್ಷೆಯಾಗಿ ಮೀನಾ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಈ ಹಿಂದಿನ ಅಧ್ಯಕ್ಷೆ ಪದ್ಮಮ್ಮ ಅವರ ರಾಜೀನಾಮೆಯಿಂದ ಅಧ್ಯಕ್ಷ ಸ್ಥಾನಕ್ಕೆ ಶುಕ್ರವಾರ ನಡೆದ ಚುನಾವಣೆಯಲ್ಲಿ ಮೀನಾ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿ, ಸಿಡಿಪಿಓ ಹರೀಶ್ ಘೋಷಿಸಿದರು. ಈ ವೇಳೆ ಪಿಡಿಓ ಅರುಣ್ ಇದ್ದರು.

ನೂತನ ವರಿಷ್ಠರನ್ನು ಅಭಿನಂದಿಸಿ ಮಾತನಾಡಿದ ಹುಡಾ ಅಧ್ಯಕ್ಷ ಹೆಚ್.ಪಿ. ಅಮರ್‌ನಾಥ್, ಅಧ್ಯಕ್ಷರು ಹಾಗೂ ಜನಪ್ರತಿನಿಧಿಗಳು ಸಾರ್ವಜನಿಕರ ಸಹಕಾರ ಪಡೆದು ಗ್ರಾಮಗಳ ಅಭಿವೃದ್ಧಿಗೆ ಶ್ರಮಿಸಿ ಎಂದರು.

ನೂತನ ಅಧ್ಯಕ್ಷೆ ಮೀನಾ ಮಾತನಾಡಿ, ಎಲ್ಲಾ ಸದಸ್ಯರ ಸಹಕಾರ ಪಡೆದು ಗ್ರಾಮಗಳ ಅಭಿವೃದ್ಧಿಗೆ ಶ್ರಮಿಸುತ್ತೇನೆ ಎಂದರು. ಚುನಾವಣೆಯಲ್ಲಿ ಮಾಜಿ ಅಧ್ಯಕ್ಷ ವೀರಭದ್ರಸ್ವಾಮಿ, ನಂದೀಶ್, ಮುಬಾರಕ್ ಬಾನು, ಸದಸ್ಯರಾದ ಗೋವಿಂದಶೆಟ್ಟಿ, ರಾಮಬೋವಿ, ಮನುಕುಮಾರ್, ರತ್ನಮ್ಮ, ಶೋಭಾ, ಪವಿತ್ರ, ಗೌರಮ್ಮ, ವಿಜೇಂದ್ರಕುಮಾರ್, ಅಲ್ತಾಪ್ ಫರೀಪ್ ಸೇರಿದಂತೆ ಇತರರಿದ್ದರು.

ಈ ವೇಳೆ ಮಾಜಿ ಜಿಪಂ ಸದಸ್ಯ ಡಿ.ಕೆ.ಕುನ್ನೇಗೌಡ, ಮಾಜಿ ತಾಪಂ ಸದಸ್ಯ ಅಜ್ಗರ್ ಪಾಷ, ಪ್ರಭಾಕರ್, ಮಾಜಿ ಗ್ರಾಪಂ ಸದಸ್ಯರಾದ ಶರವಣ, ಶಿವಣ್ಣ, ಜವರನಾಯಕ, ಕಾಳೇಗೌಡ, ಮುಖಂಡರಾದ ದೀಪು, ಸುರೇಶ್, ಮೋಹನ್, ದಯಾನಂದ್ ಸೇರಿದಂತೆ ಇತರರಿದ್ದರು.

ಹಾಡಹಗಲೇ ಹುಲಿ ದಾಳಿಗೆ ಹಸು ಬಲಿ


ಹುಲಿ ದಾಳಿಗೆ ಹಸು ಗಾಯಗೊಂಡಿರುವುದು.

ಮಲ್ಕುಂಡಿ, ಜು.4– ಹಾಡಹಗಲೇ ಹುಲಿ ದಾಳಿಗೆ ಹಸು ಬಲಿಯಾಗಿರುವ ಘಟನೆ ಇಲ್ಲಿಗೆ ಸಮೀಪದ ಮಡುವಿನ ಹಳ್ಳಿ ಗ್ರಾಮದಲ್ಲಿ ನಡೆದಿದೆ.

ಗ್ರಾಮದ ನಿಜಲಿಂಗಮೂರ್ತಿ ಅವರಿಗೆ ಸೇರಿದ ಹಸು ಬಲಿಯಾಗಿರುವುದು. ನಿಜಲಿಂಗಮೂರ್ತಿ ಹಾಗೂ ಮಹೇಶ್ ಗ್ರಾಮದ ಹೊರವಲಯದಲ್ಲಿ ತಮ್ಮ ಹಸುಗಳನ್ನು ಮೇಯಿಸುತ್ತಿದ್ದ ವೇಳೆ ಏಕಾಏಕಿ ದಾಳಿ ಮಾಡಿದ ಹುಲಿ 1 ಹಸುವನ್ನು ಬಲಿ ಪಡೆದು ಅರೆಬರೆ ತಿಂದು, ಮತ್ತೆರಡು ಹಸುಗಳನ್ನು ಗಾಯಗೊಳಿಸಿ ಪರಾರಿಯಾಗಿದೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಅರಣ್ಯ ಇಲಾಖೆ ಅಧಿಕಾರಿಗಳು ಪರಿಶೀಲನೆ ನಡೆಸಿದರು. ಬಳಿಕ ಹುಲಿ ಸೆರೆಗೆ ಬೋನ್ ಹಾಗೂ ಕ್ಯಾಮರಾ ಅಳವಡಿಸಿ ಆದಷ್ಟು ಬೇಗ ಹುಲಿ ಸೆರೆ ಹಿಡಿಯಲಾಗುವುದು ಎಂದು ಭರವಸೆ ನೀಡಿದರು.

ಈ ಘಟನೆಯಿಂದ ರೈತರು ತಮ್ಮ ಜಮೀನುಗಳಿಗೆ ಹೋಗಲು ಭಯಗೊಂಡಿದ್ದಾರೆ. ಅಲ್ಲದೇ ಜಾನುವಾರುಗಳನ್ನು ನಂಬಿ ಜೀವನ ನಡೆಸುತ್ತಿದ್ದು, ಆದಷ್ಟು ಬೇಗ ಹುಲಿ ಸೆರೆಗೆ ಮುಂದಾಗಬೇಕು. ಅಲ್ಲದೇ ಹಸು ಕಳೆದುಕೊಂಡು ರೈತನಿಗೆ ಸರ್ಕಾರದಿಂದ ಸೂಕ್ತ ಪರಿಹಾರ ನೀಡಬೇಕು ಎಂದು ಗ್ರಾಮಸ್ಥರು ಒತ್ತಾಯಿಸಿದರು.

ಡಾ.ಫ.ಗು.ಹಳಕಟ್ಟಿಯವರಿಂದ ಶರಣರ ವಚನ ಸಂರಕ್ಷಣೆ

ಜಿಲ್ಲಾ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಹೆಳವರಹುಂಡಿ ಸಿದ್ದಪ್ಪ



ಕಾರ್ಯಕ್ರಮದಲ್ಲಿ ಜಿಲ್ಲಾ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಸಿದ್ದಪ್ಪ ಮಾತನಾಡಿದರು.

ತಿ.ನರಸೀಪುರ, ಜು.4– ಶರಣ ಸಾಹಿತ್ಯ ಪರಿಷತ್ ರಾಜೇಂದ್ರ ಶ್ರೀಗಳ ಕನಸಿನ ಕೂಸಾಗಿತ್ತು. ಅವರ ಆಶಯಕ್ಕೆ ಇಂಬು ಕೊಡುತ್ತಾ ಪ್ರಸ್ತುತ ಶ್ರೀಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅವರು ವಚನ ಸಾಹಿತ್ಯದ ಬಗೆಗಿನ ಅಭಿಮಾನ ಹಾಗೂ ಕಾಳಜಿಯಿಂದ ಎಲ್ಲೆಡೆ ದತ್ತಿ ಸ್ಥಾಪಿಸಿ ಸಕಾಲದಲ್ಲಿ ಬಸವಾದಿ ಶರಣರ ಸ್ಮರಿಸಲು ಅನುವು ನೀಡುತ್ತಿರುವುದು ನಮ್ಮೆಲ್ಲರ ಸೌಭಾಗ್ಯವೇ ಸರಿ ಎಂದು ಜಿಲ್ಲಾ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಹೆಳವರಹುಂಡಿ ಸಿದ್ದಪ್ಪ ಬಣ್ಣಿಸಿದರು.

ಜಿಲ್ಲಾ, ತಾಲೂಕು ಶರಣ ಸಾಹಿತ್ಯ ಪರಿಷತ್ ಹಾಗೂ ಬಸವ ಬಳಗಗಳ ಸಂಯುಕ್ತಾಶ್ರಯದಲ್ಲಿ ಧರ್ಮಯ್ಯನ ಹುಂಡಿ ಗ್ರಾಮದಲ್ಲಿ ನಡೆದ ವಚನ ಪಿತಾಮಹ ಡಾ.ಫ.ಗು.ಹಳಕಟ್ಟಿ ಅವರ ಜನ್ಮ ದಿನಾಚರಣೆ ಹಾಗೂ ದತ್ತಿ ಉಪನ್ಯಾಸ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ತಾಳೆ ಮತ್ತು ಓಲೆಗರಿಗಳಲ್ಲಿ ಅಡಗಿ ಹೋಗುತ್ತಿದ್ದ ಬಸವಾದಿ ಶರಣರ ವಚನಗಳನ್ನು 20ನೇ ಶತಮಾನದಲ್ಲಿ ಸಂರಕ್ಷಿಸಿದ ಕೀರ್ತಿ ಡಾ.ಫ.ಗು. ಹಳಕಟ್ಟಿ ಅವರಿಗೆ ಸಲ್ಲುತ್ತದೆ ಎಂದರು.

ಪಾರಮಾರ್ಥ ಗವಿಮಠದ ಮಲ್ಲಿಕಾರ್ಜುನ ಸ್ವಾಮೀಜಿ ಮಾತನಾಡಿ, ಮಾನವ ಧರ್ಮದ ತಳಹದಿಯಾಗಿರುವ ಶರಣರ ವಚನಗಳು ಇಂದು ಜಾಗತಿಕ ಮನ್ನಣೆಪಡೆಯಲು ಹಳಕಟ್ಟಿಯವರ ಕಾರ್ಯವೇ ಕಾರಣ. ವಚನ ಗುಮ್ಮಟ ಎನ್ನುವ ಬಿಎಲ್‌ಡಿಇ ಶಿಕ್ಷಣ ಸಂಸ್ಥೆ ಸ್ಥಾಪಿಸಿ ವಚನ ಶಾಸ್ತ್ರ ಪಿತಾಮಹರೆನಿಸಿದ ಹಳಕಟ್ಟಿಯವರು ವಕೀಲಿ ವೃತ್ತಿ ಬಿಟ್ಟು, ಹುಟ್ಟಿನಿಂದ ಶ್ರೀಮಂತರಾದರೂ ವಚನ ಸಾಹಿತ್ಯ ಸಂರಕ್ಷಣೆ ಮಾಡಿ ಸಾರ್ವಕಾಲಿಕ ಸ್ಮರಣೀಯರಾಗಿದ್ದಾರೆ ಎಂದು ಬಣ್ಣಿಸಿದರು.

ವಾಟಾಳು ಸಿದ್ದಲಿಂಗ ಶಿವಾಚಾರ್ಯ ಸ್ವಾಮೀಜಿ ಮಾತನಾಡಿ, ಜನರ ಬದುಕು ಹಸನಾಗಬೇಕಾದರೆ ಕಾಲಕಾಲಕ್ಕೆ ಇಂತಹ ಶರಣರ ಜಯಂತಿ ಹಾಗೂ ಸ್ಮರಣೆ ಜರುಗಬೇಕು ಎಂದರು.

ಕಾರ್ಯಕ್ರಮದಲ್ಲಿ ಹೊಸೂರುಹುಂಡಿ ಮಠದ ರಾಜಶೇಖರ ಸ್ವಾಮೀಜಿ, ತಾಲೂಕು ವೀರಶೈವ ಮಹಾಸಭಾ ಅಧ್ಯಕ್ಷ ಎಸ್‌ಎಂಆರ್ ಪ್ರಕಾಶ್, ತಾಲೂಕು ಜಾಗತಿಕ ಲಿಂಗಾಯತ ಮಹಾಸಭಾ ಅಧ್ಯಕ್ಷ ತೊಟ್ಟವಾಡಿ ರವಿ, ಧರ್ಮಯ್ಯನಹುಂಡಿ ಪ್ರಭು, ತಾಲೂಕು ಕಸಾಪ ಅಧ್ಯಕ್ಷ ಸೋಮಶೇಖರ್, ಜಿಲ್ಲಾ ನಿಕಟಪೂರ್ವ ಅಧ್ಯಕ್ಷ ಚಂದ್ರಶೇಖರ್, ಲಿಂಗರಾಜಪ್ಪ, ಶಿವಕುಮಾರಸ್ವಾಮಿ ಟ್ರಸ್ಟ್‌ನ ನಿಂಗಪ್ಪ, ಬಸವ ಪ್ರಚಾರಕ ಕುಮಾರ್, ಉಪಾಧ್ಯಕ್ಷ ಮಹದೇವಸ್ವಾಮಿ, ಚಿನ್ನಬುದ್ದಿ, ನಂಜುಂಡಸ್ವಾಮಿ, ಉಪನ್ಯಾಸಕ ಮೂಗೂರು ಕುಮಾರಸ್ವಾಮಿ, ಪೂಜಿತ್ ಮೆಡಿಕಲ್ ಕುಮಾರ್, ತೊಟ್ಟವಾಡಿ ಚಂದ್ರಧರ, ಶಿವಕುಮಾರ್, ಚೇತನ್ ಪಟೇಲ್, ಗೌಡರಾದ ಗುರುಮಲ್ಲಪ್ಪ, ಮಹದೇವಪ್ಪ, ಶಿವಮೂರ್ತಿ, ಸತೀಶ, ಚೇತನ್, ವಕೀಲ ಜ್ಞಾನೇಂದ್ರಮೂರ್ತಿ, ಅಕ್ಕಿ ನಾಗಪ್ಪ ಮುಡಿಗುಂಡ ಪುಟ್ಟಪ್ಪ, ಸರಳ ಇತರರಿದ್ದರು.

ಕ್ಯಾಂಟರ್ ಡಿಕ್ಕಿ: ಕಾರ್ಮಿಕ ಸಾವು

ನಂಜನಗೂಡು, ಜು.4– ರಿವರ್ಸ್ ತೆಗೆಯುತ್ತಿದ್ದ ವೇಳೆ ಕ್ಯಾಂಟರ್ ಡಿಕ್ಕಿ ಹೊಡೆದ ಪರಿಣಾಮ ಕೂಲಿ ಕಾರ್ಮಿಕ ಸಾವನ್ನಪ್ಪಿರುವ ಘಟನೆ ನಗರದ ಎಪಿಎಂಸಿ ಆವರಣದಲ್ಲಿ ಜರುಗಿದೆ.

ಕೊಳ್ಳೇಗಾಲ ತಾಲೂಕಿನ ಸಂತೇಮರಳ್ಳಿ ಗ್ರಾಮದ ಸತ್ಯರಾಜು(40) ಸಾವನ್ನಪ್ಪಿದವರು. ಕೂಲಿ ಕೆಲಸ ಮಾಡಿಕೊಂಡಿದ್ದ ಈತ ಗುರುವಾರ ಮಧ್ಯಾಹ್ನ ಎಪಿಎಂಸಿ ಗೋಡನ್ ಎದುರು ನಿಂತಿದ್ದ ವೇಳೆ ಚಾಲಕ ನಿರ್ಲಕ್ಷ್ಯದಿಂದ ಕ್ಯಾಂಟರ್ ಅನ್ನು ವೇಗವಾಗಿ ರಿವರ್ಸ್ ತೆಗೆದ ಪರಿಣಾಮ ಸತ್ಯರಾಜು ಕೆಳಗೆ ಬಿದ್ದು ತೀವ್ರ ಗಾಯಗೊಂಡಿದ್ದರು. ತಕ್ಷಣ ಆಸ್ಪತ್ರೆಗೆ ದಾಖಲಿಸಲಾಯಿತಾದರೂ ಚಿಕಿತ್ಸೆ ಫಲಕಾರಿಯಾಗದೇ ಸಾವನ್ನಪ್ಪಿದ್ದಾರೆ. ಸ್ಥಳಕ್ಕೆ ಸಂಚಾರಿ ಠಾಣೆ ಎಸ್‌ಐ ಸಿದ್ದರಾಜು ಭೇಟಿ ನೀಡಿ ಪರಿಶೀಲಿಸಿ ವಾಹನವನ್ನು ವಶಕ್ಕೆ ಪಡೆದರು. ಈ ಸಂಬಂಧ ನಂಜನಗೂಡು ಸಂಚಾರಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ವಾರಾಹಿ, ಮಾರಮ್ಮನವರ ದರ್ಶನ ಪಡೆದ ಶಾಸಕ ಅನಿಲ್


ಹೆಚ್.ಡಿ.ಕೋಟೆ ಪಟ್ಟಣದ ಶಕ್ತಿದೇವತೆ ವಾರಾಹಿ ಮತ್ತು ಮಾರಮ್ಮನವರ ದೇವಾಲಯಕ್ಕೆ ಶಾಸಕ ಅನಿಲ್ ಭೇಟಿ ನೀಡಿ ದೇವರ ದರ್ಶನ ಪಡೆದು ವಿಶೇಷ ಪೂಜೆ ಸಲ್ಲಿಸಿದರು. ಈ ವೇಳೆ ದೇವಾಲಯದಿಂದ ಶಾಸಕರನ್ನು ಅಭಿನಂದಿಸಲಾಯಿತು. ಪಟೇಲ್ ನಾಗರಾಜಶೆಟ್ಟಿ, ಶಾನುಭೋಗ ಫಣಿಕಾಂತ್, ಮುಖಂಡರಾದ ಹೆಚ್.ಸಿ.ಮಂಜುನಾಥ್, ಭುಜಂಗರಾವ್, ಕೃಷ್ಣ, ಜವರನಾಯ್ಕ, ಸೋಮಣ್ಣ, ಸಣ್ಣಪ್ಪ, ದೇವ ನಾಯಕ, ಪರಶಿವಮೂರ್ತಿ, ರಘು, ವೇಣು, ಸಿದ್ದರಾಮ, ಸೋಮಸುಂದರ್, ಶ್ರೀಕಂಠ, ಸೋಮಣ್ಣ ಇನ್ನಿತರರಿದ್ದರು.

ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರಗೆ ಸನ್ಮಾನ


ಮೈಸೂರು-ಚಾಮರಾಜನಗರ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನೂತನ ನಿರ್ದೇಶಕ, ಮಾಜಿ ಜಿಪಂ ಸದಸ್ಯ ಬಿ.ಎನ್.ಸದಾನಂದ ಅವರು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರನ್ನು ಸನ್ಮಾನಿಸಿದರು. ಈ ವೇಳೆ ಮುಖಂಡರಾದ ಶ್ರೀಕಂಠ, ಹದಿನಾರು ಸತೀಶ, ಕಲ್ಮಳಿ ಮಹೇಶ್, ಬಿದರಗೋಡು ಕುಮಾರ ಇತರರಿದ್ದರು.

ವಿವಿಧ ಅಭಿವೃದ್ಧಿ ಕಾಮಗಾರಿಗೆ ಗುದ್ದಲಿ ಪೂಜೆ


ಅಭಿವೃದ್ಧಿ ಕಾಮಗಾರಿಗೆ ಸಚಿವ ಹೆಚ್.ಸಿ.ಮಹದೇವಪ್ಪ ಗುದ್ದಲಿ ಪೂಜೆ ನೆರವೇರಿಸಿದರು.

ಮೂಗೂರು, ಜು.4– ಲಭ್ಯವಿರುವ ಸ್ಥಳವನ್ನು ಸಮರ್ಪಕವಾಗಿ ಬಳಸಿಕೊಂಡು ಹೊಸ ಯೋಜನೆ ರೂಪಿಸಿ ನೂತನ ವಿನ್ಯಾಸದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಸಮುದಾಯ ಭವನ ನಿರ್ಮಿಸುವಂತೆ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅಧಿಕಾರಿಗಳಿಗೆ ಸೂಚಿಸಿದರು.

ಮೂಗೂರಿನಲ್ಲಿ ಸರ್ಕಾರಿ ಪ್ರೌಢಶಾಲೆ ಕೊಠಡಿ ನಿರ್ಮಾಣ, ಚೆಸ್ಕಾಂ ಮಾದರಿ ವಿದ್ಯುತ್ ಯೋಜನೆ, ಚರಂಡಿ, ಕಾಂಕ್ರೀಟ್ ರಸ್ತೆ ಸೇರಿದಂತೆ ವಿವಿಧ ಅಭಿವೃದ್ಧಿ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸಿ, ಬಳಿಕ ಸಮುದಾಯ ಭವನಕ್ಕೆ ಆಗಮಿಸಿ ಸ್ಥಳೀಯ ಮುಖಂಡರ ಅಹವಾಲು ಸ್ವೀಕರಿಸಿ ಅವರು ಮಾತನಾಡಿದರು. ಸಮುದಾಯ ಭವನ ಕಾಮಗಾರಿ ಆರಂಭಿಸುವ ಮುನ್ನ ನೀಡಿರುವ 75 ಲಕ್ಷ ರೂ.ಗಳನ್ನು ಯೋಜನೆಗೆ ತಕ್ಕಂತೆ ಬಳಸಿ. ಕೊರತೆ ಕಂಡು ಬಂದಲ್ಲಿ ಕೂಡಲೇ ನನ್ನ ಗಮನಕ್ಕೆ ತರಬೇಕು. ಸಮುದಾಯ ಭವನ ಕಾಮಗಾರಿ ತಕ್ಷಣ ಆರಂಭಿಸಲು ಅಧಿಕಾರಿಗಳಿಗೆ ತಾಕೀತು ಮಾಡಿದರು.

ಈ ವೇಳೆ ತಾಲೂಕು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಡಿ.ಬಸವರಾಜು, ತಾಪಂ ಮಾಜಿ ಅಧ್ಯಕ್ಷ ಉಮೇಶ್, ಪಿಎಸಿಎಸ್ ಮಾಜಿ ಅಧ್ಯಕ್ಷ ಮಂಜುನಾಥ್, ಕೆಪಿಎಸ್ ಶಾಲೆ ಉಪಾಧ್ಯಕ್ಷ ಎಂ.ಎನ್.ಸೋಮಣ್ಣ, ಎಂ.ಬಿ. ಸಾಗರ್, ಡೇರಿ ನಾಗೇಂದ್ರ, ತೋಟದ ನಾಗಣ್ಣ, ಸಚಿವರ ಆಪ್ತ ಸಹಾಯಕ ಬಸವರಾಜು, ರಾಮಲಿಂಗು, ಗಣೇಶ್, ಪುರಸಭೆ ಮಾಜಿ ಅಧ್ಯಕ್ಷ ಮದನ್, ಗ್ರಾಪಂ ಮಾಜಿ ಸದಸ್ಯ ಎಂ.ರಾಜು, ಮುಖಂಡರಾದ ಜಗದೀಶ್, ಚಿಕ್ಕಮಾದು, ಕೃಷ್ಣಸ್ವಾಮಿ, ದಿಲೀಪ್, ಸಿದ್ದರಾಜು ಹಾಗೂ ಗ್ರಾಮಸ್ಥರು, ಪಕ್ಷದ ಕಾರ್ಯಕರ್ತರು ಉಪಸ್ಥಿತರಿದ್ದರು.

ಸಮಾಜದಲ್ಲಿ ಶಾಂತಿ ಭಂಗ: ಜಿಲ್ಲೆಯಿಂದ ಪ್ರಭಾಕರ ಗಡಿಪಾರು



ಹುಣಸೂರು, ಜು.4– ಸಮಾಜದ ಸ್ವಾಸ್ಥ್ಯ ಹಾಳು ಮಾಡಿ, ಸಾರ್ವಜನಿಕರ ಶಾಂತಿ ಭಂಗ ಮಾಡಿದ ಹಿನ್ನೆಲೆಯಲ್ಲಿ ತಾಲೂಕಿನ ಹುಸೇನ್‌ಪುರ ಗ್ರಾಮದ ನಿವಾಸಿ ಮಹದೇವ ಅವರ ಪುತ್ರ ಪ್ರಭಾಕರನನ್ನು 60 ದಿನಗಳ ಕಾಲ ಮೈಸೂರು ಜಿಲ್ಲೆಯಿಂದ ಗಡಿಪಾರು ಮಾಡಿ ಉಪವಿಭಾಗಾಧಿಕಾರಿ ಹೆಚ್.ಬಿ.ವಿಜಯಕುಮಾರ್ ಆದೇಶ ಹೊರಡಿಸಿದ್ದಾರೆ.

ಪ್ರಭಾಕರನನ್ನು ಕರ್ನಾಟಕ ಪೊಲೀಸ್ ಕಾಯ್ದೆ 1963ರ 63 ರಡಿ ಹುಣಸೂರು ಉಪವಿಭಾಗಾಧಿಕಾರಿ ಹಾಗೂ ಉಪವಿಭಾಗ ದಂಡಾಧಿಕಾರಿ ಹೆಚ್.ಬಿ.ವಿಜಯ್‌ಕುಮಾರ್ ಜೂ.30 ರಿಂದ ಆ.29 ರವರಿಗೆ ಜಾರಿಗೆ ಬರುವಂತೆ ಜಿಲ್ಲೆಯಿಂದ ಗಡಿಪಾರು ಮಾಡಿ ಆದೇಶಿಸಿದ್ದಾರೆ.

ಈ ಆದೇಶದ ಅನ್ವಯ ಆರೋಪಿ ಶಿವಮೊಗ್ಗ ಜಿಲ್ಲೆ ಕೋಟೆ ಪೊಲೀಸ್ ಠಾಣೆಯಲ್ಲಿ ನಿತ್ಯ ಹಾಜರಾತಿ ನಿರ್ವಹಿಸುವಂತೆ ನಿಗದಿಪಡಿಸಿ ಆರೋಪಿಯನ್ನು ಪೊಲೀಸ್ ಅಭಿರಕ್ಷೆಯಲ್ಲಿ ಕರೆದೊಯ್ದು ಗಡಿಪಾರು ಮಾಡಿದ ಬಗ್ಗೆ ಮಾಹಿತಿ ನೀಡಲು ಉಪವಿಭಾಗಾಧಿಕಾರಿಗಳು ಪೊಲೀಸರಿಗೆ ನಿರ್ದೇಶಿಸಿದ್ದಾರೆ. ಗಡಿಪಾರು ಮಾಡಿದ ನಂತರ ಗಡಿಪಾರಿನ ಅವಧಿಯಲ್ಲಿ ಆರೋಪಿಯು ಮೈಸೂರು ಜಿಲ್ಲೆಯ ಯಾವುದೇ ಪ್ರದೇಶದಲ್ಲಿ ಕಂಡು ಬಂದಲ್ಲಿ ಕಾನೂನು ಕ್ರಮ ವಹಿಸಲಾಗುವುದು ಎಂದು ನಿಂಬಧನೆ ವಿಧಿಸಲಾಗಿದೆ.

ಗ್ರಾಮೀಣ ಹೆಣ್ಣು ಮಕ್ಕಳ ವಿದ್ಯಾಭ್ಯಾಸಕ್ಕೆ ಡಾ.ರಾಜೇಂದ್ರ ಶ್ರೀಗಳ ಕೊಡುಗೆ ಅಪಾರ

ಸರಗೂರು, ಜು.4– ಗ್ರಾಮೀಣ ಭಾಗದ ಹೆಣ್ಣು ಮಕ್ಕಳ ವಿದ್ಯಾಭ್ಯಾಸಕ್ಕೆ ಡಾ.ರಾಜೇಂದ್ರ ಶ್ರೀಗಳ ಕೊಡುಗೆ ಅಪಾರ ಎಂದು ಸಮುದಾಯ ಆರೋಗ್ಯ ಕೇಂದ್ರದ ಸ್ತ್ರೀರೋಗ ತಜ್ಞೆ ಡಾ. ಭಾಗ್ಯಲಕ್ಷ್ಮಿ ತಿಳಿಸಿದರು.

ಪಟ್ಟಣದ ಜೆಎಸ್‌ಎಸ್ ಬಾಲಕಿಯರ ಪದವಿ ಪೂರ್ವ ಕಾಲೇಜಿನಲ್ಲಿ ಆಯೋಜಿಸಿದ್ದ ದ್ವಿತೀಯ ಪಿಯುಸಿ ವಿದ್ಯಾರ್ಥಿನಿಯರಿಂದ ಪ್ರಥಮ ಪಿಯುಸಿ ವಿದ್ಯಾರ್ಥಿಯರ ಸ್ವಾಗತ ಸಮಾರಂಭದಲ್ಲಿ ಮಾತನಾಡಿದ ಅವರು, ನಾನು ಸಹ ಜೆಎಸ್‌ಎಸ್ ವೈದ್ಯಕೀಯ ಕಾಲೇಜಿನ ವಿದ್ಯಾರ್ಥಿನಿಯಾಗಿದ್ದು, ಗ್ರಾಮೀಣ ಹೆಣ್ಣು ಮಕ್ಕಳ ವಿದ್ಯಾಭ್ಯಾಸಕ್ಕೆ ಶ್ರೀಗಳ ಕೊಡುಗೆ ಅಪಾರವಾಗಿದ್ದು, ಅವರ ಆಶೀರ್ವಾದದಿಂದ ಕಾಲೇಜು ನಡೆಯುತ್ತಿದೆ. ಈ ಕಾಲೇಜಿನಲ್ಲಿ ಉತ್ತಮ ಕಲಿಕಾ ವಾತಾವರಣವಿದ್ದು, ಉತ್ತಮ ಶಿಕ್ಷಣ ಪಡೆದುಕೊಂಡು ವಿದ್ಯಾರ್ಥಿನಿಯರು ಸ್ವಾವಲಂಬಿಗಳಾಗಿ ಬದುಕಬೇಕು. ಆರೋಗ್ಯದ ಬಗ್ಗೆ ಕಾಳಜಿ ವಹಿಸಬೇಕು ಎಂದ ಅವರು ಇದೇ ವೇಳೆ ವಿದ್ಯಾರ್ಥಿನಿಯರು ದೈಹಿಕವಾಗಿ ಸದೃಢರಾಗಿ ಇರಬೇಕಾದರೆ ಅನುಸರಿಸಬೇಕಾದ ಕ್ರಮಗಳ ಬಗ್ಗೆ ತಿಳಿಸಿಕೊಟ್ಟರು.

ಸಿಪಿಐ ಪ್ರಸನ್ನ ಕುಮಾರ್ ಮಾತನಾಡಿದರು. ಕಾಲೇಜಿನ ಹಿರಿಯ ವಿದ್ಯಾರ್ಥಿಗಳಿಂದ ಪ್ರತಿಭಾ ಪುರಸ್ಕಾರ ನಡೆಸಲಾಯಿತು. ಇದಕ್ಕೂ ಮುನ್ನಾ ಶಿವರಾತ್ರಿ ರಾಜೇಂದ್ರಶ್ರೀಗಳ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಕಾರ್ಯಕ್ರಮ ಉದ್ಘಾಟಿಸಲಾಯಿತು. ಈ ವೇಳೆ ಕಾಲೇಜಿನ ಪ್ರಾಂಶುಪಾಲ ಮಹದೇವಸ್ವಾಮಿ, ಉಪನ್ಯಾಸಕರಾದ ಮಣಿಮಾಲ, ಜಾಹೀರ ಫಾತೀಮಾ, ಸ್ಮಿತಾ, ಜಯಶ್ರೀ, ಶೋಭಾ, ಶಶಿಕಲಾ, ವಸಂತಕುಮಾರಿ, ಮಹದೇವಸ್ವಾಮಿ, ಶಿವಪ್ರದಾಸ್, ವಿದ್ಯಾರ್ಥಿಗಳು ಉಪಸ್ಥಿತರಿದ್ದರು.


ವಿದ್ಯಾರ್ಥಿನಿಯರಿಗೆ ಪ್ರತಿಭಾ ಪುರಸ್ಕಾರ ನೀಡಲಾಯಿತು.

ತಲಕಾಡಲ್ಲಿ ಇಷ್ಟಲಿಂಗ ಮಹಾಪೂಜೆ, ಧರ್ಮ ಜನಜಾಗೃತಿ


ತಲಕಾಡಲ್ಲಿ ಇಷ್ಟಲಿಂಗ ಮಹಾಪೂಜೆ, ಧರ್ಮ ಜನಜಾಗೃತಿ ಸಮಾರಂಭ ನಡೆಯಿತು.

> ಒಳ್ಳೆಯ ಕೆಲಸ ಮಾಡದ ಕೈಗಳು, ದುಷ್ಟ ವಾಕ್ಯಗಳನ್ನು ಕೇಳುವ ಕಿವಿಗಳಿಂದ ನಮ್ಮ ಶರೀರ ಅಪವಿತ್ರವಾಗುತ್ತದೆ. ಅನ್ಯಾಯದಿಂದ ಗಳಿಸಿದ ಹಣ ಎಂದಿಗೂ ಆನಂದ ನೀಡಲಾರದು. ಪ್ರತಿಯೊಬ್ಬರೂ ತಮ್ಮ ಪಂಚೇಂದ್ರಿಯಗಳನ್ನು ದುಷ್ಟ ದುರ್ಯೋಧನನಂತೆ ಬಳಸಬಾರದು. ಬದಲಾಗಿ ಪವಿತ್ರ ಕರ್ಣನಂತೆ ಬಳಸಬೇಕು.
> - ಜಗದ್ಗುರು ರಾವಲ್ ಭೀಮ ಶಂಕರಲಿಂಗ ಶಿವಾಚಾರ್ಯ ಸ್ವಾಮೀಜಿ.

ತಿ.ನರಸೀಪುರ, ಜು.4– ತಾಲೂಕಿನ ತಲಕಾಡು ಗ್ರಾಮದ ಹಸ್ತಿಕೇರಿ ಮಠದಲ್ಲಿ ಹಿಮವತ್ ಕೇದಾರ ವೈರಾಗ್ಯ ಸಿಂಹಾಸನಾದೀಶ್ವರ 1008 ಶ್ರೀಜಗದ್ಗುರು ರಾವಲ್ ಭೀಮ ಶಂಕರಲಿಂಗ ಶಿವಾಚಾರ್ಯ ಭಗವತ್ಪಾದರ ಸಂಗೀತಯುಕ್ತ ಇಷ್ಟಲಿಂಗ ಮಹಾಪೂಜೆ ಮತ್ತು ಧರ್ಮ ಜನಜಾಗೃತಿ ಸಮಾರಂಭ' ವಿಜೃಂಭಣೆಯಿಂದ ನಡೆಯಿತು.

ವಿಕಾಸ ವೇದಿಕೆ ಟ್ರಸ್ಟ್ ಆಶ್ರಯದಲ್ಲಿ ತಲಕಾಡಿನ ಹಳೇ ಬೀದಿಯಲ್ಲಿರುವ ಹಸ್ತಿಕೇರಿ ಮಠದಲ್ಲಿ ಲೋಕ ಕಲ್ಯಾಣಾರ್ಥವಾಗಿ ಲಿಂಗಾಯತ ಪಂಚಪೀಠಗಳಾದ ರಂಭಾಪುರಿ, ಉಜ್ಜಯಿನಿ, ಶ್ರೀಶೈಲ, ಕಾಶಿ ಹಾಗೂ ಕೇದಾರ ಮಠದ ಪೀಠಾಧಿಪತಿ 1008ನೇ ಜಗದ್ಗುರು ರಾವಲ್ ಭೀಮ ಶಂಕರಲಿಂಗ ಶಿವಾಚಾರ್ಯ ಭಗವತ್ಪಾದರ ಸಂಗೀತಯುಕ್ತ ಇಷ್ಟಲಿಂಗ ಮಹಾಪೂಜಾ ಮಹೋತ್ಸವಕ್ಕೆ ರಾಜ್ಯದ ವಿವಿಧೆಡೆಗಳಿಂದ ಭಕ್ತರು ಆಗಮಿಸಿ ಧಾರ್ಮಿಕ ಕೈಂಕರ್ಯವನ್ನು ಕಣ್ತುಂಬಿಕೊಂಡರು.

ಹಸ್ತಿಕೇರಿ ಮಠದ ಶ್ರೀಸಿದ್ಧಮಲ್ಲಿಕಾರ್ಜುನ ಸ್ವಾಮೀಜಿ ಆಶೀರ್ವಚನ ನೀಡಿ ಮಾತನಾಡಿ, 6 ತಿಂಗಳ ಕಾಲ ಕೇದಾರನಾಥನ ಮೇಲೆ ಇದ್ದ ರತ್ನ ಖಚಿತ ಕಿರೀಟ ದೇವಾಲಯದ ಬಾಗಿಲು ಮುಚ್ಚಿದ ಮೇಲೆ ಜಗದ್ಗುರುಗಳ ತಲೆ ಮೇಲಿರುತ್ತದೆ. ಆದ್ದರಿಂದ ಜಗದ್ಗುರುಗಳನ್ನು ನಡೆದಾಡುವ ಕೇದಾರನಾಥ ಎಂದು ಕರೆಯುತ್ತಾರೆ. ಮಹಾರಾಷ್ಟ್ರದ ಕೇದಾರ ಮಠದ ಪರಂಪರೆ ಬಹಳ ಪುರಾತನವಾಗಿದ್ದು, ಹಿಮಾಲಯ ಪರ್ವತ ಶ್ರೇಣಿಯ ಪ್ರಮುಖ 4 ಧರ್ಮಗಳಲ್ಲಿ ಒಂದಾಗಿದೆ. ವೀರಶೈವ ಲಿಂಗಾಯತ ಪಂಚಪೀಠದಲ್ಲಿ ಕೇದಾರ ಪೀಠವೂ ಒಂದಾಗಿದ್ದು, ನೀಲಿ ವರ್ಣದ ಧ್ವಜ ಸಂಕೇತ ಹಾಗೂ ವೈರಾಗ್ಯ ಪೀಠವು ಆಗಿದೆ ಎಂದು ಇತಿಹಾಸವನ್ನು ನೆರೆದಿದ್ದ ಭಕ್ತರಿಗೆ ತಿಳಿಸಿದರು.

ಮುಂಜಾನೆ 8 ಗಂಟೆಯಿಂದಲೇ ಕೇದಾರ ಊಖಿ ಮಠದ ಜಗದ್ಗುರು ರಾಹುಲ್ ಭೀಮಾ ಶಂಕರಲಿಂಗ ಶಿವಾಚಾರ್ಯರು ಸಂಗೀತಕ್ಕೆ ಇಷ್ಟಲಿಂಗ ಪೂಜೆ ನೆರವೇರಿಸಿ, ತಲಕಾಡು ಕ್ಷೇತ್ರದ ಧಾರ್ಮಿಕ ಮಹಾ ಮಹಿಮೆ ತಿಳಿಸಿದರು. ಕಾರ್ಯಕ್ರಮಕ್ಕೆ ಆಗಮಿಸಿದ ಭಕ್ತರಿಗೆ ಮಠದ ವತಿಯಿಂದ ದಾಸೋಹ ಏರ್ಪಡಿಸಲಾಗಿತ್ತು.

ಕಾರ್ಯಕ್ರಮದಲ್ಲಿ ಪೂರಿಗಾಲಿ ಮಠದ ಶಿವಾನಂದ ಶಿವಾಚಾರ್ಯ ಸ್ವಾಮೀಜಿ, ಅಜ್ಜಿಪುರ ನಂದೀಶ ಶಿವಾಚಾರ್ಯ ಸ್ವಾಮೀಜಿ, ವಿಕಾಸ ವೇದಿಕೆ ಟ್ರಸ್ಟ್ ಕಾರ್ಯದರ್ಶಿ ರೇಣುಕಾ ಪ್ರಸಾದ್, ಸದಸ್ಯರಾದ ಬಸವಣ್ಣ, ಪ್ರದೀಪ್, ರವಿಕುಮಾರ್ ಹಾಗೂ ಎಸ್.ಬಿ.ಸುಗಂಧರಾಜ, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ, ವೀರಶೈವ ಸಮಾಜ, ರೇಣುಕ ಸಮಾಜ ಸೇರಿದಂತೆ ಕುದೇರು, ಕೊಳ್ಳೇಗಾಲ, ಚಾಮರಾಜನಗರ ಹಾಗೂ ತಲಕಾಡು ಗ್ರಾಮಗಳ ಭಕ್ತರು ಇದ್ದರು.

ವಿಜೃಂಭಣೆಯ ಗಿರಿಜಾ ಕಲ್ಯಾಣ ಮಹೋತ್ಸವ


ಗಿರಿಜಾ ಕಲ್ಯಾಣದಲ್ಲಿ ಶುಕ್ರವಾರ ಶ್ರೀಕಂಠೇಶ್ವರಸ್ವಾಮಿಯವರ ಕಾಶಿಯಾತ್ರೆ ನಡೆಸಲಾಯಿತು.

ನಂಜನಗೂಡು, ಜು.4– ನಗರದ ಶ್ರೀಕಂಠೇಶ್ವರ ದೇವಾಲಯದಲ್ಲಿ ಶಿವ ಪಾರ್ವತಿಯರ ಗಿರಿಜಾ ಕಲ್ಯಾಣ ಮಹೋತ್ಸವ ಶುಕ್ರವಾರ ವಿಜೃಂಭಣೆಯಿಂದ ನಡೆಯಿತು.

ದೇವಾಲಯದ ವಸಂತ ಮಂಟಪದಲ್ಲಿ ಸಂಜೆ 6.20 ರಿಂದ 7 ಗಂಟೆಯೊಳಗೆ ಸಲ್ಲುವ ಶುಭ ಮಕರ ಲಗ್ನದಲ್ಲಿ ಆಗಮಿಕ ನಾಗಚಂದ್ರ ದೀಕ್ಷಿತ್ ನೇತೃತ್ವದ ತಂಡ ಗಿರಿಜಾ ಕಲ್ಯಾಣವನ್ನು ನಡೆಸಿಕೊಟ್ಟರು. ಮಹೋತ್ಸವದ ಅಂಗವಾಗಿ ಬೆಳಗ್ಗೆ 9 ಗಂಟೆಗೆ ಸ್ವಾಮಿಗೆ ಅನುಜ್ಞಾಪೂರ್ವಕ ಕನ್ನಡಿ ಕಳಶ ಅಂಕುರಾರ್ಪಣ ಪೂರ್ವಕ ಮಂಗಳ ಸ್ನಾನ, 12 ಗಂಟೆಗೆ ನಾಂದಿ ಗೃಹಯಜ್ಞ ನಡೆಸಲಾಯಿತು. ನಂತರ ದೇವಾಲಯದಿಂದ ಸರ್ವ ಅಲಂಕಾರ ಭೂಷಿತವಾದ ಸ್ವಾಮಿಯ ಉತ್ಸವ ಮೂರ್ತಿಯನ್ನು ಪಲ್ಲಕ್ಕಿಯಲ್ಲಿ ಇರಿಸಿ ದೇವಾಲಯದ ಪ್ರಾಂಗಣದ ಸುತ್ತ ಮೆರವಣಿಗೆ ಮಾಡುವ ಮೂಲಕ ಕಾಶಿ ಯಾತ್ರೆ ನಡೆಸಲಾಯಿತು.

ಮೆರವಣಿಗೆಯಲ್ಲಿ ಪಂಚ ವೀರಗಾಸೆ, ಪೂಜಾ ಕುಣಿತ, ಗಾರುಡಿ ಗೊಂಬೆ, ನಂದಿ ಧ್ವಜ, ಬೀಸು ಕಂಸಾಳೆ, ಮಂಗಳ ವಾದ್ಯಗಳು ಉತ್ಸವಕ್ಕೆ ರಂಗು ತಂದವು. ನಂತರ ಪಾರ್ವತಿ ಅಮ್ಮನವರು ಹಾಗೂ ಶ್ರೀಕಂಠೇಶ್ವರ ಸ್ವಾಮಿಯವರ ಉತ್ಸವ ಮೂರ್ತಿಗಳನ್ನು ಕಲ್ಯಾಣ ಮಹೋತ್ಸವಕ್ಕಾಗಿ ಸಿದ್ಧಗೊಂಡಿದ್ದ ಮಂಟಪದಲ್ಲಿ ಪ್ರತಿಷ್ಠಾಪಿಸಿ ಸಂಬಂಧ ಮಾಲಾ ನಿರೀಕ್ಷಣಾ ಪೂರ್ವಕ ಕಲ್ಯಾಣ ಮಂಟಪ ಪ್ರವೇಶ ನಂತರ ಧಾರಾ ಮಹೋತ್ಸವ, ಅಕ್ಷತಾರೋಹಣ ಕಾರ್ಯಗಳು ಜರುಗಿದವು. ದೇವಾಲಯದ ವಸಂತ ಮಂಟಪದಲ್ಲಿ ಕಿಕ್ಕಿರಿದು ನೆರೆದಿದ್ದ ಭಕ್ತರು ಜಯಕಾರ ಮಾಡುತ್ತಾ ಗಿರಿಜಾ ಕಲ್ಯಾಣವನ್ನು ಕಣ್ತುಂಬಿಕೊಂಡರು.

ಗಿರಿಜಾ ಕಲ್ಯಾಣ ವಿಶೇಷ: ಮೈಸೂರು ಒಡೆಯರು ಹಾಗೂ ಟಿಪ್ಪು ಸುಲ್ತಾನ್ ನೀಡಿರುವ 44 ಬಗೆಯ ಜವಹಾರಿ ಆಭರಣಗಳಿಂದ ಉತ್ಸವಮೂರ್ತಿಗಳ ಅಲಂಕರಿಸುವುದು ಗಿರಿಜಾ ಕಲ್ಯಾಣದ ವಿಶೇಷಗಳಲ್ಲೊಂದಾಗಿದೆ. ಇಮ್ಮಡಿ ಕೃಷ್ಣರಾಜ ಒಡೆಯರ್ ಅವರು ನೀಡಿರುವ ಚಿನ್ನದ ರುದ್ರಾಕ್ಷಿ, ಬಿಲ್ವಪತ್ರೆ ಸರ, ತಂಗಮಣಿ, ರತ್ನ ಖಚಿತವಾದ ಉತ್ಸವ ಕವಚ, ಕೆಂಪಿನ ಕವಚ, ಪದಕದ ಸರಗಳು, ಮುತ್ತಿನ ಸರಗಳು, ಸೂರ್ಯ ಬಪಟ್ಟು, ಚಂದ್ರ ಬೊಟ್ಟು, ಹಣೆ ಬೊಟ್ಟು, ತುರಾಯಿ, ಕಡಗ, ಕಾಲು ಕಡಗ, ಹವಣದ ಉಡುದಾರಗಳಿಂದ ಶ್ರೀಕಂಠೇಶ್ವರಸ್ವಾಮಿ ಮತ್ತು ಅಮ್ಮನವರ ಉತ್ಸವ ಮೂರ್ತಿಗಳನ್ನು ದೇವಾಲಯದ ಋತ್ವಿಜರು ಕ್ರಮಬದ್ಧವಾಗಿ ಸಿಂಗರಿಸಿ ಕಲ್ಯಾಣ ಮಹೋತ್ಸವಕ್ಕೆ ಅಣಿಗೊಳಿಸುತ್ತಾರೆ. ಸರ್ಕಾರದ ಖಜಾನೆಯಲ್ಲಿ ವಿಶೇಷ ಭದ್ರತೆಯಲ್ಲಿ ಇರಿಸಲಾದ ಈ ಅಮೂಲ್ಯವಾದ ಮುತ್ತು, ಪಚ್ಚೆ, ವಜ್ರ, ಹವಳ ಹಾಗೂ ನವರತ್ನಗಳಿಂದ ಕೂಡಿದ ಆಭರಣಗಳನ್ನು ದೇವಾಲಯದ ಸುಪರ್ದಿಗೆ ಪಡೆದು ಅಲಂಕಾರ ಮಾಡಲಾಗುವುದು.

ಸರ್ವ ಅಲಂಕಾರ ಭೂಷಿತ ಶ್ರೀಕಂಠೇಶ್ವರ ಮತ್ತು ಪಾರ್ವತಮ್ಮನವರ ಗಿರಿಜಾ ಕಲ್ಯಾಣ ಮಹೋತ್ಸವವು ಸಾವಿರಾರು ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ನೆರವೇರುವ ಮೂಲಕ ಸಂಪನ್ನಗೊಂಡಿತು. ಗಿರಿಜಾ ಕಲ್ಯಾಣ ಅಂಗವಾಗಿ ಜು.7ರ ಮಂಗಳವಾರ, ಬುಧವಾರ ಮತ್ತು ಗುರುವಾರ 3 ದಿನಗಳ ಕಾಲ ಕಪಿಲಾ ನದಿಯ ತೇಲುವ ದೇವಾಲಯದಲ್ಲಿ ತೆಪ್ಪೋತ್ಸವ ಜರುಗಲಿದೆ.

ಜು. 19ರಂದು ಮುಖ್ಯಮಂತ್ರಿ ಸಿದ್ಧರಾಮಯ್ಯರಿಂದ

ಬನ್ನಿಮಂಟಪದ ಕೆಎಸ್‌ಆರ್‌ಟಿಸಿ ಹೊಸ ಬಸ್ ನಿಲ್ದಾಣಕ್ಕೆ ಶಂಕುಸ್ಥಾಪನೆ



ಬನ್ನಿಮಂಟಪದ ಕೆಎಸ್‌ಆರ್‌ಟಿಸಿ ಹೊಸ ಬಸ್ ನಿಲ್ದಾಣದ ನೀಲನಕ್ಷೆ

> ಹೊಸ ಬಸ್ ನಿಲ್ದಾಣಕ್ಕೆ ಬಸ್‌ಗಳು 'ಪ್ರವೇಶ' ಮತ್ತು 'ನಿರ್ಗಮನ'ಕ್ಕೆ ಜಂಬೂ ಸವಾರಿ ರಸ್ತೆಯಾದ ನೆಲ್ಸನ್ ಮಂಡೇಲಾ ರಸ್ತೆಯನ್ನು ಬಳಸದಿರಲು ನಿರ್ಧರಿಸಲಾಗಿದೆ. ಬೆಂಗಳೂರು ಕಡೆಗೆ ತೆರಳುವ ಬಸ್‌ಗಳು ಸಂತ ಫಿಲೋಮಿನಾ ಕಾಲೇಜ್ ಎದುರಿನ ಹಾಗೂ ಪಂಜಿನ ಕವಾಯತು ಮೈದಾನದ ಹಿಂಭಾಗದ ರಸ್ತೆ ಮೂಲಕ ಬಸ್ ನಿಲ್ದಾಣದಿಂದ ನಿರ್ಗಮಿಸುವುದು ಹಾಗೂ ಬೆಂಗಳೂರು ಕಡೆಯಿಂದ ಬರುವ ಬಸ್‌ಗಳು ಜೆಎಸ್‌ಎಸ್ ದಂತ ವೈದ್ಯಕೀಯ ಕಾಲೇಜು ಬಳಿಯ ಶಿವರಾತ್ರೀಶ್ವರನಗರ ರಸ್ತೆ ಮೂಲಕ ಜೋಡಿ ತೆಂಗಿನ ಮರ ರುದ್ರಭೂಮಿಯ ಎದುರು ಬಸ್ ನಿಲ್ದಾಣವನ್ನು ಪ್ರವೇಶಿಸುವ ವ್ಯವಸ್ಥೆ ಕಲ್ಪಿಸುವುದು ಎಂದು ಕೆಎಸ್‌ಆರ್‌ಟಿಸಿಯಿಂದ ನಾವು ಚಿಂತನೆ ನಡೆಸಿದ್ದೇವೆ. ಆದರೆ, ಅದುವೇ ಅಂತಿಮವಲ್ಲ. ಪೊಲೀಸ್ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳೊಂದಿಗೆ ಚರ್ಚಿಸಿದ ಬಳಿಕ ಹೊಸ ಬಸ್ ನಿಲ್ದಾಣದ 'ಪ್ರವೇಶ' ಮತ್ತು 'ನಿರ್ಗಮನ'ದ ರಸ್ತೆಯನ್ನು ಅಂತಿಮಗೊಳಿಸಲಾಗುವುದು.
> - ಶ್ರೀನಿವಾಸ್, ಕೆಎಸ್‌ಆರ್‌ಟಿಸಿ ಗ್ರಾಮಾಂತರ ವಿಭಾಗೀಯ ನಿಯಂತ್ರಕರು.

ಮೈಸೂರು, ಜು. 4(ಆರ್‌ಕೆ)– ಪರ–ವಿರೋಧದ ನಡುವೆಯೂ ಮೈಸೂರಿನ ಬನ್ನಿಮಂಟಪದಲ್ಲಿ ಉದ್ದೇಶಿತ ಹೊಸ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣ ನಿರ್ಮಾಣಕ್ಕೆ ಜುಲೈ 19ರಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಶಂಕುಸ್ಥಾಪನೆ ನೆರವೇರಿಸುವರು.

ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಬೆಂಗಳೂರು–ನೀಲಗಿರಿ ರಸ್ತೆಯ ಕೆಎಸ್‌ಆರ್‌ಟಿಸಿ ಗ್ರಾಮಾಂತರ ಬಸ್ ನಿಲ್ದಾಣವನ್ನು ಬನ್ನಿಮಂಟಪ ಬಸ್ ಡಿಪೋ ಆವರಣದಲ್ಲಿ ಹೊಸದಾಗಿ ನಿರ್ಮಿಸಲಿರುವ ಬಸ್ ನಿಲ್ದಾಣಕ್ಕೆ ಸ್ಥಳಾಂತರಿಸಬೇಕೆಂಬ ಸಾರಿಗೆ ಸಂಸ್ಥೆ ಪ್ರಸ್ತಾವನೆಗೆ ಸ್ಥಳೀಯ ವ್ಯಾಪಾರಸ್ಥರು, ಹೋಟೆಲು ಉದ್ಯಮಿಗಳು ಹಾಗೂ ಕೆಲ ಸಂಘ–ಸಂಸ್ಥೆಗಳು ತೀವ್ರ ವಿರೋಧ ವ್ಯಕ್ತಪಡಿಸಿ, ಪ್ರತಿಭಟನೆ ಮಾಡಿ ಮುಖ್ಯಮಂತ್ರಿಗಳಿಗೆ ಮನವಿ ಪತ್ರವನ್ನು ಸಲ್ಲಿಸಿದ್ದವು.

ನಗರದ ಮಧ್ಯಭಾಗದಲ್ಲಿರುವ ಸಬರ್ಬನ್ ಬಸ್ ನಿಲ್ದಾಣ ಕಿರಿದಾಗಿದ್ದು, ರಾಜ್ಯ ಹಾಗೂ ಹೊರ ರಾಜ್ಯಗಳಿಗೆ ಸಂಪರ್ಕ ಸಾಧಿಸುತ್ತಿರುವ ಸಾರಿಗೆ ಬಸ್ಸುಗಳ ಸಂಖ್ಯೆ ಪ್ರತೀವರ್ಷ ಹೆಚ್ಚಾಗುತ್ತಿರುವುದರಿಂದ ಅಲ್ಲಿ ಸಂಚಾರ ದಟ್ಟಣೆಯಿಂದಾಗಿ ಆಗಿಂದಾಗ್ಗೆ ಟ್ರಾಫಿಕ್ ಜಾಮ್ ಆಗಿ ತೊಂದರೆಯಾಗುತ್ತಿರುವುದಲ್ಲದೇ, ಬಸ್‌ಗಳ ನಿಲುಗಡೆಗೆ ಸ್ಥಳವಿಲ್ಲದೆ ರಸ್ತೆ ಬದಿ ನಿಲ್ಲಿಸುವಂತಾಗಿದೆ ಎಂದು ಕೆಎಸ್‌ಆರ್‌ಟಿಸಿ ಮೈಸೂರು ಗ್ರಾಮಾಂತರ ವಿಭಾಗದ ಅಧಿಕಾರಿಗಳು ಸರ್ಕಾರದ ಗಮನ ಸೆಳೆದಿದ್ದರು.

ಬನ್ನಿಮಂಟಪದಲ್ಲಿರುವ ಕೆಎಸ್‌ಆರ್‌ಟಿಸಿ ಬಸ್ ಡಿಪೋದಲ್ಲಿ ಸಾಕಷ್ಟು ಜಾಗವಿರುವುದರಿಂದ ಅಲ್ಲಿ ಹೊಸದಾಗಿ ಸುಸಜ್ಜಿತ ಬಸ್ ನಿಲ್ದಾಣ ನಿರ್ಮಾಣ ಮಾಡಿದಲ್ಲಿ ಬೆಂಗಳೂರು, ತುಮಕೂರು, ಶಿವಮೊಗ್ಗ, ಹಾಸನ, ಮಂಗಳೂರು, ಹುಬ್ಬಳ್ಳಿ–ಧಾರವಾಡ, ಬೆಳಗಾವಿ, ಕಲಬುರಗಿ ಸೇರಿದಂತೆ ದೂರದ ಜಿಲ್ಲೆಗಳಿಗೆ ಹೋಗುವ ಬಸ್‌ಗಳನ್ನು ಹೊಸ ನಿಲ್ದಾಣಕ್ಕೆ ಸ್ಥಳಾಂತರಿಸಿದರೆ ಪ್ರಯಾಣಿಕರಿಗೂ ಅನುಕೂಲವಾಗುತ್ತದೆ ಎಂಬ ಮಾಹಿತಿಯೊಂದಿಗೆ ಸರ್ಕಾರಕ್ಕೆ ಅಧಿಕಾರಿಗಳು ಪ್ರಸ್ತಾವನೆ ಸಲ್ಲಿಸಿದ್ದರು.

ಪ್ರಸ್ತಾವನೆ ಮತ್ತು ವಿರೋಧದ ಅರ್ಜಿಗಳನ್ನು ಪರಿಶೀಲಿಸಿದ ಸರ್ಕಾರ, ಸಾರ್ವಜನಿಕರ ಹಿತದೃಷ್ಟಿಯಿಂದ ಈಗಿರುವ ಸಬರ್ಬನ್ ಬಸ್ ನಿಲ್ದಾಣವನ್ನು ಬನ್ನಿಮಂಟಪಕ್ಕೆ ಸ್ಥಳಾಂತರಿಸಲು ಸಮ್ಮತಿಸಿತ್ತು. ಈ ಹಿನ್ನೆಲೆಯಲ್ಲಿ ಅಧಿಕಾರಿಗಳು ಹೊಸ ಬಸ್ ನಿಲ್ದಾಣ ನಿರ್ಮಾಣಕ್ಕೆ ಮುಂದಾಗಿದ್ದು, ಶಿಲಾನ್ಯಾಸಕ್ಕೆ ಸರ್ವ ರೀತಿಯಲ್ಲಿ ಸಿದ್ಧತೆ ಮಾಡಿಕೊಂಡಿದ್ದಾರೆ.

ಜುಲೈ 19ರಂದು ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ನಡೆಯಲಿರುವ ಹಲವು ಅಭಿವೃದ್ಧಿ ಯೋಜನೆಗಳಿಗೆ ಶಿಲಾನ್ಯಾಸ ಮತ್ತು ಉದ್ಘಾಟನಾ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಬನ್ನಿಮಂಟಪದ 14 ಎಕರೆ ಪ್ರದೇಶದಲ್ಲಿ ನಿರ್ಮಿಸಲುದ್ದೇಶಿಸಿರುವ 120 ಕೋಟಿ ರೂ. ಅಂದಾಜು ವೆಚ್ಚದ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣಕ್ಕೆ ಶಂಕುಸ್ಥಾಪನೆ ನೆರವೇರಿಸುವರು. ಸೆಲ್ಲಾರ್, ನೆಲಮಹಡಿ ಮತ್ತು ಮೊದಲ ಮಹಡಿ ಕಟ್ಟಡದಲ್ಲಿ ಏಕ ಕಾಲದಲ್ಲಿ 75 ಬಸ್‌ಗಳು ನಿಲ್ಲಬಹುದಾಗಿದೆ. ಎಲೆಕ್ಟ್ರಿಕ್ ಬಸ್‌ಗಳಿಗೆ ಚಾರ್ಜಿಂಗ್ ಸ್ಟೇಷನ್, ಪ್ರಯಾಣಿಕರ ತಂಗುದಾಣ, ಶೌಚಾಲಯಗಳು ಟಿಕೆಟ್ ಮುಂಗಡ ಕಾಯ್ದಿರಿಸುವ ಕೌಂಟರ್‌ಗಳು, ವಿಚಾರಣಾ ಕೇಂದ್ರ, ಪೊಲೀಸ್ ಔಟ್‌ಪೋಸ್ಟ್, ಮಕ್ಕಳಿಗೆ ಹಾಲುಣಿಸುವ ಕೊಠಡಿ ಸೇರಿದಂತೆ ಹೊಸ ಬಸ್ ನಿಲ್ದಾಣದಲ್ಲಿ ಪ್ರಯಾಣಿಕ ಸ್ನೇಹಿ ಸೌಲಭ್ಯಗಳನ್ನು ಒದಗಿಸಲಾಗುವುದು.

ಚೆಸ್ ವಿಶ್ವಕಪ್‌ನಲ್ಲಿ ಪದಕ



ಜಾರ್ಜಿಯಾದ ಬಟುಮಿ ನಗರದಲ್ಲಿ ನಡೆದ ಚೆಸ್ ವಿಶ್ವಕಪ್ ಪಂದ್ಯಾವಳಿಯ 12 ವರ್ಷದೊಳಗಿನ ವಿಭಾಗದಲ್ಲಿ ಭಾರತದ ಪ್ರತೀತಿ ಬಿ. ಪ್ರಥಮ ಸ್ಥಾನ (ಮಧ್ಯದಲ್ಲಿರುವ) ಹಾಗೂ ಆದ್ಯಾ ಗೌಡ (ಎಡಬದಿ) ದ್ವಿತೀಯ ಸ್ಥಾನದೊಂದಿಗೆ ಕ್ರಮವಾಗಿ ಚಿನ್ನ ಹಾಗೂ ಬೆಳ್ಳಿ ಪದಕ ಗಳಿಸಿದ್ದಾರೆ. ತೃತೀಯ ಸ್ಥಾನ ಪಡೆದ ಮಂಗೋಲಿಯಾದ ಇಡರ್ ತ್ಸೆಲ್ಮನ್ ಚಿತ್ರದಲ್ಲಿದ್ದಾಳೆ.

ನಾಳೆ ಜೈನ ಗುರು 108 ಆಚಾರ್ಯ ಪುಣ್ಯ ಸಾಗರ ಮಹಾ ಮುನಿ ಪುರ ಪ್ರವೇಶ

ಮೈಸೂರು, ಜು.4(ಜಿಎ)–ದಿಗಂಬರರ ಜೈನ ಗುರು 108 ಆಚಾರ್ಯ ಪುಣ್ಯ ಸಾಗರ ಮಹಾ ಮುನಿ ಮಹಾರಾಜರು ಚಾತುರ್ಮಾಸ್ಯ ಪ್ರಯುಕ್ತ ಜು.6 ರಂದು ಮಧ್ಯಾಹ್ನ 3ಕ್ಕೆ ಮೈಸೂರು ಪುರ ಪ್ರವೇಶ ಮಾಡಲಿದ್ದಾರೆ ಎಂದು ದಿಗಂಬರ ಜೈನ ಸಮಾಜದ ಅಧ್ಯಕ್ಷ ಎಂ.ಆರ್. ಸುನಿಲ್‌ಕುಮಾರ್ ಜೈನ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ದಿಗಂಬರ ಜೈನ ಸಮಾಜ ಪ್ರತಿ ವರ್ಷ ಸರ್ವ ಸಂಘ ಪರಿತ್ಯಾಗಿ ದಿಗಂಬರ ಮುನಿ ಮಹಾರಾಜರ ಚಾತುರ್ಮಾಸ್ಯ ಆಯೋಜಿಸುತ್ತಿದೆ. ಈ ಹಿನ್ನೆಲೆಯಲ್ಲಿ 108 ಆಚಾರ್ಯ ಪುಣ್ಯ ಸಾಗರ ಮಹಾ ಮುನಿ ಮಹಾರಾಜರು ಮೈಸೂರಿಗೆ ಆಗಮಿಸುತ್ತಿದ್ದಾರೆ. ಅಂದು ಮೈಸೂರು–ಬೆಂಗಳೂರು ರಸ್ತೆಯಲ್ಲಿರುವ ಸಿಪಿಸಿ ಪಾಲಿಟೆಕ್ನಿಕ್ ಬಳಿ ಪಾದಪೂಜೆ ನೆರವೇರಿಸಿದ ನಂತರ ಮಂಗಳವಾದ್ಯಗಳೊಂದಿಗೆ ಭವ್ಯ ಮೆರವಣಿಗೆಯಲ್ಲಿ ಅಶೋಕ ರಸ್ತೆ ಅರಮನೆ ಮುಂಭಾಗ, ಕೆ.ಆರ್. ವೃತ್ತ ಮೂಲಕ ಬನುಮಯ್ಯ ಕಾಲೇಜು ಪಕ್ಕದ ಶಾಂತಿನಾಥ ಬಸದಿಗೆ ಕರೆದೊಯ್ಯಲಾಗುವುದು ಎಂದರು. ಸುದ್ದಿಗೋಷ್ಠಿಯಲ್ಲಿ ಪದ್ಮಶ್ರೀ ಮಹಿಳಾ ಸಮಾಜದ ಅಧ್ಯಕ್ಷೆ ಪ್ರೀತಿ ಶುಭಚಂದ್ರ ವಿನೋದ್ ಬಾಕ್ಲಿವಾಲ್, ಲಕ್ಷ್ಮೀಶ್ ಬಾಬು, ಸುಮ ದಾಯಕರ ಉಪಸ್ಥಿತರಿದ್ದರು.

ಚಾಮುಂಡೇಶ್ವರಿ ವರ್ಧಂತಿ ಮಹೋತ್ಸವ



ಎರಡನೇ ಆಷಾಢ ಶುಕ್ರವಾರದ ಅಂಗವಾಗಿ ಊಟಿ ರಸ್ತೆಯ ಗಣಪತಿ ಆಶ್ರಮದ ಮುಂಭಾಗ ಚಾಮುಂಡೇಶ್ವರಿ ಅಮ್ಮನವರ ಪೂಜೆಯನ್ನು ನೆರವೇರಿಸಲಾಯಿತು. ಈ ವೇಳೆ ರಾಜ್ಯ ಶಿವಾರ್ಚಕರ ಸಂಘದ ಗೌರವಾಧ್ಯಕ್ಷ ಅಂಬಳೆ ಶಿವಣ್ಣ, ಮುಖಂಡರಾದ ಎಸ್.ಆರ್.ಶಿವಕುಮಾರ್, ಎಚ್.ವಿ.ಭಾಸ್ಕರ್, ಸಿ.ಸಂದೀಪ್, ಪ್ರಭುಶಂಕರ್, ಬಸವರಾಜು, ರಾಘು ಅರಸ್, ಮೋಹನ್, ಎಸ್.ನಾಗರಾಜ್ ಹಾಜರಿದ್ದರು.

ಮೈಸೂರು ಕ್ಲಸ್ಟರ್ ವ್ಯಾಪ್ತಿಯಲ್ಲಿ 47 ಹೊಸ ಕಂಪನಿಗಳಿಂದ ಹೂಡಿಕೆ

ಐಟಿ-ಬಿಟಿ, ತಂತ್ರಜ್ಞಾನ ಸಚಿವ ಪ್ರಿಯಾಂಕ್ ಖರ್ಗೆ ಪ್ರಕಟ

ಮೈಸೂರು, ಜು.4(ಆರ್‌ಕೆ)–ಕಳೆದ ಆರ್ಥಿಕ ವರ್ಷದಲ್ಲಿ ಮೈಸೂರು ಕ್ಲಸ್ಟರ್ ವ್ಯಾಪ್ತಿಯ ಮೈಸೂರು, ಮಂಡ್ಯ, ರಾಮನಗರ ಹಾಗೂ ಚಾಮರಾಜನಗರ ಜಿಲ್ಲೆಗಳಲ್ಲಿ 47 ಹೊಸ ಕಂಪನಿಗಳು ಹೂಡಿಕೆ ಮಾಡಿದ್ದು, 4,500 ಮಂದಿಗೆ ನೇರ ಉದ್ಯೋಗ ಸೃಷ್ಟಿಯಾಗಿದೆ ಎಂದು ಎಲೆಕ್ಟ್ರಾನಿಕ್ಸ್ ಐಟಿ–ಬಿಟಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದ್ದಾರೆ.

ಕರ್ನಾಟಕ ಡಿಜಿಟಲ್ ಎಕಾನಮಿ ಮಿಷನ್ (KDEM) ವತಿಯಿಂದ ಮೈಸೂರಿನ ಇನ್‌ಫೋಸಿಸ್ ಕ್ಯಾಂಪಸ್‌ನ ಎಂ.ಸಿ. ಸಭಾಂಗಣದಲ್ಲಿ ಸೋಮವಾರ ಆಯೋಜಿಸಿದ್ದ ಬಿಕೆಟೆಕ್ ಷೋ ಕಾರ್ಯಕ್ರಮದಲ್ಲಿ ವರ್ಚುವಲ್ ಮೂಲಕ ಪಾಲ್ಗೊಂಡು ಮಾತನಾಡುತ್ತಿದ್ದ ಅವರು, ಐಟಿ–ಬಿಟಿಯಲ್ಲದೇ ನವೋದ್ಯಮಗಳ ಸ್ಥಾಪನೆಗೆ ಅಲ್ಲಿ ಪೂರಕ ವಾತಾವರಣವಿರುವುದರಿಂದ 450 ಹೊಸ ಉದ್ಯಮ (ಸ್ಟಾರ್ಟ್ ಅಪ್)ಗಳು ಕಾರ್ಯಾಚರಣೆ ಆರಂಭಿಸಿವೆ ಎಂದ ಅವರು, ಡೀಪ್ ಟೆಕ್, ಸೇವಾಧಾರಿತ ಕಂಪನಿಗಳು ಉದ್ಯೋಗ ಒದಗಿಸಿವೆ ಎಂದು ತಿಳಿಸಿದರು.

ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ರಾಜ್ಯದಲ್ಲೇ 2ನೇ ಸ್ಥಾನದಲ್ಲಿರುವ ಮೈಸೂರು ಕ್ಲಸ್ಟರ್ ವಲಯವು ಕಳೆದ ವರ್ಷ 5,700 ಕೋಟಿ ರೂ. ವಹಿವಾಟು ನಡೆಸಿವೆ. ಆದ್ದರಿಂದ ಸರ್ಕಾರವು ಈ ಕ್ಲಸ್ಟರ್‌ನ ಸಮಗ್ರ ಅಭಿವೃದ್ಧಿಗೆ ಒತ್ತು ನೀಡಲಿದೆ. ಎಂದ ಸಚಿವರು, ಇನ್‌ಫೋಸಿಸ್, ವಿಪ್ರೋ, ಐಬಿಎಂ, ಹೆಚ್‌ಪಿ ಸೇರಿದಂತೆ ಹಲವು ದೈತ್ಯ ಕಂಪನಿಗಳು ತಮ್ಮ ಸಂಶೋಧನೆ ಹಾಗೂ ವಿಸ್ತರಣೆಗೆ ಮೈಸೂರನ್ನು ಆಯ್ಕೆ ಮಾಡಿಕೊಂಡಿವೆ ಎಂದರು.

ಬೆಂಗಳೂರು ನಂತರ ತಂತ್ರಜ್ಞಾನ ಕಂಪನಿಗಳು ಉದ್ಯಮ ಸ್ಥಾಪಿಸಲು ಮೈಸೂರು, ಮಂಗಳೂರು, ಧಾರವಾಡ ಹಾಗೂ ಕಲಬುರಗಿಯಲ್ಲಿ ಪೂರಕ ವಾತಾವರಣ ನಿರ್ಮಿಸಲಾಗುತ್ತಿದೆಯಲ್ಲದೆ, ಮೈಸೂರಿನ ಮಂಡಕಳ್ಳಿ ವಿಮಾನ ನಿಲ್ದಾಣದ ಬಳಿ ಜಾಗತಿಕ ತಾಂತ್ರಿಕ ಕೇಂದ್ರವನ್ನು ಸರ್ಕಾರ ನಿರ್ಮಿಸಲುದ್ದೇಶಿಸಿದೆ ಎಂದು ಅವರು ತಿಳಿಸಿದರು.

ಐಟಿ–ಬಿಟಿ, ತಂತ್ರಜ್ಞಾನ ಇಲಾಖೆ ಕಾರ್ಯದರ್ಶಿ ಏಕರೂಪ ಕೌರ್, ಭಾರತೀಯ ಮಾಹಿತಿ ತಂತ್ರಜ್ಞಾನ ಪಾರ್ಕ್ ನಿರ್ದೇಶಕ ಸಂಜಯ್ ತ್ಯಾಗಿ, ಕೆಟಿಇಎಂ ಅಧ್ಯಕ್ಷ ಬಿ.ವಿ.ನಾಯ್ಡು, ಸಿಇಓ ಸಂಜೀವ ಗುಪ್ತಾ, ಮೈಸೂರು ಕ್ಲಸ್ಟರ್ ಮುಖ್ಯಸ್ಥ ಜಿ.ಎನ್.ಸುಧೀರ್, ಎಕ್ಸಲ್ ಸಾಫ್ಟ್‌ವೇರ್ ಮುಖ್ಯಸ್ಥ ಸುಧನ್ವ ಧನಂಜಯ, ಇನ್‌ಫೋಸಿಸ್ ಉಪಾಧ್ಯಕ್ಷ ವಿನಾಯಕ ಹೆಗಡೆ, ರಂಗ ಸನ್ಸ್ ಏರೋಸ್ಪೇಸ್ ವ್ಯವಸ್ಥಾಪಕ ನಿರ್ದೇಶಕ ಪವನ್ ರಂಗ, ಟಿಐಇ ಮೈಸೂರು ಅಧ್ಯಕ್ಷ ಭಾಸ್ಕರ್ ಕಳಲೆ ಹಾಗೂ ಇತರರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ನಾಳೆ ಮೈಸೂರಲ್ಲಿ ಸಿದ್ದಲಿಂಗೇಶ್ವರಸ್ವಾಮಿ ದೇವಾಲಯ ನಿರ್ಮಾಣಕ್ಕೆ ಶಿಲಾನ್ಯಾಸ

ಮೈಸೂರು, ಜು.4–ಶ್ರೀ ಸಿದ್ದಲಿಂಗೇಶ್ವರ ಸ್ವಾಮಿ ಸಮಿತಿ ಟ್ರಸ್ಟ್ ವತಿಯಿಂದ ಶ್ರೀ ಕ್ಷೇತ್ರ ಎಡೆಯೂರಿನ ಮಾದರಿಯಲ್ಲಿ ಮೈಸೂರಿನ ಜೆ.ಪಿ.ನಗರದಲ್ಲಿ ಶ್ರೀ ಸಿದ್ದಲಿಂಗೇಶ್ವರ ಸ್ವಾಮಿ ದೇವಾಲಯದ ನೂತನ ಕಟ್ಟಡದ ಶಿಲಾನ್ಯಾಸ ಕಾರ್ಯಕ್ರಮ ಜು.6 ರಂದು ಬೆಳಗ್ಗೆ 10 ಗಂಟೆಗೆ ನಡೆಯಲಿದೆ ಎಂದು ಟ್ರಸ್ಟ್‌ನ ನಿರ್ದೇಶಕರೂ ಆದ ನಗರ ಪಾಲಿಕೆ ಮಾಜಿ ಸದಸ್ಯ ಎಂ.ಪ್ರದೀಪ್ ಕುಮಾರ್ ತಿಳಿಸಿದ್ದಾರೆ.



ಎಂ.ಪ್ರದೀಪ್

ಜೆ.ಪಿ.ನಗರದ ಸಿ–ಬ್ಲಾಕ್ 1ನೇ ಹಂತ, ಪೊಲೀಸ್ ಠಾಣೆ ಹಿಂಭಾಗದ ಪುಣ್ಯ ಸ್ಥಳದಲ್ಲಿ ಈ ಕಾರ್ಯಕ್ರಮ ನಡೆಯಲಿದ್ದು, ಕಾರ್ಯಕ್ರಮಕ್ಕೆ ಮೈಸೂರಿನ ಎಲ್ಲಾ ವೀರಶೈವ ಲಿಂಗಾಯಿತ ಸಂಘ–ಸಂಸ್ಥೆಗಳು, ಅಖಿಲ ಭಾರತ ವೀರಶೈವ ಲಿಂಗಾಯಿತ ಮಹಾಸಭಾ ಜಿಲ್ಲಾ ಘಟಕ ಸಹಯೋಗ ನೀಡುತ್ತಿದೆ ಎಂದು ತಿಳಿಸಿದರು.

ಈ ನಿವೇಶನದಲ್ಲಿ ಶ್ರೀ ಸಿದ್ದಲಿಂಗೇಶ್ವರ ಸ್ವಾಮಿಯವರ ಭವ್ಯ ದೇವಸ್ಥಾನ, ಬಡ ವಿದ್ಯಾರ್ಥಿಗಳ ಉಚಿತ ವಿದ್ಯಾರ್ಥಿನಿಲಯ ಹಾಗೂ ಪ್ರಸಾದ ನಿಲಯವನ್ನು ನಿರ್ಮಾಣ ಮಾಡಬೇಕೆಂಬುದು ಭಕ್ತಾದಿಗಳ ಇಚ್ಛೆಯಾಗಿದ್ದು, ದೇವಾಲಯವನ್ನು ಸಂಪೂರ್ಣವಾಗಿ ವಿಶಿಷ್ಟತೆಯಿಂದ ಶಿಲೆಯಿಂದಲೇ ಎಡೆಯೂರಿನ ದೇವಾಲಯದ ಮಾದರಿಯಲ್ಲಿ ನಿರ್ಮಾಣ ಮಾಡುತ್ತಿರುವುದಾಗಿ ತಿಳಿಸಿದ್ದಾರೆ.

ಪರಮ ಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ದಿವ್ಯ ಸಾನಿಧ್ಯದಲ್ಲಿ, ಶ್ರೀ ತ್ರಿನೇತ್ರ ಮಹಾಂತ ಶಿವಯೋಗಿ ಸ್ವಾಮಿಗಳ ಆಶೀರ್ವಾದಗಳೊಂದಿಗೆ ಅರಣ್ಯ ಸಚಿವ ಈಶ್ವರ್ ಖಂಡ್ರೆ ಉಪಸ್ಥಿತಿಯಲ್ಲಿ, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಶಿಲಾನ್ಯಾಸ ನೆರವೇರಿಸುವರು. ಜಿಲ್ಲಾ ಉಸ್ತುವಾರಿ ಸಚಿವ ಹೆಚ್.ಸಿ.ಮಹದೇವಪ್ಪ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಶಾಸಕರಾದ ಜಿ.ಟಿ.ದೇವೇಗೌಡ, ಹೆಚ್.ಎಂ.ಗಣೇಶ್ ಪ್ರಸಾದ್, ಕೆ.ಹರೀಶ್ ಗೌಡ, ಟ್ರಸ್ಟ್‌ನ ಗೌರವಾಧ್ಯಕ್ಷ ಎಸ್.ಸಿ. ಅಶೋಕ್, ಟ್ರಸ್ಟ್‌ನ ಅಧ್ಯಕ್ಷ ಚಂದ್ರಶೇಖರ್ ಶೆಟ್ಟಿ ಮತ್ತು ಸಮಾಜದ ಎಲ್ಲಾ ಮುಖಂಡರು ಉಪಸ್ಥಿತರಿರುತ್ತಾರೆ ಎಂದು ಅವರು ತಿಳಿಸಿದ್ದಾರೆ.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಫಿನಿಕ್ಸ್ (ತ) + ಮಾರ್ಗನ್ (ತ)	2+2 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಮಾದೇವ (ಕ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಸಿತಾರೆ ಜಮೀನ್ ಪರ್ (ಹಿಂ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಕುಲದಲ್ಲಿ ಕೀಳಾವುದೋ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಮಾದೇವ (ಕ)	4 ಪ್ರದರ್ಶನಗಳು
ರಾಜಕಮಲ್	
3ಬಿಹೆಚ್‌ಕೆ (ತೆ)	4 ಪ್ರದರ್ಶನಗಳು
ಸಂಗಂ	
ಪೆನ್‌ಡ್ರೈವ್ (ಕ)	4 ಪ್ರದರ್ಶನಗಳು
ಲಿಡೋ	
ಕುಬೇರ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಭಗೀರಥ (ಕ) + ನವಗ್ರಹ (ಕ)	1+3 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	28 ಇಯರ್ಸ್ ಲೇಟರ್ (ಇಂ): ಬೆ.10.40ಕ್ಕೆ, ರಾ.7.55ಕ್ಕೆ, ಡಿಎನ್‌ಎ (ತ): ಮ.1.10ಕ್ಕೆ, ಕುಬೇರಾ (ತೆ): ಸಂ.4.05ಕ್ಕೆ, ಸಿತಾರೆ ಜಮೀನ್ ಪರ್ (ಹಿಂ): ರಾ.10.25ಕ್ಕೆ.
ಸ್ಕ್ರೀನ್ 2	ಇಲಿಯೋ (3ಡಿ)(ಇಂ): ಬೆ.11.30ಕ್ಕೆ, ಮ.1.45ಕ್ಕೆ, ಸಿತಾರೆ ಜಮೀನ್ ಪರ್ (ಹಿಂ): ಸಂ.4ಕ್ಕೆ, ರಾ.7.10ಕ್ಕೆ, ಯುನೈಟೆಡ್ ಕಿಂಗ್‌ಡಮ್ ಆಫ್ ಕೇರಳ (ಮ): ರಾ.10.20ಕ್ಕೆ.
ಸ್ಕ್ರೀನ್ 3	ಮಾದೇವ (ಕ): ಬೆ.10.30ಕ್ಕೆ, ರಾ.7.10ಕ್ಕೆ, ಮಾತೊಂದ ಹೇಳುವೆ (ಕ): ಮ.1.15ಕ್ಕೆ, 28 ಇಯರ್ಸ್ ಲೇಟರ್ (ಇಂ): ಸಂ.4.30ಕ್ಕೆ, ವ್ಯಾಸನಸಮೇತಂ ಬಂಧುಮಿತ್ರ (ಮ): ರಾ.10ಕ್ಕೆ.
ಸ್ಕ್ರೀನ್ 4	ಕುಬೇರಾ (ತೆ): ಬೆ.10.30ಕ್ಕೆ, ಸಂ.6.25ಕ್ಕೆ, ರಾ.10.15ಕ್ಕೆ, ಕುಬೇರಾ (ತ): ಮ.2.20ಕ್ಕೆ.

ಐನಾಕ್ಸ್ ಮೂವೀಸ್
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಎಡಗೈಯೇ ಅಪಘಾತಕ್ಕೆ ಕಾರಣ (ಕ): ಮ.1.45ಕ್ಕೆ, ಸಂ.4.25ಕ್ಕೆ, ಸಂ.6.50ಕ್ಕೆ, ಮಾದೇವ (ಕ): ರಾ.9.15ಕ್ಕೆ.
ಸ್ಕ್ರೀನ್ 2	ಮಾದೇವ (ಕ): ಮ.1.15ಕ್ಕೆ, ಸಂ.4.30ಕ್ಕೆ, ರಾ.7.30ಕ್ಕೆ.
ಸ್ಕ್ರೀನ್ 3	ಯುದ್ಧಕಾಂಡ 2 (ಕ): ಸಂ.6.50ಕ್ಕೆ.
ಸ್ಕ್ರೀನ್ 4	ಹೌಸ್‌ಫುಲ್ 5ಎ (ಹಿಂ): ಮ.1.15ಕ್ಕೆ, ಸಂ.4.30ಕ್ಕೆ, ರಾ.7.44ಕ್ಕೆ.

ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಜನರ ನಂಬಿಕೆ ಕಳೆದುಕೊಂಡ ಸರ್ಕಾರ, ಎಚ್ಚರ ತಪ್ಪಿದ ವಿಪಕ್ಷಗಳು

ಜನಪರ ಶಕ್ತಿಗಳು, ದಲಿತ, ರೈತ ಸಂಘಟನೆಗಳಿಂದ ಹೋರಾಟಕ್ಕೆ ಕರೆ

ಮೈಸೂರು, ಜು.4(ಜಿಎ)–ಕಾಂಗ್ರೆಸ್ ಉತ್ತಮ ಆಡಳಿತ ನೀಡುತ್ತದೆ ಎಂದು ರಾಜ್ಯದ ಜನ ಅಧಿಕಾರಕ್ಕೆ ತಂದರೆ, ಅದು ಜನತೆಯ ನಂಬಿಕೆಗೆ ದ್ರೋಹವೆಸಗುತ್ತಿದೆ. ಮತ್ತೊಂದೆಡೆ ವಿರೋಧ ಪಕ್ಷಗಳು ಸಹಾ ಎಚ್ಚರ ತಪ್ಪಿವೆ. ಹೀಗಾಗಿ ಜನಪರ ಶಕ್ತಿಗಳು, ದಲಿತ, ರೈತ ಸಂಘಟನೆಗಳು ಇದರ ವಿರುದ್ಧ ಹೋರಾಟಕ್ಕೆ ಅಣಿಯಾಗಬೇಕೆಂದು ಜನಸಂಗ್ರಾಮ ಪರಿಷತ್ ಸಂಸ್ಥಾಪಕ ಅಧ್ಯಕ್ಷ ರಾಘವೇಂದ್ರ ಕುಷ್ಟಗಿ ಕರೆ ನೀಡಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬಿಜೆಪಿಯ ಕೋಮುವಾದ, ಭ್ರಷ್ಟಾಚಾರ, ಸ್ವಜನ ಪಕ್ಷಪಾತಗಳ ವಿರುದ್ಧ ಕಳೆದ 2023ರಲ್ಲಿ ಜನತೆ ಆ ಪಕ್ಷವನ್ನು ಸೋಲಿಸಿ ಸಿದ್ದರಾಮಯ್ಯ ನೇತೃತ್ವದ ಸರ್ಕಾರವನ್ನು ಅಧಿಕಾರಕ್ಕೆ ತಂದಿದ್ದಾರೆ. ರಾಜ್ಯದಲ್ಲಿ 50 ಸಾವಿರ ಶಿಕ್ಷಕರ ಹುದ್ದೆ ಖಾಲಿ ಬಿದ್ದಿದೆ. ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶೇ.50ಕ್ಕಿಂತ ಹೆಚ್ಚು ವಿದ್ಯಾರ್ಥಿಗಳು ಅನುತ್ತೀರ್ಣರಾಗುತ್ತಿದ್ದಾರೆ. ಹೀಗಿರುವಾಗ ರಾಜ್ಯ ಸರ್ಕಾರ 6 ಸಾವಿರ ಪ್ರಾಥಮಿಕ ಶಾಲೆಗಳನ್ನು ಮುಚ್ಚುವ ಘನಘೋರ ನಿರ್ಧಾರ ಕೈಗೊಂಡಿದೆ. ಈ ರೀತಿ ಸರ್ಕಾರಕ್ಕೆ ಜನಪರ ಕಾಳಜಿಯೇ ಇಲ್ಲದಿರುವುದು ವಿಪರ್ಯಾಸವಾಗಿದೆ ಎಂದರು.

ಹೆಚ್.ಡಿ. ಕೋಟೆ ತಾಲೂಕಿನ ಕಾವೇರಿ ಉಪ ನದಿಗಳಾದ ಕಬಿನಿ, ತಾರಕ ಮೊದಲಾದವುಗಳ ಜಲಾಶಯಗಳ ಹಿನ್ನೀರಿನಲ್ಲಿ ಜಾಗ ಕಬಳಿಸಿಕೊಂಡು, ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದಲ್ಲಿ ಅರಣ್ಯ ಪ್ರದೇಶ ದುರುಪಯೋಗ ಪಡಿಸಿಕೊಂಡು 100ಕ್ಕೂ ಹೆಚ್ಚು ರೆಸಾರ್ಟ್‌ಗಳು ನಿರ್ಮಾಣವಾದರೂ ಸರ್ಕಾರ ಸುಮ್ಮನಿದೆ. 2 ಸಾವಿರ ಕೋಟಿ ವೆಚ್ಚದಲ್ಲಿ ಮನರಂಜನಾ ಪಾರ್ಕ್ ನಿರ್ಮಿಸಲು ಮುಂದಾಗಿದ್ದಾರೆ. ಆದರೆ ವಿರೋಧ ಪಕ್ಷಗಳು ಕೋಮಾ ಸ್ಥಿತಿಯಲ್ಲಿರುವಂತೆ ವರ್ತಿಸುತ್ತಿವೆ. ಹೀಗಾಗಿ ಜನತೆ ಕೂಡಲೇ ಎಚ್ಚೆತ್ತುಕೊಂಡು ಹೋರಾಟಕ್ಕೆ ಅಣಿಯಾಗಬೇಕೆಂದು ಸಲಹೆ ನೀಡಿದರು.

ಸುದ್ದಿಗೋಷ್ಠಿಯಲ್ಲಿ ರಾಜ್ಯ ಉಪಾಧ್ಯಕ್ಷ ಪಾಲಹಳ್ಳಿ ಪ್ರಸನ್ನ, ಜನಾಂದೋಲನ ಮಹಾಮೈತ್ರಿ ಮುಖಂಡ ಉಗ್ರನರಸಿಂಹೇಗೌಡ, ನಗರ್ಲೆ ಎಂ. ವಿಜಯಕುಮಾರ್ ಉಪಸ್ಥಿತರಿದ್ದರು.

ಸಾರವರ್ಧಿತ ಆಹಾರ ಬಳಕೆ ಕೊರತೆಯಿಂದ ಸಾರ್ವಜನಿಕರ ಆರೋಗ್ಯ, ದೇಶದ ಆರ್ಥಿಕತೆ ಮೇಲೆ ಕೆಟ್ಟ ಪರಿಣಾಮ

ರಾಷ್ಟ್ರೀಯ ಕಾರ್ಯಾಗಾರದಲ್ಲಿ ಡಾ.ಶಶಿಕಿರಣ್ ವಿಷಾಧ



ಮೈಸೂರಿನ ಸಿಎಫ್‌ಟಿಆರ್‌ಐ ವತಿಯಿಂದ ಸಂಸ್ಥೆಯ ಚೆಲುವಾಂಬ ಮ್ಯಾನ್ಸನ್ ಅಸೆಂಬ್ಲಿ ಹಾಲ್‌ನಲ್ಲಿ ಆಯೋಜಿಸಿದ್ದ 'ಸೂಕ್ಷ್ಮ ಪೋಷಕಾಂಶಗಳ ಕೊರತೆಯನ್ನು ನೀಗಿಸಲು ಪ್ರಯತ್ನ ಮತ್ತು ಪ್ರಗತಿ' ಕುರಿತ ರಾಷ್ಟ್ರೀಯ ಕಾರ್ಯಾಗಾರವನ್ನು ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ನ್ಯೂಟ್ರಿಷನ್ ನಿವೃತ್ತ ನಿರ್ದೇಶಕ ಡಾ.ಬಿ. ಶಶಿಕಿರಣ್ ಉದ್ಘಾಟಿಸಿದರು.

ಮೈಸೂರು, ಜು.4(ಜಿಎ)–ದೇಶದಲ್ಲಿ ದುರ್ಬಲ ಹಾಗೂ ಹಿಂದುಳಿದ ವರ್ಗದವರು ಹೆಚ್ಚು ಸಾರವರ್ಧಿತ ಆಹಾರ ಪದಾರ್ಥಗಳನ್ನು ಕೊಂಡು ಬಳಕೆ ಮಾಡುವ ಸಾಮರ್ಥ್ಯ ಹೊಂದಿಲ್ಲ. ಇದು ಸಾರ್ವಜನಿಕ ಆರೋಗ್ಯ ಹಾಗೂ ದೇಶದ ಒಟ್ಟು ಆರ್ಥಿಕತೆ ಮೇಲೆ ಕೆಟ್ಟ ಪರಿಣಾಮ ಉಂಟು ಮಾಡುತ್ತಿದೆ ಎಂದು ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ನ್ಯೂಟ್ರಿಷನ್ ನಿವೃತ್ತ ನಿರ್ದೇಶಕ ಡಾ.ಬಿ. ಶಶಿಕಿರಣ್ ವಿಷಾಧ ವ್ಯಕ್ತಪಡಿಸಿದರು.

ಮೈಸೂರಿನ ಸಿಎಫ್‌ಟಿಆರ್‌ಐ ವತಿಯಿಂದ ಸಂಸ್ಥೆಯ ಚೆಲುವಾಂಬ ಮ್ಯಾನ್ಸನ್ ಅಸೆಂಬ್ಲಿ ಹಾಲ್‌ನಲ್ಲಿ ಆಯೋಜಿಸಿದ್ದ 'ಸೂಕ್ಷ್ಮ ಪೋಷಕಾಂಶಗಳ ಕೊರತೆಯನ್ನು ನೀಗಿಸಲು ಪ್ರಯತ್ನ ಮತ್ತು ಪ್ರಗತಿ' ಕುರಿತ ರಾಷ್ಟ್ರೀಯ ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿದರು.

ಸಾರವರ್ದಿತ ಆಹಾರ ಬಳಕೆ ಮಾಡದೇ ಇರುವುದರಿಂದ ಐರನ್ ಮತ್ತು ಫಾಲಿಕ್ ಆಸಿಡ್ ಕೊರತೆಯಾಗಿ ಸಾವಿರಕ್ಕೆ ಮೂವರಿಗೆ ಹಾಗೂ ದೇಶದಲ್ಲಿ ವರ್ಷಕ್ಕೆ ಎರಡೂವರೆ ಲಕ್ಷ ನವಜಾತ ಶಿಶುಗಳಲ್ಲಿ ನಾನಾ ರೀತಿಯ ಆರೋಗ್ಯ ಸಮಸ್ಯೆ ಕಾಣಿಸಿಕೊಳ್ಳುತ್ತಿವೆ. ಇದರಿಂದ ದೇಶದ ಆರ್ಥಿಕತೆಯಲ್ಲಿ ಪಾಲ್ಗೊಳ್ಳುವ ದುಡಿಯುವ ಜನತೆ ಆರೋಗ್ಯ ಸಮಸ್ಯೆಗೆ ಒಳಗಾಗಿ ಆರ್ಥಿಕತೆ ಕುಂಠಿತವಾಗುತ್ತಿದೆ ಎಂದರು.

ಪ್ರಸ್ತುತ ಯಾರೂ ತಾವು ಸಮತೋಲಿತ ಆಹಾರ ಬಳಕೆ ಮಾಡುತ್ತಿದ್ದೇನೆ ಎಂದು ಹೇಳಲು ಸಾಧ್ಯವಿಲ್ಲ. ಏಕೆಂದರೆ ಆಯಾ ಪ್ರದೇಶಕ್ಕೆ ಅನುಗುಣವಾಗಿ ಬಳಕೆ ಮಾಡುವ ಆಹಾರ ಪದಾರ್ಥಗಳು ಬೇರೆಯಾಗುತ್ತದೆ. ಒಂದು ಭಾಗದಲ್ಲಿ ಅಕ್ಕಿಯನ್ನು ಸಾರವರ್ಧನೆಗೊಳಿಸಿ ಬಳಕೆ ಮಾಡಿದರೆ, ದೇಶದ ಮತ್ತೊಂದು ಭಾಗಲ್ಲಿ ಅದನ್ನು ಬಳಕೆ ಮಾಡುವುದಿಲ್ಲ. ಮಾತ್ರವಲ್ಲದೇ ಸಾರವರ್ದಿತ ಆಹಾರ ಪದಾರ್ಥಗಳ ಬೆಲೆ ಹೆಚ್ಚಾಗಿರುವ ಕಾರಣಕ್ಕೆ ಪ್ರತಿಯೊಬ್ಬರೂ ಇದನ್ನು ಬಳಕೆ ಮಾಡಲು ಸಾಧ್ಯವಾಗುತ್ತಿಲ್ಲ ಎಂದರು.

ಪೋಷಕಾಂಶಗಳ ಕೊರತೆ ನೀಗಿಸಬೇಕಾದರೆ ಎಲ್ಲಾ ಆಹಾರ ಪದಾರ್ಥಗಳೂ ಸಾರ ವರ್ಧನೆಗೊಳ್ಳಬೇಕು. ಆದರೆ ಇದನ್ನು ಎಲ್ಲಾ ಕಂಪನಿಗಳೂ ತಯಾರಿಸಲು ಸಾಧ್ಯವಿಲ್ಲ. ಹಾಗಾಗಿ ಇದರ ಹಿಂದೆ ಅಡಗಿರುವ ವಿಜ್ಞಾನ–ತಂತ್ರಜ್ಞಾನವನ್ನು ಅರಿತು ನಾನಾ ಬದಲಾವಣೆ ತರುವ ಮೂಲಕ ಸಾರವರ್ಧಿತ ಆಹಾರ ಬಳಕೆ ಹೆಚ್ಚಿಸಬೇಕೆಂದು ಸಲಹೆ ನೀಡಿದರು.

ಚಂಡೀಗಢದ ಪಿಜಿಐಎಂಇಆರ್‌ನ ಹೆಮಟಾಲಜಿ ವಿಭಾಗದ ಮುಖ್ಯಸ್ಥೆ ಪ್ರೊ. ರೀನಾ ದಾಸ್ ಮಾತನಾಡಿ, ನಮ್ಮ ದೇಶದಲ್ಲಿ ಅಕ್ಕಿಯನ್ನು ಸ್ವಚ್ಛಗೊಳಿಸುವ ಕ್ರಮ ಸರಿ ಇಲ್ಲ. ಅದನ್ನು ತೊಳೆಯುವಾಗ ಅರ್ಧಕ್ಕೆ ತುಂಡರಿಸಿರುವ ಅಕ್ಕಿ ನೀರಿನ ಮೇಲೆ ತೇಲಿ ಬಂದು ಬೇಡವಾದ ವಸ್ತುಗಳೊಂದಿಗೆ ಭೂಮಿ ಪಾಲಾಗುವ ಸಾಧ್ಯತೆ ಹೆಚ್ಚಾಗಿದೆ ಬದಲಿ ವಿಧಾನದ ಮೂಲಕ ಆಹಾರ ವ್ಯರ್ಥವಾಗುವುದನ್ನು ತಪ್ಪಿಸಬೇಕೆಂದರು.

ಕೇಂದ್ರ ಸರಕಾರದ ತಾಯಿ ಮತ್ತು ಮಕ್ಕಳ ಆರೋಗ್ಯ ವಿಭಾಗದ ನಿವೃತ್ತ ಆಯುಕ್ತ ಡಾ.ಅಜಯ್‌ಕುಮಾರ್ ಖೇರಾ ಮಾತನಾಡಿ, 2030ರವೇಳೆಗೆ ಶೇ.50ರಷ್ಟು ಅನಿಮಿಯಾ ಕಡಿಮೆ ಮಾಡಬೇಕು ಎಂಬ ಗುರಿ ಇದೆ. ಈ ನಿಟ್ಟಿನಲ್ಲಿ ಕಳೆದ 30 ವರ್ಷಗಳಿಂದ ತಾಯಿ ಮತ್ತು ಮಕ್ಕಳಿಗೆ ಐರನ್ ಫಾಲಿಕ್ ಆಸಿಡ್ ಇರುವ ಆಹಾರ ಪದಾರ್ಥಗಳ ವಿತರಣೆ ಸೇರಿದಂತೆ ನಾನಾ ಯೋಜನೆಗಳನ್ನು ಜಾರಿಗೊಳಿಸಲಾಗಿದೆ. ಆದರೆ ಇಂದಿಗೂ ಈ ಕೊರತೆ ನೀಗಿಸಲು ಸಾಧ್ಯವಾಗಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಕಾರ್ಯಕ್ರಮದಲ್ಲಿ ಸಿಎಫ್‌ಟಿಆರ್‌ಐ ನಿರ್ದೇಶಕಿ ಡಾ.ಶ್ರೀದೇವಿ ಅನ್ನಪೂರ್ಣ ಸಿಂಗ್, ಹೊಸದಿಲ್ಲಿಯ ಐಐಟಿಯ ಪ್ರೊ.ಜಿತೇಂದ್ರ ಕೆ.ಸಾದು ಸಿಎಫ್‌ಟಿಆರ್‌ಐನ ಎಫ್‌ಎಸ್ ಎಕ್ಯೂಸಿಎಲ್ ವಿಭಾಗದ ಮುಖ್ಯಸ್ಥ ಡಾ. ಪಿ.ಗಿರಿಧರ್ ಮತ್ತಿತರರು ಉಪಸ್ಥಿತರಿದ್ದರು.

ನಗುವನಹಳ್ಳಿಯಲ್ಲಿ ವೃದ್ಧಾಶ್ರಮ ಸೌಲಭ್ಯ

ಮೈಸೂರು, ಜು. 4– ನಿಮ್ಮ ಪ್ರೀತಿಪಾತ್ರರಿಗೆ ಸುರಕ್ಷಿತ ಮತ್ತು ಕಾಳಜಿಯುಳ್ಳ ವಾತಾವರಣವನ್ನು ನೀವು ಹುಡುಕುತ್ತಿದ್ದೀರಾ? ಹಾಗಾದರೆ ಶ್ರೀರಂಗಪಟ್ಟಣ ತಾಲೂಕಿನ ನಗುವನಹಳ್ಳಿ ಗೇಟ್‌ನಲ್ಲಿರುವ ತೆರೇಸಾ ಡಿ'ಲಿಮಾ ಈವೆಂಟೈಡ್ ಹೋಂಗೆ ಭೇಟಿ ನೀಡಿ, ಇದು ಹಿರಿಯರಿಗೆ ಬೆಚ್ಚಗಿನ ಮತ್ತು ಪೋಷಣೆಯ ವಾತಾವರಣವನ್ನು ಒದಗಿಸುತ್ತದೆ.

ಈ ವೃದ್ಧಾಶ್ರಮವು ವಿಶಾಲವಾದ ವಾಸದ ಕೊಠಡಿಗಳನ್ನು ಹೊಂದಿದೆ. ಪೌಷ್ಟಿಕ ಆಹಾರ, ವೈದ್ಯಕೀಯ ಆರೈಕೆ ಮತ್ತು ಮನರಂಜನಾ ಚಟುವಟಿಕೆಗಳನ್ನು ಒದಗಿಸುತ್ತದೆ ಮತ್ತು ಸೌಲಭ್ಯವನ್ನು ನಿರ್ವಹಿಸಲು ಅನುಭವಿ ಸಿಬ್ಬಂದಿಯನ್ನು ಹೊಂದಿದೆ.

ವಿವರಗಳಿಗಾಗಿ ಮೊಬೈಲ್: 96119–54553 ಅಥವಾ 97419–08513 ಅಥವಾ ಇ–ಮೇಲ್: tresadilima72@gmail.com ಅನ್ನು ಸಂಪರ್ಕಿಸಿ.



ಹಸಿರು ನಮ್ಮ ಉಸಿರು